UNIVERSAL
LIBRARY
OU_200290
UNIVERSAL
LIBRARY

OSMANIA UNIVERSITY LIBRARY

Call No. Accession No.

Author

Title

This book should be returned on or before the date last marked below.

[ಎಲ್ಲ ಹಕ್ಕುಗಳೂ ಗ್ರಂಥಕರ್ತರದು]

೧೯೫೪

**ಬೆಲೆ ಒಂದು ರೂಪಾಯಿ**

ಮೋಹನ್ ಪ್ರೆಸ್

ಎಫ್-೨೮, ಓ. ಟಿ. ಸಿ. ರೋಡ್, ಬೆಂಗಳೂರು ೨

# ಲೇಖಕನ ಕೈಫಿಯತ್ತು

ಇದು ನನ್ನ ಏಳನೆಯ ಹರಟೆಗಳ ಸಂಗ್ರಹ. 'ತಲೆಹರಟೆ'ಯಿಂದ ಆರಂಭವಾದ ಈ ಹಾವಳಿ ಇದೀಗ 'ಮೊಲ್ಲೋಗರ'ದ ವರೆಗೆ ಬಂದು ನಿಂತಿದೆ. ಜನತೆ ಬೇಡವೆಂದು ಕಲ್ಲಿನಿಂದ ಹೊಡೆಯುವವರೆಗೂ ಇದನ್ನು ನಾನು ಬರೆಯುವುದೇ ಸೈ.

ಸಮಗ್ರ ಜೀವನವನ್ನೇ ಅಪಹಾಸ್ಯವೆಂದು ಭಾವಿಸಿರುವ ನನ್ನ ಕಣ್ಣಿಗೆ ಎಲ್ಲವೂ ಸೊಟ್ಟಸೊಟ್ಟಾಗಿ, ಡೊಂಕುಡೊಂಕಾಗಿ ಕಾಣುವುದು ಸ್ವಾಭಾವಿಕ. ಇಲ್ಲಿ ಚಿತ್ರಿತವಾಗಿರುವ ವಿಷಯಗಳು ಆ ರೀತಿ ಇದ್ದರೆ ಅದರ ಮೇಲೆ ನನ್ನ ಹೊಣೆಗಾರಿಕೆ ಇಲ್ಲ. ಸಮಾಜದ ಓರೆಕೋರೆಗಳನ್ನು, ಕಶ್ಮಲ ಕೊಳಚೆಗಳನ್ನು ಶುಚಿಗೊಳಿಸುವ ಅಗಸ ಸಾಹಿತಿ. ಆದರೆ ಅಂಥ ಅಗಸನಾಗಲು ನಾನು ಬಯಸಿಲ್ಲ. ಓರೆಕೋರೆಗಳೆಲ್ಲಿವೆ, ಕಶ್ಮಲ ಕೊಳಚೆ ಎಲ್ಲಿದೆ ಎಂಬುದನ್ನು ತೋರಿಸುವ ಸ್ಯಾನಿಟರಿ ಇನ್‌ಸ್ಪೆಕ್ಟರ್ ಮಾತ್ರ ಆಗಿದ್ದೇನೆ. ಮತ್ತು ಅವನ್ನು ತೋರಿಸುವಾಗ ನಾನು ಹೊಟ್ಟೆ ಹುಣ್ಣಾಗುವಂತೆ ನಕ್ಕಿರುವುದಲ್ಲದೆ, ಆ ಜನರೂ ನಗುವಂತೆ ಮಾಡಲು ಪ್ರಯತ್ನಿಸಿದ್ದೇನೆ. ನನ್ನ ಪ್ರಯತ್ನ ಸಾಫಲ್ಯತೆ ಹೊಂದಿದೆಯೋ ಇಲ್ಲವೋ ಎಂಬುದನ್ನು ಈ ಪುಸ್ತಕವನ್ನು ಕೈಯಲ್ಲಿ ಹಿಡಿದಿರುವ ನೀವು ಹೇಳಬೇಕು.

ಗೆಳೆಯರೂ, ವೃತ್ತಿಬಾಂಧವರೂ, 'ಸಾಹಿತ್ಯ ಮಂದಿರ'ದ ಪ್ರಕಾಶಕರೂ ಆದ ಶ್ರೀ ಹೆಚ್. ಎಸ್. ದೊರೆಸ್ವಾಮಿಯವರು ಈ ಪುಸ್ತಕ ಪ್ರಕಾಶಿಸಲು ಒಪ್ಪಿದುದಕ್ಕೆ ನನ್ನ ಋಣ ಒಪ್ಪಿಸಲೇಬೇಕು.

**ನಾಡಿಗೇರ ಕೃಷ್ಣರಾಯ**

# ಪ್ರಕಾಶಕರ ಸಮಾಧಾನ

ಮಿತ್ರ ಶ್ರೀ ನಾಡಿಗೇರರ ಈ ಹಾಸ್ಯಪೂರಿತ ಲೇಖನಗಳನ್ನು ಪ್ರಕಟಿಸಲು ನನಗೆ ಬಹಳ ಹೆಮ್ಮೆ ಎನಿಸಿದೆ. ಶ್ರೀಯುತರು ಕನ್ನಡ ಸಾಹಿತ್ಯದಲ್ಲಿ ಹೊಸ ಹೆಜ್ಜೆ ತುಳಿದು ಸಾಹಿತಿಗಳ ಪಂಗ್ತಿಯಲ್ಲಿ ಅಗ್ರಸ್ಥಾನವನ್ನು ಸಂಪಾದಿಸಿಕೊಂಡಿದ್ದಾರೆ. ಜನಜೀವನದ ಏಕೆ ತಮ್ಮದೇ ಜೀವನದ ಓರೆಕೋರೆಗಳನ್ನು ಕಂಡು ಹೊಟ್ಟೆ ತುಂಬ ನಕ್ಕು ಇತರರನ್ನೂ ನಗಿಸುವುದು ಇವರ ಕಸಬು. ಆ ಕಸಬನ್ನು ಕಲಾತ್ಮಕವಾಗಿ, ನಾವೀನ್ಯತೆಯಿಂದ ಮಾಡುವುದರಲ್ಲಿ ಶ್ರೀಯುತರದು ತುಂಬ ಪಳಗಿದ ಕೈ. ಇಂತಹ ಒಂದು ಕೃತಿ ನಮ್ಮ ಮಾಲೆಯಲ್ಲಿ ಅರಳಲು ಅವಕಾಶ ಮಾಡಿಕೊಟ್ಟ ಶ್ರೀ ನಾಡಿಗೇರರ ಸಹೃದಯತೆಗೆ ನಾನು ಸರ್ವದಾ ಆಭಾರಿಯಾಗಿದ್ದೇನೆ.

**ಹೆಚ್. ಎಸ್. ದೊರೆಸ್ವಾಮಿ**

# ಪರಿವಿಡಿ


| | | | |
|---|---|---|---|
| ೧. ಲೆಕ್ಕಾಚಾರ | ೧ | ೧೩. ಕುದುರೆ ಜೂಜು | ೫೫ |
| ೨. ಶಿಶು ಸಾಹಿತ್ಯ | ೫ | ೧೪. ಎಗ್ಜಿಬಿಷನ್ ಅನುಭವ | ೬೧ |
| ೩. ಚುನಾವಣಾ ಸಂಘ | ೧೧ | ೧೫. ನಾಯಿ | ೬೫ |
| ೪. ಕನಸೆಲ್ಲ ನನಸಾಗಿದ್ದರೆ.... | ೧೫ | ೧೬. ನಾಮಕರಣ | ೬೯ |
| ೫. ಸಂಗೀತ ಕಚೇರಿಗೆ ಹೋದದ್ದು | ೨೩ | ೧೭. ಅಜ್ಜಿ ಊರಿಗೆ ಬಂದ ದಿನ | ೭೩ |
| ೬. ಭಿತ್ತಿಪತ್ರಿಕೆಗಳು | ೨೭ | ೧೮. ಇದೇನು ಮಹಾ! | ೭೭ |
| ೭. ಕನ್ಯೆ ತೋರಿಸುವುದು | ೩೧ | ೧೯. ಧ್ರುವಚರಿತ್ರೆ ನಾಟಕಕ್ಕೆ ಹೋದದ್ದು | ೮೫ |
| ೮. ಕಳ್ಳಭಟ್ಟಿ ಷರಾಬು ಪತ್ತೆ | ೩೫ | ೨೦. ಸಂಸಾರ ಸುಖ | ೯೦ |
| ೯. ಬೇಸ್ತು | ೩೮ | ೨೧. ಉಡುಗೊರೆ | ೯೯ |
| ೧೦. ಅದೃಷ್ಟ | ೪೨ | ೨೨. ವಿಚಿತ್ರ ಪ್ರಪಂಚ | ೧೦೫ |
| ೧೧. ಆದರದ ಕರೆ! | ೪೬ | ೨೩. ನಿಮ್ಮ ಸಮಸ್ಯೆಗೆ ನಮ್ಮ ಉತ್ತರ | ೧೧೦ |
| ೧೨. ಗಡಿಯಾರ ರಿಪೇರಿ | ೫೦ | ೨೪. ಪುಸ್ತಕ ಕಾಣಿಕೆ | ೧೧೪ |

# ಲೆಕ್ಕಾಚಾರ

ನನ್ನ ಸ್ನೇಹಿತ ಶ್ರೀಕಂಠ ಒಂದು ಸಂಜೆ ಸಿಕ್ಕ. "ಐದು ರೂಪಾಯಿ ಇದ್ದರೆ ಕೊಡು, ಇನ್ನೆಂಟು ದಿನಗಳಲ್ಲಿ ಕೊಡುತ್ತೇನೆ" ಅಂದ. ಶ್ರೀಕಂಠನದು ಯಾವಾಗಲೂ 'ಒನ್ ವೇ ಟ್ರಾಫಿಕ್'. ಅವನ ಬಳಿ ಹಣ ಹೋದರೆ ಅದು ಎಂದೆಂದಿಗೂ ತಿರುಗಿ ಬರುವದಿಲ್ಲ. ಅವನು ನನ್ನ ಸ್ನೇಹಿತನಲ್ಲದೆ ದೂರದ ನಂಟನೂ ಹೌದು. ಕೇವಲ ಐದು ರೂಪಾಯಿಗೆ ಸ್ನೇಹ ಮತ್ತು ನಂಟಸ್ತನ ಕಳೆದುಕೊಳ್ಳುವದಾದರೂ ಹೇಗೆ? ಆದರೆ ಈ ಪಡಿಪಾಟಿನ ದಿನಗಳಲ್ಲಿ ಐದು ರೂಪಾಯಿಯೆಂಬ ಮಹದೈಶ್ವರ್ಯವನ್ನು ಕಳೆದುಕೊಳ್ಳಲು ನಾನು ಸಿದ್ಧನಲ್ಲ. ಅದೇ ಸಂಜೆ ನನಗೆ ಸಂಬಳ ಬಂದಿತ್ತು. ನನ್ನಲ್ಲಿ ಹಣ ಇಲ್ಲ ಅನ್ನುವ ಹಾಗಿಲ್ಲ. ಆದರೂ ಹೇಳಿದೆ: "ನೋಡು ಕಂಟೂ, ನನಗೆ ಬಂದಿರುವ ನೂರಾ ಐವತ್ತು ರೂಪಾಯಿಗೆ ಇನ್ನೂರು ದಾರಿಗಳಿವೆ. ಸಾಲಗಾರರಿಗೆ ಅದನ್ನೆಲ್ಲಾ ಹಂಚಿ ಹಾಕಿದರೆ ನನ್ನಲ್ಲಿ ವಿಷ ತೆಗೆದುಕೊಳ್ಳಲು ಮೂರು ಕಾಸು ಸಹ ಉಳಿಯುವದಿಲ್ಲ. ನಿನಗೆ ಇಲ್ಲ ಅನ್ನಲೂ ಆರೆ, ಕೊಡಲೂ ಆರೆ" ಎಂದು ನಿಜ ಸಂಗತಿಯನ್ನೇ ಹೇಳಿದೆ.

ಅವನೊಂದು ಸಲ ನನ್ನನ್ನು ಆಪಾದ ಮಸ್ತಕ ಪರ್ಯಂತ ನೋಡಿ ಹೇಳಿದ: "ಕಿಟ್ಟಿ, ನೀನು ಯಾವು ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡುತ್ತಿ ಅನ್ನುವುದಕ್ಕೆ ಲೆಕ್ಕ ಇಟ್ಟಿದ್ದೀಯ?" ಅಂತ ಕೇಳಿದ. ಇಲ್ಲವೆನ್ನುವರ್ಥದಲ್ಲಿ ಕೌಲೆ ಬಸವನಂತೆ ತಲೆಹಾಕಿದೆ. ಅವನು ಅನುಕಂಪದೃಷ್ಟಿಯಿಂದ ನನ್ನನ್ನೊಮ್ಮೆ ನೋಡಿ "ನಿಮ್ಮಂಥವರೆಲ್ಲರೂ ಇದೇ ತಪ್ಪು ಮಾಡುವುದು. ಒಂದು ಲೆಕ್ಕದ ಪುಸ್ತಕ ಇಡಬೇಕು. ಹಣ ಬಂದಿದ್ದನ್ನೂ, ಖರ್ಚು ಮಾಡಿದ್ದನ್ನೂ ಬರೆಯುತ್ತ ಹೋಗಬೇಕು. ತಿಂಗಳ ಕೊನೆಯಲ್ಲಿ ಎಲ್ಲವನ್ನೂ ಲೆಕ್ಕಹಾಕಿದಾಗ, ಮಾಡಬಾರದ ಖರ್ಚು ಯಾವುದು, ಯಾವುದನ್ನು ಕಡಿಮೆಮಾಡಬೇಕು – ಮುಂತಾದ ವಿಚಾರಗಳೆಲ್ಲ ಕನ್ನಡಿ ಹಾಗೆ ಗೊತ್ತಾಗುತ್ತವೆ" ಅಂತ ಹೇಳಿ, ತಾನು ೧೯೩೪ನೇ

ಇಸವಿಯಿಂದ ಈ ರೀತಿ ಲೆಕ್ಕ ಇಟ್ಟಿರುವುದನ್ನೂ, ಅದರಿಂದ ತನಗಾಗಿರುವ ಸಹಸ್ರಾರು ಅನುಕೂಲಗಳನ್ನೂ ನನಗೆ ಅರ್ಥವಾಗದ ರೀತಿಯಲ್ಲಿ ವಿವರಿಸಿದ. ಹೇಗೆ ಸರ್ಕಾರದವರು ಬಜ್ಜೆಟ್ (ಮುಂಗಡ ಪತ್ರಿಕೆ) ತಯಾರಿಸುತ್ತಾರೆ. ಮಾರ್ವಾಡಿಗಳು ಬರೀ ಒಂದು ಚೊಂಬು ತೆಗೆದುಕೊಂಡು ನಮ್ಮ ದೇಶಕ್ಕೆ ಬಂದು ಇಲ್ಲಿ ಲಕ್ಷಗಟ್ಟಲೆ ಹೇಗೆ ಸಂಪಾದಿಸುತ್ತಾರೆಂಬುದನ್ನೂ ತಿಳಿಸಿದ. ಉಡುಪಿ ಕಡೆಯವರು ಒಂದು ಪಾಣೀ ಪಂಚೆ, ಒಂದು ಜಾಲರಿ ಸೌಟು ತಂದು ಕುಬೇರರಾಗುವುದನ್ನೂ ಹೇಳಿದ. ಮುಖ್ಯ ಲೆಕ್ಕ ಇರಬೇಕು. ಲೆಕ್ಕ ಇಲ್ಲದ ಮನುಷ್ಯ ಲೆಕ್ಕಾಚಾರಸ್ಥನೇ ಅಲ್ಲ ಅಂತಲೂ ಹೇಳಿದ. ನನಗೂ ಅವನ ತರ್ಕ ಸರಿಯೆಂದು ತೋರಿತು. ನನ್ನ ಸಂಬಳದಲ್ಲಿನ ಐದು ರೂಪಾಯಿ ಅವನ ಜೇಬಿಗೆ ಸೇರಿತು.

ಆ ಸಂಜೆ ನನ್ನ ಹೆಂಡತಿಗೆ, ಶ್ರೀಕಂಠ ಹೇಳಿದ್ದೆಲ್ಲವನ್ನೂ ಗಿಳಿಪಾಠ ಒಪ್ಪಿಸಿದೆ. "ನೋಡಿ, ಅವರು ದೇವರು ಬಂದಹಾಗೆ ಬಂದಿದ್ದರು. ನಿಮಗೆ ಸಾವಿರ ಸಲ ಹೇಳಿದ್ದೇನೆ. ಹಣ ಏನಾಯಿತು, ಹೇಗೆ ಖರ್ಚು ಮಾಡಿದಿರಿ ಎಂಬುದಕ್ಕೆ ಲೆಕ್ಕ ಇಡಿ ಅಂತ ಹೇಳುತ್ತ ಬಂದಿದ್ದೇನೆ. ನೀವೆಲ್ಲಿ ನನ್ನ ಮಾತು ಕೇಳುತ್ತೀರಿ. ಹೋಗಲಿ, ಆ ಪುಣ್ಯಾತ್ಮರ ಮಾತಿಗಾದರೂ ಕಿವಿಗೊಟ್ಟು ಲೆಕ್ಕ ಇಡಿ. ನಮ್ಮ ಬಡತನವೇ ನೀಗಿಹೋಗುತ್ತೆ" ಅಂತ ಹೇಳಿದಳು.

ಸರಿ, ಒಂದು ಲೆಕ್ಕದ ಪುಸ್ತಕವನ್ನು ಆಗಲೇ ತಂದಿದ್ದಾಯಿತು. ಮನೆ ಬಾಡಿಗೆ, ದೀಪ, ನೀರು, ಅಂಗಡಿಗೆ ಕೊಟ್ಟದ್ದು ಎಲ್ಲವನ್ನೂ – ಕಾಸನ್ನು ಸಹ ಬಿಡದೆ ಬರೆದಿದ್ದಾಯಿತು.

ನನ್ನ ಹೆಂಡತಿಗೆ ಎಲ್ಲಿಲ್ಲದ ಉತ್ಸಾಹ. ಇಬ್ಬರೂ ರಾತ್ರಿ ಹನ್ನೊಂದು, ಹನ್ನೆರಡು ಗಂಟೆಯವರೆಗೆ ಕುಳಿತು, ಆ ದಿನ ಯಾವು ಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಿದೆವೋ ಅದನ್ನೆಲ್ಲಾ ಪುಸ್ತಕದಲ್ಲಿ ಬರೆಯುತ್ತಿದ್ದೆವು. ಒಂದೊಂದು ಸಾರಿ ಒಂದಾಣೆಯೋ ಒಂದೂವರೆ ಆಣೆಯೋ ಲೆಕ್ಕ ಸಿಗದೆ ಬೆಳಗಿನಜಾವದ ವರೆಗೂ ಇಬ್ಬರೂ ತಲೆ ಕೆಡಿಸಿಕೊಂಡು ಕೊನೆಗೂ ಕೈತಪ್ಪಿದ ಆ 'ಐಟಂ' ಹುಡುಕಿ ಬರೆಯುತ್ತಿದ್ದೆವು.

ನಾನು ಸೇದುವುದು ಎಲಿಫೆಂಟ್ ಸಿಗರೇಟ್. "ಸಿಗರೇಟಿಗೆ ನಿಮ್ಮದು ಎಷ್ಟೊಂದು ಹಣ ಆಗುತ್ತೆ. ನೀವೇಕೆ ಬೀಡಿ ಸೇದಬಾರದು?" ಅಂತ ಹೇಳಿ

ನಮ್ಮೂರಿನಲ್ಲಿರುವ ಬೀಡಿ ಸೇದುವ ಶ್ರೀಮಂತರ ಪಟ್ಟಿಯನ್ನೇ ಕೊಟ್ಟಳು. ನನಗೆ ಬೀಡಿ ಎಂದರೆ ವಾಂತಿ ಬರುತ್ತೆ. ಆದರೂ ಹರಿಭಾಯ್ ಬಿಳಿದಾರಕ್ಕೆ ಇಳಿದೆ.

ನನಗೆ ಸುಖ ಕೊಡುತ್ತಿದ್ದ ಸಿಗರೇಟಿಗೆ ನನ್ನ ಹೆಂಡತಿ ಕಲ್ಲುಹಾಕಿದ್ದು ನಿಜಕ್ಕೂ ನನಗೆ ವ್ಯಥೆ ಉಂಟುಮಾಡಿತು. ಅವಳು ನಾಲ್ಕಾಣೆ ಕೊಟ್ಟು ಗಾಜಿನ ಬಳೆ ಕೊಂಡಿದ್ದಳು. ಅದರಮೇಲೆ ರಾದ್ಧಾಂತಮಾಡಿ ಅವಳು ಸೀರೆಯ ಸೆರಗನ್ನು ಕಣ್ಣಿಗೆ ಹಚ್ಚುವ ಹಾಗೆ ಮಾಡಿದೆ.

ಈ ಲೆಕ್ಕ ಬರೆಯುವುದು ಆರಂಭವಾದಮೇಲೆ ನನಗೂ ನನ್ನ ಹೆಂಡತಿಗೂ ಮನಸ್ತಾಪಕ್ಕಾರಂಭವಾಯಿತು. ನಾನು ಯಾವುದಕ್ಕಾದರೂ ಒಂದು ಆಣೆ ಖರ್ಚುಮಾಡಿದರೆ ಹೆಡೆ ತುಳಿದ ಸರ್ಪದಂತೆ ಬುಸುಗುಟ್ಟುವಳು. ಮನೆಗೆ ಅತಿಥಿಗಳು ಬಂದರೆ ಲೆಕ್ಕ ಹಾಕುತ್ತಿದ್ದೆವು. ಹಬ್ಬ ಹರಿದಿನಗಳಿಗೂ ಚಕ್ಕರ್ ಹಾಕಿದೆವು. ಹಣ ಹೇಗೆ ಉಳಿಸಬೇಕು – ಎಂಬುದೇ ನಮ್ಮ ಮುಂದಿದ್ದ ಕೊರಿಯಾ ಸಮಸ್ಯೆ.

ತಿಂಗಳು ಕೊನೆ ಬಂದಿತು. ಲೆಕ್ಕ ಮಾಡಲು ಕುಳಿತೆವು. ಹೇಗೆ ಹೇಗೆ ಕೂಡಿದರೂ ಒಂದು ರೂಪಾಯಿ ಹದಿನಾಲ್ಕಾಣೆ ಕಡಿಮೆ ಬರುತ್ತಿತ್ತು. ನನ್ನ ಹೆಂಡತಿ ಅನುಮಾನ ದೃಷ್ಟಿಯಿಂದ ನನ್ನನ್ನೊಮ್ಮೆ ನೋಡಿದಳು. ಅವಳಿಗುತ್ತರ ಕೊಡುವಂತೆ ಅಷ್ಟೇ ಕೆಟ್ಟ ದೃಷ್ಟಿಯಿಂದ ನಾನು ನೋಡಿದೆ. "ಹುಡುಗಾಟ ಸಾಕು. ಹಣ ಏನಾಯಿತು ?" ಅಂತ ಗಟ್ಟಿಯಾಗಿಯೇ ಕೇಳಿದಳು. "ಎಲಾ ತಾಟಕಿ, ಹಣ ಇರುವುದೆಲ್ಲ ನಿನ್ನ ಕೈಯಲ್ಲಿ. ನಾನು ತೆಗೆದುಕೊಂಡೆ ಅಂತ ಹೇಳ್ತೀಯಾ ?" ಅಂತ ಗುಡುಗಿದೆ. "ಟ್ರಂಕಿಗೇನು ಬೀಗ ಇದೆಯೇ, ಬಂಕ ಇದೆಯೇ, ನೀವೇ ಏನೋ ಮಾಡಿ ನನ್ನ ಮೇಲೆ ಹಾಕುತ್ತೀರಾ ?" ಅಂತ ಆರಚಿದಳು. ನಿರಪರಾಧಿಯಾದ ನನ್ನನ್ನು ಬಯ್ದದ್ದು ನಿಜಕ್ಕೂ ಅವಳದು ಮಹಾಪರಾಧ. ನನ್ನ ಕೈಗಳೇನು ಬಾಳೆ ಹಣ್ಣು ತಿನ್ನುತ್ತಿರಲಿಲ್ಲ. ಫಳೀರೆಂದು ಕೆನ್ನೆಗೆ ಬಿಗಿದೆ, "ಹೋ" ಎಂದು ಅಳಲಾರಂಭಿಸಿದಳು.

ಅಷ್ಟುಹೊತ್ತಿಗೆ ಅಕೌಂಟೆಂಟ್ ನರಸಿಂಹಯ್ಯ – ಪಕ್ಕದ ಮನೆಯವನು – ಬಂದ. ಎಲ್ಲ ವಿದ್ಯಮಾನ ತಿಳಿದುಕೊಂಡ. ನಮ್ಮಿಬ್ಬರಿಗೂ ಸಮಾಧಾನವಾಗಿರು

ವಂತೆ ತಿಳಿಸಿದ. "ಸರಿ, ನಾನು ಲೆಕ್ಕ ಸರಿಮಾಡಿಕೊಡುತ್ತೇನೆ. ನೀವು ಸುಮ್ಮ ನಿರಿ" ಅಂತ ಹೇಳಿದ. ಟೋಟಲ್ ಮಾಡಿದ. ಒಂದು ರೂಪಾಯಿ ಹದಿ ನಾಲ್ಕಾಣೆ ಕಡಿಮೆ ಬಂದಿತು. ಹಾಗೇ ಯೋಚಿಸಿ "ಈ ಲೆಕ್ಕದ ಪುಸ್ತಕದ ಬೆಲೆ ಏನು?" ಎಂದು ಕೇಳಿದ. "ಒಂದು ರೂಪಾಯಿ ಹದಿನಾಲ್ಕಾಣೆ" ಅಂತ ನಾವಿಬ್ಬರೂ ಉತ್ತರ ಕೊಟ್ಟೆವು. "ಮತ್ತೆ ಅದನ್ನು ಇದರಲ್ಲಿ ಸೇರಿಸಿಲ್ಲ!"

ಇಬ್ಬರೂ ತಲೆ ತಗ್ಗಿಸಿದೆವು.

ಆ ಲೆಕ್ಕದ ಪುಸ್ತಕವನ್ನು ಕಿಟಕಿಯಿಂದಾಚೆ ಎಸೆದು, ಶ್ರೀಕಂಠನನ್ನು ಹೊಟ್ಟೆ ತುಂಬ ಶಪಿಸಿ, ದೀಪ ಆರಿಸಿ ಸುಖವಾಗಿ ಮಲಗಿದೆವು.

# ಶಿ ಶು ಸಾ ಹಿ ತ್ಯ

ಈಚೆಗೆ ಶಿಶುಸಾಹಿತ್ಯ ಬಹಳ ಹೆಚ್ಚಾಗಿದೆ. ಈ ಲೇಖನ ಅಂಥ ಶಿಶುಸಾಹಿತ್ಯಕ್ಕೆ ಸಂಬಂಧಪಟ್ಟಿದ್ದಲ್ಲ. ಶಿಶುಗಳ ಬಗ್ಗೆ ನನ್ನ ಅನುಭವವನ್ನು ಇಲ್ಲಿ ತೋಡಿಕೊಂಡಿದ್ದೇನೆ ಅಷ್ಟೇ.

ನನ್ನ ಮದುವೆ ಸಮಯದಲ್ಲಿ ನನ್ನ ಹೆಂಡತಿ ವಯಸ್ಸಾದವರಿಗೆಲ್ಲ ನಮಸ್ಕಾರ ಮಾಡಿದಳು. ಎಲ್ಲರೂ 'ಅಷ್ಟಪುತ್ರೀಭವ' ಎಂದು ಹರಸಿದರು. ಅದರಲ್ಲಿ ಯಾರಾದರೊಬ್ಬರ ಹರಕೆ ಕೈಗೂಡಿ ಎಂಟಲ್ಲದಿದ್ದರೆ ಎರಡಾದರೂ ಮಕ್ಕಳಾಗಲೆಂದು ಬಯಸಿದೆ. ನನಗೆ ಮೊದಲಿಂದಲೂ ಮಕ್ಕಳೆಂದರೆ ಬಹಳ ಇಷ್ಟ. ಮುತ್ತಿನಂತಹ ಎರಡು ಗ್ಲಾಕ್ಸೋ ಬೇಬಿಗಳಾಗಲೆಂದು ಹಲವು ದೇವರಿಗೆ ಆಗಲೇ ಹರಕೆ ಹೊತ್ತಿದ್ದೆ.

ಕವಿಗಳು ಸಹ ಮಕ್ಕಳನ್ನು ಕೈಬಿಟ್ಟಿಲ್ಲ. 'ಕುವರಂ ವಂಶಕೆ ಭೂಷಣಂ', 'ಮೀಸೆಯಿಲ್ಲದ ಮುಖವು, ಮಕ್ಕಳಿಲ್ಲದ ಮನೆಯು', 'ಪೂರ್ಣಚಂದ್ರನ ಬೆಳ ದಿಂಗಳು, ಎಳೆಯ ಮಗುವಿನ ನಗೆದಿಂಗಳು' ಎಲ್ಲವೂ ಕಾವ್ಯಮಯವಾಗಿದೆ.

ನನ್ನ ಬಯಕೆ ಪೂರೈಸಿತು. ನನ್ನ ಹೆಂಡತಿ ನನಗೆ ಕೈಕೊಡಲಿಲ್ಲ. ಒಂದರಮೇಲೊಂದರಂತೆ ಎರಡು ಮಕ್ಕಳನ್ನು ಹೆತ್ತು ಫುಲ್‌ಸ್ಟಾಪ್ ಹಾಕಿದಳು. ಮಿತಿ ಸಂತಾನದ ಬಗ್ಗೆ ಮಹಾನಾಯಕರ ಭಾಷಣಗಳನ್ನೋದಿಯೇ ಆಕೆ ಹಾಗೆ ಮಾಡಿರಬೇಕು.

ನಮ್ಮವು ಎರಡೂ ಗಂಡು. ಒಂದಕ್ಕೆ ಮೂರು ವರ್ಷ, ಇನ್ನೊಂದಕ್ಕೆ ಐದು ವರ್ಷ. ದೊಡ್ಡವನ ಹೆಸರು ಶ್ರೀನಾಥ, ಚಿಕ್ಕವನ ಹೆಸರು ತಾರಾನಾಥ. ಶ್ರೀನಾಥ ರಾಜಕಾರಣಿಯಾಗುವನೆಂದು ಆಗಲೇ ನಾನು ತಿಳಿದಿದ್ದೆ. ಅವನ ಜಾತಕ ನೋಡಿಸಿ ಹಾಗೆ ಹೇಳಿದೆನೆಂದು ತಿಳಿಯಬೇಡಿ. ಅವನ ಹುಟ್ಟುಗುಣ ಗಳನ್ನು ನೋಡಿ ಈ ಭವಿಷ್ಯ ನುಡಿದಿದ್ದೇನೆ. ಮೂರುಹೊತ್ತೂ ಯಾರು

ಬೇಡವೆಂದರೂ ಅರಚುತ್ತಿರುತ್ತಾನೆ. · ಅವನು ಏನು ಹೇಳುತ್ತಿದ್ದಾನೆಂಬುದು ಯಾರಿಗೂ ಅರ್ಥವಾಗುವದಿಲ್ಲ. ಏನು ಮಾಡೆಂದರೂ ಅದಕ್ಕೆ ಕಾಸು ಕೇಳುತ್ತಾನೆ.

ಅಪರೂಪಕ್ಕೆ ಹುಟ್ಟಿದ ಮಗು (ಮಕ್ಕಳು ಹುಟ್ಟುವದೆಲ್ಲಾ ಹಾಗೇ) ಎಂದು ನಾವು ತುಂಬ ಪ್ರೀತಿಸಿದೆವು. ಹಿಮಾಲಯ ಪರ್ವತವನ್ನೇ ಅವನು ಕೇಳಿದ್ದರೆ ತಂದುಕೊಡಲು ಸಿದ್ಧರಾಗಿದ್ದೆವು. ಈ ನಮ್ಮ ಮಾನಸಿಕ ದೌರ್ಬಲ್ಯ ಅದು ಹೇಗೋ ಅವನ ಚುರುಕು ಬುದ್ಧಿಗೆ ಅರಿವಾಗಿ ಅದರ ದುರುಪಯೋಗ ಮಾಡಿಕೊಳ್ಳಲಾರಂಭಿಸಿದ. ಮೊದಮೊದಲು ಹಿರಿಯವನು ಬಹಳ ದುಷ್ಟನೆಂದೂ, ಚಿಕ್ಕವನು ಬಹಳ ಒಳ್ಳೆಯವನೆಂದೂ ಹೇಳಿಕೊಳ್ಳುತ್ತಿದ್ದೆವು. ನಮ್ಮ ಮಾತನ್ನು ಸುಳ್ಳುಮಾಡಲೋಸುಗ ಕಿರಿಯವನೂ ಹಿರಿಯವನೊಂದಿಗೆ ಸ್ಪರ್ಧಿಸಿ ಒಂದು ಕೈ ಮೇಲೆನಿಸಿಕೊಂಡಿದ್ದಾನೆ. ಕೆಲವರಿಗೆ ತಮ್ಮ ಮಕ್ಕಳು ಬಹಳ ತುಂಟರೆಂದೂ, ತುಂಬಾ ಗಲಾಟೆ ಮಾಡುತ್ತಾರೆಂದೂ ಹೇಳಿಕೊಳ್ಳಲು ಅದು ಏನೋ ಒಂದು ತರಹೆ ಜಂಭ. ನಮ್ಮ ಪಕ್ಕದ ಮನೆಯಾಕೆ ಒಬ್ಬರಿದ್ದಾರೆ. ಜಿರಲೆಯನ್ನು ಕಂಡರೆ ಮೂರು ಗಾವುದ ದೂರ ಹಾರುವ ತಮ್ಮ ಮಗನ ಸಾಹಸೀ ಕೃತ್ಯಗಳನ್ನು ಹುಬ್ಬುಹಾರಿಸಿ, ಕಣ್ಣು ಕುಣಿಸಿ, ಸೆರಗು ಓರೆಮಾಡಿಕೊಂಡು, ಉಪ್ಪುಕಾರ ಹಚ್ಚಿ, ವಗ್ಗರಣೆ ಹಾಕಿ ಹೇಳುತ್ತಾರೆ. 'ನಮ್ಮ ಹುಡುಗ ತುಂಟಾ ಅಂದರೆ ತುಂಟ. ಮೊನ್ನೆ ತುಂಬಿದ ತಂಬಿಗೆ ಉರುಳಿಸಿದ. ಗೋಧಿ ಹಿಟ್ಟೆನ್ನೆಲ್ಲಾ ಮನೆ ತುಂಬಾ ಬೀರಾಡಿದ್ದ.' ಏನು ಮಹಾ ಸಾಹಸೀ ಕೃತ್ಯಗಳಿವು! ಆ ಹುಡುಗ ತಂಬಿಗೆಯ ಬದಲು ಒಂದು ಹಂಡೆ ನೀರನ್ನು ಉರುಳಿಸಿದ್ದರೆ ಹೌದೆನ್ನ ಬಹುದಾಗಿತ್ತು. ರೇಷನ್ ಷಾಪಿನಿಂದ ತಂದ ಗೋಧಿಯನ್ನು ಬೀರಾಡುವುದರ ಬದಲು, ಒಂದು ಚೀಲ ಗೋಧಿಯನ್ನುರುಳಿಸಿದ್ದರೆ ಹೌದೆನ್ನಬಹುದಾಗಿತ್ತು!

ನಮ್ಮ ಹುಡುಗರ ತುಂಟತನ ನೋಡಿ ನಾನೂ ಮೀಸೆಯ ತುದಿಯಲ್ಲಿ ನಗುತ್ತಿದ್ದೆ. ಕವಿಗಳು ಹೇಳುವ ಹಾಗೆ ಅದೇನೋ ಅವರ್ಣನೀಯ ಮೂಕ ಸಂತೋಷ. ಆದರೆ ಈ ತುಂಟತನದ ಪರಮಾವಧಿ ಮುಟ್ಟಿದೆ. ನಗೆ ಹೊಗೆ ಯಾಯಿತು. ನಂದಗೋಕುಲ ಹುಚ್ಚರಾಸ್ಪತ್ರೆಯಾಯಿತು. 'ದೇವಾ, ಮನೆಗೆ ಹೋಗಬೇಕಲ್ಲಪ್ಪಾ....ಹೋಗುವ ಹೊತ್ತಿಗೆ ಮನೆಯಲ್ಲಿ ಅದೇನು ಅನರ್ಥ

ಪರಂಪರೆಗಳು ನಡೆದಿರುತ್ತವೆಯೋ ಏನೋ ?' ಎಂದುಕೊಂಡೇ ಮನೆಗೆ ಹೋಗುತ್ತೇನೆ. ನನ್ನ ಊಹೆ ಎಂದೂ ಸುಳ್ಳಾಗಿಲ್ಲ. ನೂರು ದೂರುಗಳು ಒಕ್ಕೊರಲಿನಿಂದ ಕಿವಿಯಮೇಲೆ ಬೀಳುತ್ತವೆ. 'ಅವನು ಹಾಗೆ ಮಾಡಿದ, ಇವನು ಹೀಗೆ ಮಾಡಿದ. ಆ ಹುಡುಗನನ್ನು ಹೊಡೆದ, ಮತ್ತೊಬ್ಬನನ್ನು ಕಚ್ಚಿದ.' ಇದರಲ್ಲಿ ಯಾರಿಗೆ ಸಮಾಧಾನ ಹೇಳಬೇಕು !

ದೊಡ್ಡವನ ಗಲಾಟೆ ಹೆಚ್ಚಾಯಿತೆಂದು ನಾನೂ ನನ್ನ ಹೆಂಡತಿಯೂ ಮಸಲತ್ತುಮಾಡಿ, ಅವನನ್ನು ಶಾಲೆಗೆ ಸೇರಿಸಬೇಕೆಂದು ನಿರ್ಧರಿಸಿದೆವು. ಅವನು ಶಾಲೆಯಲ್ಲಿರುವಷ್ಟು ಹೊತ್ತಾದರೂ ಗಲಾಟೆ ಕಡಿಮೆಯಾದೀತೆಂದು ಭಾವಿಸಿದೆವು. ಅಲ್ಲದೆ ಎರಡು ಕೈ ಸೇರಿದರೆ ತಾನೇ ಚಪ್ಪಾಳೆಯಾಗುವುದು. ಒಬ್ಬನು ಶಾಲೆಗೆ ಹೋದರೆ ಇನ್ನೊಬ್ಬನು ಯಾವ ಗಲಾಟೆ ಮಾಡಲೂ ಅವಕಾಶವಿರುವದಿಲ್ಲವೆಂದು ತ್ರಯರಾಶಿ ಲೆಕ್ಕ ಹಾಕಿದೆವು. ನಾವಿರುವ ರಸ್ತೆಗೆ ಎರಡು ಫರ್ಲಾಂಗು ದೂರದಲ್ಲಿ ಒಂದು ಶಿಶುವಿಹಾರ ಇದೆ. ಅಲ್ಲಿಗೆ ನಮ್ಮ ಹುಡುಗನನ್ನು ಸೇರಿಸಬೇಕೆಂದು ನಿರ್ಧರಿಸಿದೆವು. ಶುಭ ಮುಹೂರ್ತದಲ್ಲಿ ಅಕ್ಷರಾಭ್ಯಾಸ ಮಾಡಿಸಿದ್ದಾಯಿತು. ದೊಡ್ಡವನಿಗೆ ಸ್ಲೇಟು ಪುಸ್ತಕಗಳನ್ನು ಕೊಡಿಸಿದ್ದನ್ನು ನೋಡಿ, ಚಿಕ್ಕವನು ತನಗೂ ಸ್ಲೇಟು ಪುಸ್ತಕ ಬೇಕೆಂದು ಹಟ ಹಿಡಿದ. ದೊಡ್ಡ ರಾದ್ಧಾಂತವಾಯಿತು. ಸರಿ, ಮತ್ತೊಂದು ಜೊತೆ ಸ್ಲೇಟು ಪುಸ್ತಕ ತಂದಿದ್ದಾಯಿತು. ಚಿಕ್ಕ ಹುಡುಗ ಅಂತ ಚಿಕ್ಕ ಸ್ಲೇಟು ತಂದೆ. ಅವನಿಗೂ ದೊಡ್ಡ ಸ್ಲೇಟು ತರಬೇಕೆಂದು ರಚ್ಚೆ ಹಿಡಿದ. ಸರಿ, ತಂದಿದ್ದ ಚಿಕ್ಕ ಸ್ಲೇಟನ್ನು ವಾಪಸುಮಾಡಿ ದೊಡ್ಡದೊಂದನ್ನು ತಂದರಾಯಿತು ಅಂತ ಲೆಕ್ಕ ಹಾಕಿದೆ. ಅಷ್ಟರಲ್ಲಿ ಚಿಕ್ಕ ಸ್ಲೇಟು ಒಂದು ನೂರಾ ತೊಂಬತ್ತುನಾಲ್ಕು ಸ್ಲೇಟುಗಳಾಗಿದ್ದವು.

ಶಿಶುವಿಹಾರಕ್ಕೆ ಹುಡುಗನನ್ನು ಕರೆದುಕೊಂಡು ಹೋದೆ. ಅದರ ಮುಖ್ಯಸ್ಥರಾದ ಮಂದಾಕಿನಿಬಾಯಿಯವರು ನಗುವಿನೊಂದಿಗೆ ನಮ್ಮನ್ನು ಸ್ವಾಗತಿಸಿದರು. ಆಗಲೇ ಶ್ರೀನಾಥ ಹೇಳಿದ : "ಇವ್ರು ನೋಡೋಕೆ ಚೆನ್ನಾಗಿಲ್ಲ, ಬೇರೆ ಸ್ಕೂಲಿಗೆ ಹೋಗೋಣ" ಅಂದ. ನನ್ನ ಪುಣ್ಯಕ್ಕೆ ಅವನ ಅಮೃತ ಬಿಂದುಗಳು ಅವರ ಕಿವಿಯಮೇಲೆ ಅಸ್ಪಷ್ಟವಾಗಿ ಬಿದ್ದಿದ್ದವು. "ಏನೋ ಹೇಳುತ್ತಾನಲ್ಲ ಚಿರಂಜೀವಿ...." ಎಂದರವರು. ತಕ್ಷಣವೇ ಪರ್ಸ್ ತೆಗೆದು ಅವನ ಕೈಯ್ಯಲ್ಲಿಟ್ಟು,

ಹಿಂದಿನ ದಿನ ಅವನು ಅಂಗಡಿಯಲ್ಲಿ ನೋಡಿದ್ದ ಪೀಪಿ ಕೊಂಡುಕೊಳ್ಳಲು ಹೇಳಿದೆ. ಮಂದಾಕಿನಿಬಾಯಿಯವರು "ಮಕ್ಕಳಿಗೆ ಹಾಗೆಲ್ಲಾ ಕಾಸು ಕೊಡಬಾರದು. ಸಿಕ್ಕ ಸಿಕ್ಕ ತಿಂಡಿ ತಿಂದು ಆರೋಗ್ಯ ಕೆಡಿಸಿಕೊಳ್ಳುತ್ತವೆ" ಮುಂತಾಗಿ ನನಗೆ ಗೊತ್ತಿರುವ ವಿಷಯುಗಳನ್ನೇ ತಿಳಿಹೇಳಲು ಪ್ರಯತ್ನಿಸಿದರು. ಉತ್ತರ ರೂಪ ವಾಗಿ ಹಲ್ಲುಗಿಂಜಿದೆ.

ಸರಿ, ಮೂರನೇ ದಿನ ಶ್ರೀನಾಥ ಒಂದು ಕಾಗದ ತಂದುಕೊಟ್ಟ. ಅದು ಈರೀತಿ ಇತ್ತು :

ಮಾನ್ಯರೇ,

ನಿಮ್ಮ ಹುಡುಗ ಶಿಶುವಿಹಾರಕ್ಕೆ ತಕ್ಕವನಲ್ಲ, ಯಾವುದಾದರೂ ಪಶುವಿಹಾ ರಕ್ಕೆ ಕಳಿಸಿ. ಶಾಲೆಯ ಗಂಟೆ ಒಡೆದುಹಾಕಿದ. ಹಾಜರಿ ರಿಜಿಸ್ಟರ್ ಹರಿದು ಹಾಕಿದ. ಇವನಿಂದಾಗಿ ಈಗಾಗಲೇ ಮೂರು ಮಕ್ಕಳು ನಮ್ಮ ಶಿಶುವಿಹಾರ ಬಿಟ್ಟವೆ. ಇನ್ನು ಕೆಲವು ಬಿಡಲು ಹವಣಿಸುತ್ತಿವೆಯಂತೆ. ನೀವು ಮುಂಗಡ ಕೊಟ್ಟಿದ್ದ ನಿಮ್ಮ ಹುಡುಗನ ಫೀಜನ್ನು ವಾಪಸು ಕಳಿಸಿದ್ದೇನೆ.

ಇತಿ, ಇತ್ಯಾದಿ
ಮಂದಾಕಿನಿಬಾಯಿ.

ಶ್ರೀನಾಥ ತಟಕ್ಕನೆ ಚಡ್ಡಿ ಜೇಬಿಗೆ ಕೈಹಾಕಿ ಒಂದು ರೂಪಾಯಿ ಹದಿನೈದಾಣೆ ತೆಗೆದುಕೊಟ್ಟ. ಒಂದಾಣೆ ತೆಗೆದುಕೊಂಡನಂತೆ. ಈಗ ಅವನನ್ನು ದನದ ದೊಡ್ಡಿಯಂತಿರುವ ಸರ್ಕಾರಿ ಶಾಲೆಯೊಂದಕ್ಕೆ ಸೇರಿಸಿದ್ದೇನೆ.

ಕನ್ನಡ ಅಕ್ಷರಮಾಲೆಯಲ್ಲಿ ಎಷ್ಟು ಅಕ್ಷರಗಳಿವೆಯೋ ಅಷ್ಟು ಬಾಲ ಬೋಧೆಗಳನ್ನು ಕೊಡಿಸಿದ್ದೇನೆ. ಅವನಿಗೆ ಒಂದಕ್ಷರ ಬರೆಯಲು ಅಥವಾ ಓದಲು ಬಾರದಿದ್ದರೂ ಅಷ್ಟು ಪುಸ್ತಕಗಳನ್ನು ಅದು ಹೇಗೆ ಜೀರ್ಣಿಸಿಕೊಂಡಿದ್ದಾನೆಯೋ ನನಗರ್ಥವಾಗಿಲ್ಲ. ಸ್ಲೇಟುಗಳ ಸಂಖ್ಯೆಯೇ ನನಗೆ ಮರೆತುಹೋಗಿದೆ. ಕಲ್ಲಿನ ಸ್ಲೇಟುಗಳನ್ನು ತಂದರೆ ಒಡೆಯುತ್ತಾನೆಂದು ತಗಡಿನವನ್ನು ತಂದೆ. ಅವನ್ನು ದೊಡ್ಡ ಕಲ್ಲಿನಿಂದ ಕುಟ್ಟಿ ಅಜ್ಜಿ ಬಜ್ಜಿ ಮಾಡುತ್ತಿದ್ದ. ಎಲ್ಲರೂ ಬಳಪದಿಂದ ಬರೆದರೆ ಇವನು ಕಬ್ಬಿಣದ ಮೊಳೆಯಿಂದ ಬರೆಯುತ್ತಿದ್ದ.

ಇನ್ನು ಊಟ ತಿಂಡಿ ಸಮಯಗಳಲ್ಲಿ ಒಂದು ದೊಡ್ಡ ರಾದ್ಧಾಂತವಾಗು ತ್ತಿತ್ತು. ಇಬ್ಬರಿಗೂ ಸಮನಾಗಿ ಹಂಚುವುದೇ ನಮಗೆ ಒಂದು ದೊಡ್ಡ ಸಮಸ್ಯೆ. ಭೀಷ್ಮಪಂಚಕ ಮಾಡಿದವರು (ಒಂದೇ ಬಾರಿಗೆ ಐದು ದಿನ ಉಪವಾಸ ಮಾಡುವ ಒಂದು ವ್ರತ) ಸಹ ಆಹಾರದ ಬಗ್ಗೆ ಇಷ್ಟು ಬಡಿದುಕೊಳ್ಳುತ್ತಿರಲಿಲ್ಲ. ನೋಡಿದ ವರು ಈ ಮಕ್ಕಳಿಗೆ ಅನ್ನ ಹಾಕುತ್ತಿರಲಿಲ್ಲವೇ ಎಂಬ ಸಂಶಯ ಬರುವಂತಿತ್ತು. ಮನೆಗೆ ಯಾರಾದರೂ ಸ್ನೇಹಿತರು, ನಂಟರಿಷ್ಟರು ಬಂದಾಗಲಂತೂ ನಮ್ಮ ಹುಡು ಗರ ಆಹಾರದ ಹಾಹಾಕಾರ ಹೇಳತೀರದು. ಅಲ್ಲದೆ ಬೇರೆಯವರು ಮನೆಗೆ ಬಂದಾಗ ತಮಗೆ ಏಟು ಬೀಳುವದಿಲ್ಲವೆಂದೂ ಅವರಿಗೆ ಗೊತ್ತು. ಸ್ವಲ್ಪ ಏಟು ಬಿದ್ದರೆ ಭೂಮಿ ಆಕಾಶ ಒಂದಾಗುವಂತೆ ಅರಚುತ್ತಾರೆ. ಬರೀ ಕೈಯೆತ್ತಿದರೆ ಆರಂಭವಾಗುತ್ತದೆ ಅವರ ಅಳುವಿನ ಗೋಳು.

ಕಂಡವರ ಮಕ್ಕಳನ್ನು ಹೊಡೆಯುವದರಲ್ಲಿಯೂ ಇಬ್ಬರೂ ನಿಸ್ಸೀಮರು. ಪಕ್ಕದ ಮನೆ ಹುಡುಗ ಕಾಂಪೌಂಡು ಗೋಡೆಯಮೇಲೆ ಕೂತಿದ್ದ. ಅವನನ್ನು ಶ್ರೀನಾಥ ಮೆಲ್ಲನೆ ತಳ್ಳಿದನಂತೆ. ಆ ಹುಡುಗ ಕೇವಲ ಆರು ತಿಂಗಳು ಆಸ್ಪತ್ರೆ ಯಲ್ಲಿದ್ದು ಮುರಿದುಹೋದ ಕೈ ಸರಿಮಾಡಿಕೊಂಡು ಮನೆಗೆ ಬಂದ.

ಮೇಜಿನಮೇಲಿಟ್ಟ ನನ್ನ ಮನುಸ್ಕೃತಿ (Manuscripts) ದಿಕ್ಕಾ ದಿವಾಳಿ ಯಾಗಿರುತ್ತದೆ. ಸಾಮಾನ್ಯವಾಗಿ ಕನ್ನಡಕದ ಕಡ್ಡಿ ಕಳಚಿರುತ್ತದೆ, ಇಲ್ಲವೇ ಒಂದೇ ಒಂದು ಗಾಜು ಕಾಣೆಯಾಗಿರುತ್ತದೆ. ಮೆಟ್ಟುಗಳಲ್ಲಿ ಸಹ ಒಂದನ್ನು ಎಲ್ಲಿಯೋ ಹಾಕಿದ ಸಂದರ್ಭಗಳೂ ಉಂಟು.

ನನ್ನ ಸ್ನೇಹಿತ ವೆಂಕಟರಾಯ ಕಾಗದ ಬರೆದ. ಅವನ ಹಳ್ಳೀಲಿ ಹದಿನೈದು ದಿನ ಇದ್ದು ಬರಬೇಕೆಂದು ಆಹ್ವಾನವನ್ನೂ ಕಳಿಸಿದ್ದ. ಅವನು ಅಲ್ಲಿ ಶಾನುಭೋಗ. ಗಟ್ಟಿಹಾಲು, ಗಟ್ಟಿಮೊಸರು, ಹೊಲ, ಗದ್ದೆ, ತೋಟಗಳಲ್ಲಿ ತಿರುಗಾಡಿಕೊಂಡು ಬರುವುದು, ರಮ್ಯ ಮತ್ತು ಶಾಂತ ವಾತಾವರಣ, ಪ್ರಕೃತಿ ದೇವಿಯ ಮಡಿಲಲ್ಲಿ ಪವಡಿಸುವುದು – ಮುಂತಾದ ಹೊಂಗನಸುಗಳನ್ನು ನೆನೆದು ಆಫೀಸಿಗೆ ರಜದ ಚೀಟಿ ಕಳಿಸಿ ಅವನ ಹಳ್ಳಿಗೆ ಹೋದೆ.

ಮೂರನೇ ದಿನವೇ ಬಂದುಬಿಟ್ಟೆ. ಅವನಿಗೆ ಒಂಬತ್ತು ಜನ ಮಕ್ಕಳು. ಅವನ ಮನೆಗೆ ಹೋಗುತ್ತಲೇ ಕುಶಲ ವಿಚಾರಿಸಿದೆ. ಮಕ್ಕಳ ಆರೋಗ್ಯ

ಕೇಳಿದೆ. "ಕಿಟ್ಟಣ್ಣಾ! ಆರೋಗ್ಯಕ್ಕೇನು ಕಮ್ಮಿ ಅವಕ್ಕೆ. ವೊನ್ನೆ ಚಿಕ್ಕವ ನಿದ್ದಾನಲ್ಲ ರಾಮೂ...."

ಅದೇ ಸಂಜೆ ಬಸ್ ಹತ್ತಿ ಊರಿಗೆ ಬಂದೆ. ವೆಂಕಟರಾಯನ ಮಕ್ಕಳು ನಮ್ಮ ಹುಡುಗರಿಗಿಂತ ತುಂಟರು. ಹಾಗೆ ನೋಡುತ್ತಾ ಹೋದರೆ ಎಲ್ಲರ ಮನೆಯ ಮಕ್ಕಳೂ ಅಷ್ಟೇ!

# ಚುನಾವಣಾ ಸಂಘ

ಮೊನ್ನೆ ಬಳೇಪೇಟೆ ಸಂದಿಯಲ್ಲಿ ಹೋಗುತ್ತಿರುವಾಗ ಒಂದು ಬೋರ್ಡ್ ಕಣ್ಣಿಗೆ ಬಿತ್ತು. ಅದು ನನ್ನನ್ನು ಆಕರ್ಷಿಸಿತು. ಅದರಮೇಲೆ "ಚುನಾವಣಾ ಸೇವಕ ಸಂಘ ಲಿಮಿಟೆಡ್" ಅಂತ ಬರೆದಿತ್ತು. ನಾನೂ ಒಬ್ಬ ಉಮೇದುವಾರ. ಜನಗಳು ನಾನು ನಿಲ್ಲಕೂಡದೆಂದು ಆಗ್ರಹ ಮಾಡಿದ್ದರೂ ನಿಂತಿದ್ದೇನೆ. ನಾನು ಚುನಾವಣೆಯಲ್ಲಿ ವಿಜಯಿಯಾಗಲು ಈ ಸಂಘದಿಂದ ಏನಾದರೂ ಸಹಾಯ ವಾಗುವುದೋ ಎಂಬ ಆಸೆಯಿಂದ ಒಳನುಗ್ಗಿದೆ. ಒಳಗೆ ಹೋದಕೂಡಲೇ ಒಬ್ಬ ಸ್ಫುರದ್ರೂಪಿ ಹೆಂಗಸು ನನ್ನನ್ನು ಹುಸಿನಗೆಯಿಂದ ಸ್ವಾಗತಿಸಿ ಬಂದ ಹದನೇನೆಂದು ಬೆಸಗೊಂಡಳು. ನಾನು ನನ್ನ ವಿಸಿಟಿಂಗ್ ಕಾರ್ಡನ್ನು (ಅದೇ ಬೆಳಿಗ್ಗೆ ಅಚ್ಚುಹಾಕಿದ್ದು) ಆಕೆಯ ಕೈಗಿತ್ತು, ನಾನು ಈ ಬಾರಿಯ ಚುನಾವಣೆಗೆ ನಿಂತಿರುವ ಅಂಶವನ್ನು ಆಕೆಗೆ ತಿಳಿಸಿದೆ. "ಒಂದು ನಿಮಿಷ ಕುಳಿತುಕೊಳ್ಳಿ, ಡೈರೆಕ್ಟರಿಗೆ ತಿಳಿಸುತ್ತೇನೆ" ಎಂತ ಹೇಳಿ ಅಂಚೆಸವಂತೆ ಹಾರಿದಳು. 'ಆಫೀಸ್' ಅಂತ ಬರೆದಿರುವ ಕೋಣೆಯ ಬಾಗಿಲು ತೆಗೆದು ಒಳಗೆ ಹೋಗಿ, ಅವಳು ಹೇಳಿದ್ದಂತೆ ಒಂದು ನಿಮಿಷದಲ್ಲಿ ಬಂದಳು. "ಡೈರೆಕ್ಟರು ನಿಮ್ಮನ್ನು ಕಾಣುತ್ತಾ ರಂತೆ" ಅಂತ ಕಣ್ಸನ್ನೆಯಿಂದ ತನ್ನನ್ನು ಹಿಂಬಾಲಿಸುವಂತೆ ಸೂಚಿಸಿದಳು. ನಾನು ಹೊರಟೆ.

"ಹಲ್ಲೋ, ಗೇರ್, ನಿಮ್ಮನ್ನು ನೋಡಿ ತುಂಬಾ ಸಂತೋಷವಾಯಿತು. ನೀವು ಚುನಾವಣೆಗೆ ನಿಂತಿರುವ ವಿಷಯವೂ ತಿಳಿಯಿತು" ಅಂತ ಆತ ಹೇಳಿದ. ಈ ವೇಳೆಗೆ ಆತನ ಕಾರ್ಯದರ್ಶಿನಿ ಅಂತರ್ಧಾನಳಾಗಿದ್ದಳು.

ಸಜ್ಜಾದ ಕೋಣೆ. ನಾಲ್ಕು-ಐದು ಗಾಜಿನ ಬೀರುಗಳು. ಅವುಗಳ ತುಂಬ ಫೈಲುಗಳು. ದೊಡ್ಡ ಮೇಜು. ಅದರ ಸುತ್ತ ಮೆತ್ತನೆಯ ಕುರ್ಚಿಗಳು. ದೊಡ್ಡದೊಂದು ನಿಲುವುಗನ್ನಡಿ. ಒಂದು ಗಾಜಿನ ಬೀರುವನ್ನು ನೋಡುತ್ತಿರು

ವಾಗ ಒಂದು ಫೈಲಿನಮೇಲೆ ಮಿ|| ಗೇರ್ ಅಂತ ಬರೆದಿತ್ತು. ಚಕಿತನಾಗಿ ಡೈರೆಕ್ಟರನ್ನು ಕೇಳಿದೆ: "ನಿಮ್ಮ ಫೈಲಿನಮೇಲೆ ನನ್ನ ಹೆಸರು" ಅಂದೆ. ಅದಕ್ಕಾತ ಒಂದು ಬಾರಿ ಮುಗುಳ್ನಗೆ ನಕ್ಕು "ಹೌದು, ಅದರಲ್ಲಿ ನಿಮ್ಮ ಜೀವನಚರಿತ್ರೆಯ ಮುಖ್ಯ ಘಟನೆಗಳೆಲ್ಲಾ ಇವೆ" ಎಂದು ಹೇಳಿದ. ಆತ ಬೀರುವಿನ ಬಾಗಿಲನ್ನು ತೆರೆದು ಆ ಫೈಲನ್ನು ತೆಗೆದು, ಒಂದು ಹಾಳೆ ಈಚೆ ತೆಗೆದು ಓದಿದ: "೧೯೩೦ರಲ್ಲಿ ಗೇರ್‌ರವರು ತಮ್ಮ ಸ್ನೇಹಿತನ ಕಿಸೆಯಿಂದ ಫೌಂಟನ್‌ಪೆನ್ ಕದ್ದಿದ್ದರು. ೧೯೩೨ರಲ್ಲಿ ಅಸಭ್ಯ ವರ್ತನೆಗಾಗಿ ಕಾಲೇಜಿನಿಂದ ಡಿಬಾರ್ ಆಗಿದ್ದರು. ೧೯೪೦ರ ಸುಮಾರಿನಲ್ಲಿ ಇನ್ಸಾಲ್‌ವೆನ್ಸಿ ಹಾಕಿ, ಅದು ಹೇಗೋ ಪಾರಾದರು. ಪಠಾಣರ ಹತ್ತಿರ ಸಾಲ ತರುವ ಮತ್ತು ಮಾರ್ವಾಡಿಗಳಲ್ಲಿ ಗಿರವಿ ಇಡುವ ಅಭ್ಯಾಸವೂ ಇವರಿಗಿದೆ!" ಡೈರೆಕ್ಟರು ಓದು ನಿಲ್ಲಿಸಿದ. ನನ್ನ ನಾಲಗೆ ಒಣಗಿತ್ತು. ಅವನು ಓದಿದ್ದೆಲ್ಲ ನೂರಕ್ಕೆ ನೂರು ಸತ್ಯ. ಆದರೆ ಈ ಹಾಳು ಡೈರೆಕ್ಟರಿಗೆ ನನ್ನ ಪುರಾಣ ವೆಲ್ಲ ಹೇಗೆ ಗೊತ್ತಾಯಿತು, ಎಂಬುದೇ ನನಗರ್ಥವಾಗಲಿಲ್ಲ.

"ಮಿ|| ಗೇರ್‌ರವರೇ, ನಿಮ್ಮ ಎದುರಾಳಿ ಮಿ|| ಮಂಗ್‌ರವರು ಈ ಫೈಲನ್ನು ಇನ್ನೂರು ರೂಪಾಯಿಗಳಿಗೆ ಕೇಳಿದ್ದಾರೆ. ನಿಮ್ಮನ್ನು ಒಂದು ಸಾರಿ ಕೇಳಿ ಈ ಫೈಲನ್ನು ಮಾರೋಣ ಅಂತ ಇದ್ದೆ. ನೀವೇ ನನ್ನಲ್ಲಿಗೆ ಬಂದಿದ್ದು ಒಳ್ಳೆಯ ದಾಯಿತು" ಎಂತ ಹೇಳಿದ. ನನ್ನ ಎದುರಾಳಿ ಮಂಗ್‌ನಿಗೆ ಈ ಫೈಲು ಸಿಕ್ಕರೆ ನನ್ನ ಗತಿ ಪೂರೈಸಿದಂತೆಯೇ. ಏನೂ ಇಲ್ಲದೆ ಅವನ 'ಬೊಂಬಡಿ' ತಡೆಯುವ ಹಾಗಿಲ್ಲ. ಇಷ್ಟು ಸತ್ಯ ವಿಷಯಗಳು ಅವನ ಕೈಗೆ ಸಿಕ್ಕರೆ ನಾನು ಚುನಾವಣೆ ಯಲ್ಲಿ ಗೆದ್ದಂತೆಯೇ ಸರಿ.

ಡೈರೆಕ್ಟರು ಇನ್ನೊಂದು ಫೈಲನ್ನು ತೆಗೆದ. ಅದರಮೇಲೆ "ಮಿ|| ಮಂಗ್" ಅಂತ ಬರೆದಿತ್ತು. ಫೈಲಿನಲ್ಲಿಂದ ಒಂದು ಹಾಳೆ ತೆಗೆದು ಓದಿದ: "ಮಿ|| ಮಂಗ್ ರವರು ೧೯೨೭ರಲ್ಲಿ ಹಗಲು ದರೋಡೆ ಮಾಡಿಸಿ ಸಿಕ್ಕಿಬಿದ್ದಿದ್ದರು. ಸರಿಯಾದ ರುಜುವಾತು ದೊರೆಯದೆ ಬಿಡುಗಡೆ ಹೊಂದಿದರು. ಇವೊತ್ತಿಗೂ ಅಕ್ಕಿ ಮತ್ತು ಸಕ್ಕರೆಯನ್ನು ಹೋಟಲುಗಳಿಗೆ ಬ್ಲಾಕ್‌ನಲ್ಲಿ ಮಾರುತ್ತಾರೆ. ಶ್ರೀಯತರಿಗೆ ಇಬ್ಬರು ಉಪಪತ್ನಿಯರಿದ್ದಾರೆ—ನೋಡಿ, ಈ ಫೈಲು ನಿಮಗೆ ಅನುಕೂಲಕ್ಕೆ ಬರುವದಾದರೆ ಇನ್ನೂರು ರೂಪಾಯಿ ಕೊಟ್ಟು ತೆಗೆದುಕೊಂಡು ಹೋಗಿ" ಅಂತ ಹೇಳಿದ.

ಮಂಗ್‌ನ ಬಗ್ಗೆ ನನಗೆ ಇಂಥ ಸಾಹಿತ್ಯ ಅತ್ಯವಶ್ಯವಾಗಿ ಬೇಕಾಗಿತ್ತು. ಮತ್ತು ನನ್ನ ಬಗ್ಗೆ ತಯಾರಾಗಿದ್ದ ಫೈಲು ಅವನ ಕೈಗೆ ಸಿಕ್ಕದಂತೆ ನೋಡಿ ಕೊಳ್ಳಬೇಕಾಗಿತ್ತು. ಹಾಗೂ ಹೀಗೂ ಎರಡು ಫೈಲನ್ನೂ ಇನ್ನೂರ ಐವತ್ತು ರೂಪಾಯಿಗಳಿಗೆ ಕೊಂಡುಕೊಂಡೆ.

"ನನ್ನ ಚುನಾವಣೆಗೆ ನಿಮ್ಮಿಂದ ಇನ್ನು ಏನು ಏನು ಸಹಾಯವಾಗುತ್ತದೆ?" ಅಂತ ಕೇಳಿದೆ. ಅದಕ್ಕೆ ಡೈರೆಕ್ಟರು ಒಂದು ಕುರ್ಚಿಯನ್ನು ತೋರಿಸಿ "ಕುಳಿತು ಕೊಳ್ಳಿ" ಎಂದು ಹೇಳಿ ಕಾಲಿಂಗ್ ಬೆಲ್ ಒತ್ತಿದರು. ಈ ಕರೆಗೆ ಬಂದ ಜವಾನ ನಿಗೆ ಕಾಫಿ ತರಲು ಹೇಳಿಕಳಿಸಿದರು.

"ನೋಡಿ ಮಿ|| ಗೇರ್" ಹುಸಿನಗೆ ನಗುತ್ತಾ ಡೈರೆಕ್ಟರು ಮಾತಿಗಾರಂಭಿ ಸಿದರು : "ಚುನಾವಣೆ ಒಂದು ಮಹಾಯುದ್ಧವಿದ್ದಂತೆ. ಇದಕ್ಕೆ ನಾನಾ ತರಹೆ ಅಸ್ತ್ರಶಸ್ತ್ರಗಳಿರಬೇಕು. ವೈರಿಯು ನಮ್ಮಮೇಲೆ ದಾಳಿ ಮಾಡಿದಾಗ ಹೇಗೆ ರಕ್ಷಿಸಿ ಕೊಳ್ಳಬೇಕೆಂಬುದು ತಿಳಿದಿರುವಂತೆ, ಅವನು ಮೆತ್ತಗಿರುವಾಗ ಅವನ ಮೇಲೆ ದಾಳಿ ಮಾಡಲೂ ತಿಳಿದಿರಬೇಕು. ಇರಲಿ, ನಮ್ಮ ಕಂಪನಿಯಿಂದ ಆಗುವ ಸಹಾಯಗಳನ್ನು ಸೂಕ್ಷ್ಮವಾಗಿ ವಿವರಿಸುತ್ತೇನೆ. ಪ್ರತಿ ಸಹಾಯಕ್ಕೂ ಇಂತಿಷ್ಟು ರುಸುಮು ಕೊಡಬೇಕು. ಅದನ್ನು ನಮ್ಮ ಕಂಪನಿಯ ಕೈಪಿಡಿಯಲ್ಲಿ ನೋಡ ಬಹುದು. ನೀವು ಎಲ್ಲಿ ಬೇಕಾದರೂ ಸಭೆ ಸೇರಿಸಲು, ಮಾತನಾಡಲು ಅವಕಾಶ ಕಲ್ಪಿಸಿಕೊಡುತ್ತೇವೆ. ನಿಮ್ಮ ಭಾಷಣ ಕೇಳಲು ಜನರಾರೂ ಇಲ್ಲದಿದ್ದರೆ ನಮ್ಮ ಕಡೆಯವರೇ ಒಂದು ನೂರು ಜನ ಸಭೆಗೆ ಬಂದಿರುತ್ತಾರೆ. ಐದೈದು ನಿಮಿಷಕ್ಕೆ ಒಂದಾವರ್ತಿ ಚಪ್ಪಾಳೆ ತಟ್ಟುವಂತೆ ಏರ್ಪಾಟು ಮಾಡಿರುತ್ತೇವೆ. ಇನ್ನು ನಿಮ್ಮ ಎದುರಾಳಿ ಸಭೆ ಸೇರಿಸಿದಾಗ, ಅದನ್ನು ನಮ್ಮ ಗುಂಡಾಗಳು ಚದುರಿಸು ತ್ತಾರೆ. ರಾತ್ರಿ ಒಂಬತ್ತು ಗಂಟೆಯಮೇಲೆ ಮಾರ್ಕೆಟ್ಟಿಗೆ ಹೋಗಿ ಕೊಳೆತ ಟೊಮ್ಯಾಟೊ, ಕೋಳಿ ಮೊಟ್ಟೆಗಳನ್ನು ತಂದಿಟ್ಟುಕೊಂಡಿರುತ್ತೇವೆ. ನಿಮ್ಮ ಎದುರಾಳಿಯು ವೇದಿಕೆಯ ಮೇಲೆ ಮಾತನಾಡಲು ನಿಂತಕೂಡಲೇ ಅವನ್ನು ಕ್ರಮಾಗತವಾಗಿ ಎಸೆಯುತ್ತ ಬರುತ್ತೇವೆ. ಮನೆಮನೆಗೂ ನಮ್ಮ ಹುಡುಗರು ಹೋಗಿ ನಿಮ್ಮ ಎದುರಾಳಿಯ ಬಗ್ಗೆ ಅಪಪ್ರಚಾರವನ್ನೂ, ನಿಮ್ಮ ಬಗ್ಗೆ ಪ್ರಚಾರ ವನ್ನೂ ಮಾಡುತ್ತಾರೆ.. ನೀವು ಮಾಡದೆ ಇರುವ ಧರ್ಮಕಾರ್ಯಗಳನ್ನು

ಮುಕ್ತಕಂಠದಿಂದ ಹೊಗಳುವಂತೆ ಏರ್ಪಾಟು ಮಾಡುತ್ತೇವೆ. ಮತದಾರರ ಅವಶ್ಯಕತೆಗಳನ್ನು ನಮ್ಮವರು ಮೊದಲೇ ಕಂಡುಹಿಡಿದು, ಅವನ್ನು ಪೂರೈಸಿ ನಿಮಗೆ ಓಟು ಕೊಡಲು ಪ್ರಯತ್ನಿಸುತ್ತಾರೆ.”

“ಇದಕ್ಕೆಲ್ಲಾ ಒಟ್ಟು ಎಷ್ಟಾಗಬಹುದು ?” ಆಶ್ಚರ್ಯದಿಂದ ಕೇಳಿದೆ.

“ಒಂದು ವಿಷಯ. ಮೇಲೆ ವಿವರಿಸಿದ ಕಾರ್ಯಕ್ರಮಗಳಿಗೆಲ್ಲಾ ಐದು ಸಾವಿರ ರೂಪಾಯಿಗಳಾಗುತ್ತವೆ. ಆದರೆ ನಿಮ್ಮ ಎದುರಾಳಿಗಳು ನಾನು ವಿವರಿಸಿದ ಈ ಕಾರ್ಯಕ್ರಮಗಳನ್ನು ನಡೆಸಿಕೊಡುವದಿಲ್ಲವೆಂದು ನಾವು ಒಪ್ಪುವದಾದರೆ ಅದಕ್ಕೆ ನೀವು ಎರಡು ಸಾವಿರದ ಐದು ನೂರು ರೂಪಾಯಿ ಕೊಡಬೇಕು.”

ಹತ್ತು ಎಕರೆ ಜಮೀನು ಮಾರಾಟಮಾಡಿ, ಐದು ಸಾವಿರ ರೂಪಾಯಿಗಳನ್ನು ಚುನಾವಣಾ ಸಂಘದ ಡೈರೆಕ್ಟರಿಗೆ ಕೊಟ್ಟಿದ್ದೇನೆ. ನನಗಂತೂ ಜಯ ಖಂಡಿತ. ನನ್ನಂತೆ ಉಮೇದುವಾರರಾಗಿ ನಿಂತಿರುವವರು ಈ ಸಂಘದ ಸೇವೆಯನ್ನು ಪಡೆಯುವರೆಂದು ದೃಢವಾಗಿ ನಂಬಿದ್ದೇನೆ.

*

# ಕನಸೆಲ್ಲ ನನಸಾಗಿದ್ದರೆ....

ಹೌದು, ಕನಸುಗಳೆಲ್ಲ ನನಸಾಗಿದ್ದರೆ, ನಾನು ಏನೇನು ಮಾಡುತ್ತಿದ್ದೆ ನೆಂದು, ಒಂದು ದಿನ ರಾತ್ರಿ ಅಜೀರ್ಣವಾಗಿ ನಿದ್ದೆ ಬರದಿದ್ದಾಗ ಯೋಚಿಸಿದ್ದೆ.

ಮೊಟ್ಟಮೊದಲು ನನ್ನ ಬಳಿ ನಾನು ಎಷ್ಟು ಬಳಸಿದರೂ ತೀರದಷ್ಟು ಹಣ ಇರಬೇಕು. ಹಣ ಬಂದಕೂಡಲೇ ನಾನು ಅಮೆರಿಕ ಅಥವಾ ಇಂಗ್ಲೆಂಡ್‌ಗಳಿಗೆ ಪ್ರವಾಸ ಹೋಗುತ್ತೇನೆ. ನನಗೆ ಇಂಗ್ಲೀಷು ಅಷ್ಟು ಸರಿಯಾಗಿ ಬರುವದಿಲ್ಲ ವಾದ್ದರಿಂದ, ಇಂಗ್ಲೀಷ್ ಬಲ್ಲ ಒಬ್ಬರನ್ನು ಜೊತೆಯಲ್ಲಿ ಕರೆದುಕೊಂಡು ಹೋಗು ತ್ತೇನೆ. ವಿದೇಶ ಪ್ರವಾಸ ಮುಗಿಸಿ ಬಂದಮೇಲೆ ಆ ದೇಶಗಳ ವಿಚಾರವಾಗಿ ಸುದೀರ್ಘ ಲೇಖನಗಳನ್ನು (ಬೇರೆಯವರಿಂದ ಬರೆಯಿಸಿ ಅಸ್ಟಿ) ನನ್ನ ಪಡಿಯಚ್ಚು ಸಮೇತ ಪತ್ರಿಕೆಗಳಲ್ಲಿ ಅಚ್ಚುಹಾಕಿಸುತ್ತೇನೆ.

ನಮ್ಮಲ್ಲಿಂದ ವಿದೇಶಗಳಿಗೆ ಹೋದವರು ವಾಪಸು ಬರುವಾಗ ತಮ್ಮ ಲಗೇಜಿನ ಜೊತೆಗೆ ಒಂದು ಬಿಳಿಯ ಹೆಣ್ಣನ್ನು ತರುವ ರೂಢಿ ಇದೆ. ನಾನು ಸಹ ಹಾಗೆ ಒಂದನ್ನು ತರಬೇಕೆಂದಿದ್ದೇನೆ. ಆದರೆ ಮನೆಯಲ್ಲಿರುವ ಕರಿಯ ಹೆಣ್ಣಿಗೂ ಅದಕ್ಕೂ ತಾಳಮೇಳ ಕೂಡದೆ ಎಲ್ಲಿ ಬಡಿದಾಟಕ್ಕಾರಂಭವಾಗುತ್ತದೋ ಎಂಬ ದಿಗಿಲಿನಿಂದ ಆ ವಿಚಾರವನ್ನು ಬದಿಗೊತ್ತಿದ್ದೇನೆ.

ಸಿನಿಮಾ ತಾರೆಯನ್ನೋ, ಅಥವಾ ಅಷ್ಟೇ ಚೆಲುವಿನ ಹೆಣ್ಣೊಂದನ್ನೋ ಮದುವೆಯಾಗಬೇಕೆಂದು ಬಯಸಿದವನು ನಾನೂ ಒಬ್ಬ. ನನಗೆ ಬೀಳುತ್ತಿದ್ದ ಕನಸುಗಳು ಸಹ ಇಂಥ ತಾರೆಯರನ್ನೇ ಕುರಿತಾಗಿದ್ದವು. ಗುಲಾಬಿ ಬಣ್ಣದ ಮೈಗೆ, ಗುಲಾಬಿ ಬಣ್ಣದ ಸೀರೆ ಅಂಟಿರಬೇಕು. ನನ್ನ ಹೆಂಡತಿ ಗುಲಾಬಿ ತೋಟದಲ್ಲಿ ಗುಲಾಬಿ ಹೂವು ಕುಯ್ಯುತ್ತಿರಬೇಕು. ಆಗ ನಾನು ಕಾದಂಬರಿ ಕಾರರು, ಕವಿಗಳು ಹೇಳುವಹಾಗೆ ಹಟಾತ್ತನೆ ಹಿಂದುಗಡೆಯಿಂದ ಅವಳ ಕಣ್ಣುಗಳನ್ನು ಮುಚ್ಚಬೇಕು. ಅಂತ ಒಂದು ಕನಸು. ಆದರೆ ವರ್ಷಗಳು

ಉರುಳಿ ಆ ಸ್ವಪ್ನಕ್ಕೂ ಈಗಿನ ನೈಜ ಜಗತ್ತಿಗೂ ಇರುವ ಅಜಗಜಾಂತರವನ್ನು ನೋಡಿದರೆ ಅತ್ಯಾಶ್ಚರ್ಯವಾಗುತ್ತದೆ. ನನಗೆ ಸ್ವಂತ ಮನೆಯೇ ಇಲ್ಲ. ಇರುವ ಬೆಂಕಿಪೊಟ್ಟಣದಂತಹ ಬಾಡಿಗೆ ಮನೆಗೆ ಕಾಂಪೌಂಡೂ ಇಲ್ಲ, ಗುಲಾಬಿ ಗಿಡವಂತೂ ಮೊದಲೇ ಇಲ್ಲ. ಎಲ್ಲಕ್ಕೂ ಹೆಚ್ಚಾಗಿ ಗುಲಾಬಿ ಬಣ್ಣದ ಸೀರೆಯನ್ನು ಅವಳು ದೂರ ನಿಂತು ಮಡಿಕೋಲಿನಿಂದ ಸಹ ಮುಟ್ಟುವದಿಲ್ಲ. ಕಾರಣ ಇಷ್ಟೆ. ಅವಳ ಕೃಷ್ಣವರ್ಣದ ಸ್ಥೂಲಕಾಯಕ್ಕೆ ಗುಲಾಬಿ ಬಣ್ಣ ಒಪ್ಪುವದಿಲ್ಲವಂತೆ. ಸಂದರ್ಭ ಹೀಗಿರುವಲ್ಲಿ ನಾನು ಕಂಡಿದ್ದ ಕನಸಿನ ಗತಿ ಏನಾಯಿತೆಂಬುದನ್ನು ನೀವೇ ಊಹಿಸಿ.

ನಾನು ಚಿಕ್ಕವನಾಗಿದ್ದಾಗ, ರೈಲ್ವೆ ಗಾರ್ಡ್ ಅಥವಾ ಎಂಜಿನ್ ಡ್ರೈವರ್ ಆಗಬೇಕೆಂಬ ಕನಸು ಕಂಡಿದ್ದೆ. ಆ ಎಳೆಯ ಕಣ್ಣುಗಳಿಗೆ ಆ ಇಬ್ಬರು ವ್ಯಕ್ತಿಗಳು ತುಂಬಾ ಆಕರ್ಷಿಸಿದ್ದರು. ರೈಲ್ವೆ ಗಾರ್ಡ್‌ನ ಕೆಲಸ ಎಷ್ಟು ಸುಲಭ! ಹಸಿರು ಬಾವುಟ ತೋರಿಸಿ, ಒಂದು ಸೀಪಿ ಊದಿದರೆ ಐನೂರು ಅಶ್ವಶಕ್ತಿಯುಳ್ಳ ರೈಲ್ವೆ ಎಂಜಿನ್ ತನಗೆ ತಾನೇ ಓಡುತ್ತದೆ. ಡ್ರೈವರನ ಕೆಲಸವೂ ಅಷ್ಟೆ. ಕೂತಲ್ಲಿ ಒಂದು ಚಕ್ರವನ್ನು ಹಿಂದುಮುಂದೆ ತಿರುಗಿಸಿದರೆ ರೈಲು ಯಾರ ಕೈಗೂ ಸಿಗದಂತೆ ಓಡುತ್ತದೆ. ಆದರೆ ವಯಸ್ಸಿಗೆ ಬಂದಮೇಲೆ ಆ ಕನಸು ನನಸಾಗದಿದ್ದುದು ಒಳ್ಳೆಯದಾಯಿತೆಂದೆನಿಸುತ್ತದೆ.

ನನ್ನ ಮಿತ್ರನೊಬ್ಬ ಒಂದು ಕನಸು ಕಾಣುತ್ತಿದ್ದ. ಏನಂದರೆ, ತಾನು ಯಾವಾಗಲೂ ಸಾವಿರ, ಲಕ್ಷಗಟ್ಟಲೆ ಹಣ ಎಣಿಸುವಂಥ ಸ್ಥಿತಿಯಲ್ಲಿರುವುದು. ನಿಜಕ್ಕೂ ಅವನ ಕನಸು ನನಸಾಯಿತು. ಅವನೀಗ ಬ್ಯಾಂಕ್ ಒಂದರಲ್ಲಿ ಕ್ಯಾಷಿಯರ್ ಆಗಿದ್ದಾನೆ. ದಿನವೂ ಸಾವಿರಗಟ್ಟಲೆ ಹಣವು ಅವನ ಕೈಯಲ್ಲಿ ಓಡಿಯಾಡುತ್ತಿರುತ್ತದೆ.

ಡಾಕ್ಟರೊಬ್ಬರು ಕನಸು ಕಂಡ ಸ್ವಾರಸ್ಯ ವಿಷಯವೊಂದನ್ನು ಹೇಳಬಯು ಸುತ್ತೇನೆ. ಆಸ್ಪತ್ರೆಯೊಂದರಲ್ಲಿನ ಡಾಕ್ಟರೊಬ್ಬರ ಬಳಿ ಒಬ್ಬ ರೋಗಿ ಚಿಕಿತ್ಸೆ ಗೆಂದು ಅಲ್ಲಿಯೇ ವಾರ್ಡಿನಲ್ಲಿದ್ದ. ಆ ರೋಗಿಗೆ ಡರ್ಬಿ ಸ್ವೀಪ್‌ನಲ್ಲಿ ಲಕ್ಷಾಂತರ ರೂಪಾಯಿಗಳ ಮೊದಲನೇ ಬಹುಮಾನ ಬಂದ ವಿಷಯ ಅವನ ಮನೆಯವರಿಗೆ ತಿಳಿಯಬಂದಿತು. ರೋಗಿಗೆ ಈ ವಿಚಾರ ಹಟಾತ್ತಾಗಿ ತಿಳಿದರೆ ಅವನಿಗೆಲ್ಲಿ

ಹೃದಯಸ್ತಂಭನವಾಗುವುದೋ ಎಂದು ದಿಗಿಲುಗೊಂಡು ಡಾಕ್ಟರಿಗೆ ತಿಳಿಸಿದರು. ಡಾಕ್ಟರು ರೋಗಿಗೆ ಆ ವಿಚಾರವನ್ನು ಮಾರನೆಯ ದಿನ ಸಿಧಾನವಾಗಿ ತಿಳಿಸುವ ದಾಗಿ ಅಭಯವಿತ್ತರು.

ಅದರಂತೆ, ರೋಗಿಯ ಬೆಳಗಿನ ಕಾಫಿ, ಉಪಾಹಾರಗಳಾದಮೇಲೆ ಡಾಕ್ಟರು ಅವನ ಕೋಣೆಗೆ ಹೋಗಿ, ಮೊದಲು ಅವನ ದೇಹಸ್ಥಿತಿಯ ಬಗ್ಗೆ ಸರ್ವೇ ಸಾಮಾನ್ಯವಾದ ಕೆಲವು ಪ್ರಶ್ನೆಗಳನ್ನು ಹಾಕಿದರು. ಅನಂತರ :

"ಏನ್ರಿ, ನಿಮಗೆ ಸಾವಿರ ರೂಪಾಯಿ ಬಹುಮಾನ ಬಂದಿದೆ ಎಂತ ಇಟ್ಟುಕೊಳ್ಳೋಣ. ಅದರಲ್ಲಿ ನನಗೆಷ್ಟು ಕೊಡುತ್ತೀರಿ ?"

"ಅರ್ಧ ಹಣ ಕೊಡುತ್ತೇನೆ ಸ್ವಾಮಿ."

"ಸರಿ, ಆ ಮೊಬಲಗು ಹತ್ತು ಸಾವಿರ ರೂಪಾಯಿಗಳಾದರೆ ?"

"ಆಗಲೂ ಅರ್ಧ ಹಣ ನಿಮ್ಮದೇ."

"ಅದು ಇಪ್ಪತ್ತು ಸಾವಿರವಾದರೆ ?"

"ಸುಮ್ಮನೇ ಏಕೆ ನನ್ನನ್ನು ಪರೀಕ್ಷೆಮಾಡುತ್ತೀರಿ, ಆಗಲೂ ಅರ್ಧ ನಿಮ್ಮದೇ."

"ಹೋಗಲಿ, ಐವತ್ತು ಸಾವಿರ ರೂಪಾಯಿಗಳಾದರೆ ?"

"ನೀವು ನನ್ನನ್ನು ಕೇಳಲೇಬೇಕಾದ್ದಿಲ್ಲ. ಅರ್ಧ ಹಣ ತೆಗೆದು ಕೊಂಡುಬಿಡಿ."

"ಒಂದು ಲಕ್ಷ ರೂಪಾಯಿಗಳಾದರೆ...."

"ಸರಿಹೋಯ್ತು, ಆಗಲೂ ಅರ್ಧ ನಿಮ್ಮದೇ !"

ಡಾಕ್ಟರು ಹೃದಯಸ್ತಂಭನದಿಂದ ಕುಸಿದುಬಿದ್ದರು. ರೋಗಿಗೆ ಅದರ ಕಾರಣ ಆಮೇಲೆ ತಿಳಿಯಿತು.

ಕುದುರೆ ಜೂಜಿನಲ್ಲಿ ಹೇರಳವಾಗಿ ಹಣ ಸಂಪಾದಿಸುವ ಕನಸುಗಳನ್ನು ಕಂಡಿದ್ದೇನೆ. ಟ್ರಿಬಲ್ ಇವೆಂಟ್ ಪೂಲಿನ ಹತ್ತಾರು ಸಹಸ್ರ ರೂಪಾಯಿಗಳು ಯಾರು ಯಾರಿಗೋ ಸಲ್ಲುತ್ತವೆಂದು ಪತ್ರಿಕೆಗಳಲ್ಲಿ ಓದಿದ್ದೇನೆ. ಅದೇಕೆ ನನಗೂ

ಸೇರಬಾರದು ಎಂದು ಆಲೋಚಿಸಿದ್ದೇನೆ. ಮಾನವನು ತನ್ನ ನಿತ್ಯಜೀವನದಲ್ಲಿ ಆಲೋಚಿಸುವ ತುರ್ತಾದ ವಿಷಯಗಳು ಮತ್ತು ಅನುದಿನ ನಡೆಯುವ ಘಟನೆಗಳೇ ಸ್ವಪ್ನರೂಪದಲ್ಲಿ ಕಾಣಿಸಿಕೊಳ್ಳುತ್ತವೆಯೆಂದು ಮನಶ್ಶಾಸ್ತ್ರಜ್ಞರು ಅಭಿಪ್ರಾಯ ಪಡುತ್ತಾರೆ. ಆಗಲೇ ಹೇಳಿದಂತೆ, ಕುದುರೆ ಜೂಜಿನಲ್ಲಿ ಹಣ ಗೆಲ್ಲಬೇಕೆಂಬ ಆಸೆ ನನ್ನಲ್ಲಿ ಬಹಳ ದಿನಗಳ ಕಾಲ ಮೂಡಿದೆ. ನನ್ನ ಸ್ವಪ್ನದಲ್ಲಿ "ಹನ್ನೊಂದು" ಎಂಬ ಅಂಕಿಯು ಅತ್ಯಂತ ಪ್ರಮುಖವಾಗಿ ಕಾಣುತ್ತಿತ್ತು. ನಾನು ಎತ್ತ ತಿರುಗಿದರೂ "ಹನ್ನೊಂದು" ಭೂತಾಕಾರವಾಗಿ ಎದಿರು ನಿಲ್ಲುತ್ತಿತ್ತು. ಮಾರನೆಯ ದಿನ ಬೆಂಗಳೂರಿನಲ್ಲಿ ಕುದುರೆ ಜೂಜು. ಬೆಂಗಳೂರಿಗೆ ಹೋದೆ. ಇನ್ನೊಂದು ಸೋಜಿಗ ಏನು ಗೊತ್ತೇ? ಅವೊತ್ತು ಹನ್ನೊಂದನೆಯ ತಾರೀಖು. ನಾನು ಹೋಟಲಿನಲ್ಲಿ ಇಳಿದುಕೊಂಡೆ. ನನ್ನ ರೂಮ್ ನಂಬರು ಹನ್ನೊಂದು. ಮೊದಲಿನ ರೇಸ್‌ನಲ್ಲಿ ಓಡುವ ಕುದುರೆಗಳ ಸಂಖ್ಯೆಯನ್ನು ನೋಡಿದೆ. ಅದೂ ಹನ್ನೊಂದು. ರೇಸ್ ಟಿಪ್ ಕೊಡುವ ಪುಸ್ತಕದಲ್ಲಿ "ಹನ್ನೊಂದು" ಅದೃಷ್ಟ ಸಂಖ್ಯೆಯೆಂದೂ ಬರೆಯಲಾಗಿತ್ತು. ನನ್ನ ಅದೃಷ್ಟವನ್ನು ಕೊಂಡಾಡಿದೆ. ನೇರವಾಗಿ ಹೋಗಿ ಹನ್ನೊಂದನೆಯ ನಂಬರ್ ಕುದುರೆಯ ಮೇಲೆ ಒಂದು ನೂರು ರೂಪಾಯಿ ಕಟ್ಟಿದೆ. ಆ ಕುದುರೆ ಅತ್ಯಂತ ಫ್ಲೂಕ್ ಆಗಿದ್ದರಿಂದ ಅದರ ಮೇಲೆ ಹೆಚ್ಚು ಜನರು ಹಣ ಕಟ್ಟಿರಲಿಲ್ಲ. ಅದು ಗೆದ್ದರೆ ಸಾವಿರಾರು ರೂಪಾಯಿ ಬರುವ ಸಂಭವವೂ ಇತ್ತು.

ರೇಸ್ ಆರಂಭವಾಯಿತು. ನನ್ನ ಹನ್ನೊಂದನೆಯ ನಂಬರ್ ಕುದುರೆ ಹನ್ನೊಂದನೆಯ ಸ್ಥಾನದಲ್ಲಿಯೇ ಇದ್ದಿತು. ರೇಸ್ ಮುಗಿದಮೇಲೂ ಅದೇ ಹನ್ನೊಂದನೆಯ ಸ್ಥಾನದಲ್ಲಿದ್ದಿತು.

ಪ್ರಕೃತಿಯನ್ನೇ ಆರಾಧ್ಯ ದೈವವಾಗಿಟ್ಟುಕೊಂಡಿರುವ ಕವಿಗಳು ತಮ್ಮ ಆಶೋತ್ತರಗಳನ್ನೆಲ್ಲ ಕನಸಿನಲ್ಲಿಯೇ ತೀರಿಸಿಕೊಳ್ಳಲು ಯತ್ನಿಸುತ್ತಾರೆ. 'ಕನಸಿನ ನಲ್ಲೆ', 'ಸ್ವಪ್ನದ ರಾಣಿ' ಮುಂತಾಗಿ ಕವಿತೆಗಳನ್ನು ಸಹ ಗೀಚಿರುತ್ತಾರೆ. ಅನೇಕರು ಕನಸಿನಲ್ಲಿಯೇ ಕವಿತೆಗಳನ್ನು ಕಟ್ಟಿ ಬೆಳಕು ಹರಿಯುವವರೆಗೆ ಅದನ್ನೇ ನೆನಪಿನಲ್ಲಿಟ್ಟುಕೊಂಡು ಬರೆದಿರುವುದೂ ಉಂಟು. ಸಿನಿಮಾದವರಿಗಂತೂ 'ಡ್ರೀಮ್ ಲ್ಯಾಂಡ್', 'ಸ್ವಪ್ನಸುಂದರಿ' ಮುಂತಾದ ಕತೆಗಳಿಗೆ ಕನಸೇ ಆಧಾರ

ವಾಗಿದೆ. ನೈಜಪ್ರಪಂಚದಲ್ಲಿ ಇಂಥ ಅತ್ಯಾಶ್ಚರ್ಯಕರ ಪ್ರಸಂಗಗಳು ನಡೆಯು ತ್ತವೆ ಎಂದರೆ ಯಾರು ನಂಬುತ್ತಾರೆ. ಅದಕ್ಕಾಗಿಯೇ ಏನೋ ಬೇಕಾದ್ದನ್ನು, ಬರೀ ಅಪಭ್ರಂಶಗಳನ್ನು ಸೇರಿಸಿ ಚಿತ್ರಗಳನ್ನು ತಯಾರಿಸುತ್ತಾರೆ. ಇವುಗಳೆಲ್ಲಾ ಟೀಕಾತೀತವಾದವು, ಏಕೆಂದರೆ ಸ್ವಪ್ನಗಳಲ್ಲಿ ಇಂಥವುಗಳನ್ನು ಕಾಣಲು ಸಾಧ್ಯ ವಿಲ್ಲೆಂದು ಹೇಳುವುದಾದರೂ ಹೇಗೆ?

ನಾನು ಶ್ರೀಮಂತನಾದರೆ ವಾಸಕ್ಕೆ ಅತಿ ದೊಡ್ಡದಾದ ಮನೆಯೊಂದನ್ನು ಕಟ್ಟಿಸಿಕೊಳ್ಳುತ್ತೇನೆ. ದೊಡ್ಡ ಮನೆಗಳಲ್ಲಿ ವಾಸ ಮಾಡುವವರೆಲ್ಲ ದೊಡ್ಡ ಮನುಷ್ಯರು ತಾನೆ? ಆ ದೊಡ್ಡ ಮನೆಯ ಮುಂಭಾಗದಲ್ಲಿ ಎಲ್ಲರಿಗೂ ಕಾಣುವಂತೆ ಗತಿಸಿದ ನನ್ನ ತಂದೆತಾಯಿಗಳ ತೈಲಚಿತ್ರಗಳನ್ನು ನೇತುಹಾಕು ತ್ತೇನೆ. ಎಲ್ಲರ ಕಣ್ಣಿಗೆ ಕಾಣುವಂತೆ ದೊಡ್ಡ ದೊಡ್ಡ ಗಾಜಿನ ಬೀರುಗಳಲ್ಲಿ ದೃಷ್ಟಿ ತಾಕುವಂಥ ಪುಸ್ತಕಗಳನ್ನು ಇರಿಸುತ್ತೇನೆ. ಈ ಪುಸ್ತಕಗಳು ಕೇವಲ ಅಲಂಕಾರಕ್ಕಾಗಿಯೇ ವಿನಾ ಉಪಯೋಗಕ್ಕಲ್ಲ. ಏಕೆಂದರೆ, ನಾನು ಪುಸ್ತಕ ಪ್ರಿಯನಲ್ಲ ಮತ್ತು ಗುಟ್ಟನಲ್ಲಿ ಹೇಳಬೇಕೆಂದರೆ, ಅವೊಂದೂ ನನಗೆ ಅರ್ಥವಾಗುವುದಿಲ್ಲ.

ಮನೆಯನ್ನು ಕಲಾತ್ಮಕವಾಗಿ ಸಿಂಗರಿಸಲೂ ಬಹಳ ಬುದ್ಧಿ ಬೇಕು. ಹಳೆಯ ಕಾಲದ ರವಿವರ್ಮರ ಮತ್ತು ಇತರ ಚಿತ್ರಗಳನ್ನು ಕಂಡರೆ ಜನರು ಮೂಗು ಮುರಿಯುತ್ತಾರೆ. ಬರಗಾಲದ ಹೆಣಗಳಂತಿರುವ ಬಂಗಾಳೀ ಚಿತ್ರಗಳೇ ಚೆನ್ನಂತೆ. ಅಂಥವನ್ನೇ ಗೋಡೆಗಳಲ್ಲಿ ಸ್ಥಳವಿಲ್ಲದಂತೆ ಅಲಂಕರಿಸುತ್ತೇನೆ.

ನಾನು ಐಶ್ವರ್ಯವಂತನಾದ ಕೂಡಲೇ ನನ್ನ ಹಸ್ತವು ಅದು ಹೇಗೋ ಅಮೃತಮಯವಾಗುತ್ತದೆ. ಹಣ ತೀರ ಹೆಚ್ಚಾದರೆ ಅದನ್ನು ಹೇಗಾದರೂ ಮಾಡಿ ಖರ್ಚುಮಾಡಲು ಮಾರ್ಗಗಳನ್ನು ಹುಡುಕಬೇಕು. ಮನುಷ್ಯ ಹೆಸರು ಪಡೆಯಲು ಹಾತೊರೆಯುತ್ತಿರುವ ಕಾಲವಿದು. ನಾನಾದರೂ ಈ ನಿಯಮಕ್ಕೆ ಏಕೆ ಅಪವಾದವಾಗಬೇಕು? ಬಹಳ ಸುಲಭದಲ್ಲಿ ಹೆಸರು ಪಡೆಯಲು ಹಾತೊರೆ ಯುವ ಕಾಲವಿದು. ಬಹಳ ಸುಲಭದಲ್ಲಿ ಹೆಸರು ಪಡೆಯುವ ಮಾರ್ಗವೆಂದರೆ ಆಸ್ಪತ್ರೆ, ಸ್ಕೂಲು ಮುಂತಾದವನ್ನು ಕಟ್ಟಿಸಲು ಹೇರಳವಾಗಿ ಹಣ ಕೊಡುತ್ತೇನೆ.

ದಾನಶೂರ ಕರ್ಣ ಅಥವಾ ಅದಕ್ಕೆ ಹೋಲುವ ಯಾವುದಾದರೂ ಒಂದು ಬಿರುದು ಸಂಪಾದಿಸುತ್ತೇನೆ.

ಸರಿ, ಇದಾದ ಕೂಡಲೇ ನನಗೆ ಅಭಿವಂದನಾ ಪತ್ರಗಳ ಸುರಿಮಳೆ ಆರಂಭವಾಗುತ್ತದೆ. ಅಧ್ಯಕ್ಷ ಪೀಠಗಳನ್ನಲಂಕರಿಸುವುದು, ಉದ್ಘಾಟನಾ ಸಮಾರಂಭ ಮತ್ತು ಬಹುಮಾನ ವಿನಿಯೋಗ ಸಮಾರಂಭಗಳು ನನ್ನಿಂದಲೇ ಜರುಗುತ್ತವೆ. ಯಾವ ಹೊಸ ಕಟ್ಟಡ ಕಟ್ಟಿಸಬೇಕಾದರೂ ಅದಕ್ಕೆ ನನ್ನಿಂದಲೇ ಶಂಕುಸ್ಥಾಪನೆ. ಸೀನಿವರೆ, ಕೆಮ್ಮಿದರೆ ಹೇಳಿಕೆ ಕೊಡುತ್ತೇನೆ.

ಎಲ್ಲಪಕ್ಕೂ ಅತ್ಯಂತ ಸುಲಭವಾದ ಇನ್ನೊಂದು ಕೆಲಸವಿದೆ. ಅದನ್ನು ತಪ್ಪದೇ ಮಾಡುತ್ತೇನೆ. ಅದೇನೆಂದರೆ, ದೇಶದಲ್ಲಿ ನಡೆಯುವ ಎಲ್ಲ ಉತ್ಸವ ಸಮಾರಂಭಗಳಿಗೆ ಸಂದೇಶಗಳನ್ನು ಕಳಿಸುವುದು. ಪುಸ್ತಕ ಮತ್ತು ಲೇಖನಗಳನ್ನು ಬರೆಯುವುದು ಕಷ್ಟ, ಸಂದೇಶಗಳನ್ನು ಬರೆಯುವುದು ಸುಲಭ. ಇಂಥ ಉತ್ಸವಕ್ಕೆ ಈ ಮಾದರಿಯ ಸಂದೇಶವಿರಬೇಕೆಂಬ ಪ್ರಾರಬ್ಧ ನಿಯಮಗಳಿವೆ. ಅವನ್ನು ಯಾರಾದರೂ ಬುದ್ಧಿವಂತರಿಂದ ಬರೆಯಿಸಿಟ್ಟುಕೊಳ್ಳುತ್ತೇನೆ. ಸರ್ಕಾರಿ ಎ, ಬಿ, ಸಿ ಫಾರಂಗಳಂತೆ ಇವನ್ನು ತಯಾರಿಸಿದರಾಯಿತು. ಆಯಾ ಉತ್ಸವಕ್ಕೆ ಆಯಾ ಮಾದರಿಯ ಸಂದೇಶವನ್ನು ಕಳಿಸುವುದು.

ದೊಡ್ಡ ಮನೆ ಇದ್ದರೆ ಸಾಲದು, ಅಷ್ಟೇ ದೊಡ್ಡದಾದ, ಗಂಟೆಗೆ ಕೇವಲ ಎಂಟು ಮೈಲಿ ಓಡುವ ಕಾರನ್ನು ಇಟ್ಟುಕೊಳ್ಳಬೇಕಂತೆ. ಈ ಕಾರು ನೀರು ಕಡಿಮೆ ಕುಡಿದು ಪೆಟ್ರೋಲ್ ಹೆಚ್ಚು ಕುಡಿಯುತ್ತದಂತೆ. ಮನೆಯಲ್ಲಿ ನಾವು ಗಂಡ, ಹೆಂಡತಿ ಇಬ್ಬರೇ ಇದ್ದರೂ ದೊಡ್ಡ ಕಾರನ್ನಿಡುವುದು ದೊಡ್ಡಸ್ತಿಕೆಯ ಲಕ್ಷಣವಂತೆ. ಅಷ್ಟೇ ಅಲ್ಲ, ಸಂಬಳ ತೆಗೆದುಕೊಳ್ಳುವ ಡ್ರೈವರ್ ಇದ್ದರೂ ಅವನನ್ನು ಹಿಂದಿನ ಸೀಟಿನಲ್ಲಿ ಕೂಡಿಸಿ, ಗಂಡ ಹೆಂಡತಿ ನಾವು ಮುಂದಿನ ಸೀಟಿನಲ್ಲಿ ಕೂತುಕೊಳ್ಳಬೇಕಂತೆ. ಮತ್ತು ಕಾರಿನ ಮಾಲೀಕನೇ ಕಾರನ್ನು ನಡೆಯಿಸಬೇಕಂತೆ.

ನನಗೆ ಮೋಟಾರ್ ನಡೆಯಿಸಲು ಬರುವುದಿಲ್ಲ. ಆದರೇನು, ಅದನ್ನು ಕಲಿಯುತ್ತೇನೆ. ಮೊದಲು ನಾಯಿಕುನ್ನಿ, ಮುದುಕಿಯರ ಮೇಲೆ ಬಿಟ್ಟು ಆಮೇಲೆ ಹೆಚ್ಚು ಜನರ ಮೇಲೆ ಬಿಡುತ್ತೇನೆ.

ದೊಡ್ಡ ಮನೆ ಕಟ್ಟಿಸಿದ ಮಾತ್ರಕ್ಕೆ ನನ್ನ ಕೆಲಸ ಮುಗಿಯಲಿಲ್ಲ. ಅದಕ್ಕೊಂದು ಒಳ್ಳೆಯ ಹೆಸರನ್ನು ಇಡಬೇಕು. ಅನೇಕರ ಮನೆಗಳು ಜರಡಿಯಂತೆ ತೂತು ಬಿದ್ದು ನೂರೆಂಟು ಕಡೆ ಸೋರುತ್ತಿದ್ದರೂ ಅವಕ್ಕೆ "ಇಂದ್ರಭವನ" "ಚಂದ್ರಭವನ" ಎಂದು ಹೆಸರಿಟ್ಟಿರುತ್ತಾರೆ. ಇನ್ನು ಕೆಲವರು ತಮ್ಮ ಹೆಂಡಂದಿರ ಹೆಸರಿಟ್ಟು ಅದರ ಮುಂದೆ ವಿಲಾಸ ಎಂಬ ಮೂರಕ್ಷರಗಳನ್ನು ಜೋಡಿಸಿರುತ್ತಾರೆ. ಎಲ್ಲಕ್ಕೂ ಹೆಚ್ಚು ನಗು ಬರುವ ವಿಚಾರವೆಂದರೆ, ಎಲ್ಲ ವಿಲಾಸಾದಿಗಳಿಗೆ ತಿಲಾಂಜಲಿ ಇತ್ತ, ಬಾಲಬ್ರಹ್ಮಚಾರಿಗಳಾದ ಮಾರುತಿ ಮತ್ತು ಗಣೇಶ ಇವರನ್ನೂ ಬೆನ್ನಟ್ಟಿ ಹಿಡಿದುಕೊಂಡು ಬಂದು "ಮಾರುತಿ ವಿಲಾಸ", "ಗಣೇಶ ವಿಲಾಸ" ಎಂಬ ಹೆಸರುಗಳನ್ನಿಟ್ಟಿರುತ್ತಾರೆ. ಮೊನ್ನೆ ನನ್ನ ಸ್ನೇಹಿತ ಸಿಕ್ಕ. ಅವನ ಮನೆಗೆ "ಭೂರ್ ನಿವಾಸ" ಎಂಬ ಹೆಸರು ಇಟ್ಟಿರುವದಾಗಿ ಹೇಳಿದ. ಆ ಹೆಸರಿನ ಅರ್ಥವೇ ನನಗಾಗಲಿಲ್ಲ. ಅವನೇ ಬಿಡಿಸಿ ಹೇಳಿದ. "ಆ ಮನೆ ಒಬ್ಬ ಮಾರ್ವಾಡಿಗೆ ಒತ್ತೆ ಬಿದ್ದಿದೆ. ನಾನಂತೂ ಅದನ್ನು ಬಿಡಿಸಿಕೊಳ್ಳುವ ಸ್ಥಿತಿಯಲ್ಲಿಲ್ಲ. ಅದು ಹೇಗೂ ಆ ಮಾರ್ವಾಡಿಗೆ ಸೇರುತ್ತದೆ. ಅವನ ಹೆಸರು ಭೂರ್‌ಮಲ್ ಅಂತ. ಅದಕ್ಕೆ ದೂರಾಲೋಚನೆಯಿಂದ "ಭೂರ್ ನಿವಾಸ" ಎಂದು ಹೆಸರಿಟ್ಟಿರುವುದಾಗಿ ತಿಳಿಸಿದ. ಈ ಅವಾಂತರವನ್ನೆಲ್ಲ ನೋಡಿ ನನ್ನ ಮನೆಗೆ ಯಾವ ಹೆಸರನ್ನೂ ಇಡಕೂಡದೆಂದು ನಿರ್ಧರಿಸಿದ್ದೇನೆ.

ಪೆರಾಂಬ್ಯುಲೇಟರ್‌ಗಳಲ್ಲಿ ಮುದ್ದಾದ ಮಕ್ಕಳನ್ನು ಕೂಡಿಸಿಕೊಂಡು ಸಂಜೆ ವೇಳೆಯಲ್ಲಿ ಹವಾ ಸೇವನೆಗೆಂದು ಅಚ್ಚಕರಿಯ ದಾದಿಯರು ಹೋಗುತ್ತಿರುವುದನ್ನು ನೋಡಿದ್ದೇನೆ. ಮಕ್ಕಳೆಂದರೆ ನನಗೆ ಪಂಚಪ್ರಾಣ. ಅಂತಹ ಹಾಲುಗಲ್ಲದ ಎರಡು ಮುದ್ದಾದ ಬೇಬಿಗಳಾಗಲೆಂದು ಬಯಸಿದ್ದೆ. ಕರಿಯ ದಾದಿಯೇನೋ ದೊರಕಿದ್ದಾಳೆ. ಆದರೆ ಮುದ್ದಾದ ಮಕ್ಕಳಾಗಿಲ್ಲ. ಆ ದಾದಿಯನ್ನೇ ಕಪ್ಪನೆಯ ಬಣ್ಣದಲ್ಲಿ ಸ್ಪರ್ಧಿಸುವಂತಹವು. ಅವು ನಕ್ಕಿದ್ದನ್ನು ಈ ಪಾಪಿ ಕಣ್ಣುಗಳಿಂದ ನೋಡಿಲ್ಲ. ಅವುಗಳ ಅಳುವಿನ ಅವಾಂತರ ಸಹಿಸಲು ದುಸ್ಸಾಧ್ಯವಾಗಿ, ನಾನು ಅನೇಕ ಬಾರಿ ಮನೆ ಬಿಟ್ಟು ಹೋದ ಪ್ರಸಂಗಗಳೂ ಉಂಟು.

ಎಳೆವಯಸ್ಸಿನಲ್ಲಂತೂ ನನಗೆ ಕನಸುಗಳ ಸುರಿಮಳೆಯೇ ಆಗಿರುತ್ತದೆ. ಜೀವನದಲ್ಲಿ ಹೊಸಲನ್ನು ಆಗತಾನೇ ದಾಟಿದ ನವದಂಪತಿಗಳ ಸ್ವಪ್ನಗಳಿಗೆ ತುದಿ ಮೊದಲೇ ಇಲ್ಲ. ಆದರೆ ಅದರಲ್ಲಿ ನನಸಾಗದಿರುವುವೇ ಅಧಿಕ ಸಂಖ್ಯೆಯವು.

ಆಗತಾನೆ ಗಂಡನ ಮನೆಗೆ ಹೋದ ಹುಡುಗಿಯೊಬ್ಬಳು ಒಂದು ದಿನ ಗಂಡನೊಂದಿಗೆ ಹಟಾತ್ತನೆ ಮುನಿಸಿಕೊಂಡಳು. ಅವಳ ಕೋಪದ ಕಾರಣ ಗಂಡನಿಗೆ ಅರ್ಥವಾಗಲಿಲ್ಲ. ಅವಳೇ ಹೇಳಿದಳು. "ನಿನ್ನೆ ರಾತ್ರಿ ನನಗೊಂದು ಸ್ವಪ್ನ ಬಿದ್ದಿತ್ತು. ಅದರಲ್ಲಿ ನೀವು ಬೇರೆ ಯಾವುದೋ ಹುಡುಗಿಯ ಜೊತೆ ಮಾತನಾಡುತ್ತಿದ್ದಿರಿ. ಅದಕ್ಕೇ ನನಗೆ ನಿಮ್ಮಮೇಲೆ ಇಷ್ಟು ಕೋಪ" ಅಂತ ಹೇಳಿದಳಂತೆ.

ಕನಸುಗಳೆಲ್ಲ ಕನಸುಗಳಾಗಿದ್ದರೇ ಚೆನ್ನು. ಅವು ನನಸಾದರೆ ಜೀವನ ಬರಡಾಗುತ್ತದೆ. ಜೀವನದಿಂದ ಕಲ್ಪನಾಲೋಕಕ್ಕೆ ಹಾರಿ ಸ್ವಪ್ನ ಜಗತ್ತಿನಲ್ಲಿ ಮನುಷ್ಯ ತನ್ನನ್ನು ತಾನು ಮರೆತು ಸಮಾಧಿಸ್ಥಿತಿ ಹೊಂದಲು ದೈವದತ್ತವಾದ ವರವಿದು. ಕನಸು ಕಾಣದ ಜೀವಿಯೇ ಈ ಪ್ರಪಂಚದಲ್ಲಿಲ್ಲ.

# ಸಂಗೀತ ಕಚೇರಿಗೆ ಹೋದದ್ದು

ಅವೊತ್ತು ಚಟ್ಟಮ್ಮಾಳ್ ಸಂಗೀತ ಕಚೇರಿ. ಈ ಕಚೇರಿ ಆಗುವದೆಂದು ಈಗ್ಗೆ ಎರಡು ತಿಂಗಳ ಹಿಂದೆಯೇ ಪತ್ರಿಕೆಗಳಲ್ಲಿ ಬಂದಿತ್ತು. ಅಂದಿನಿಂದ ಜನಗಳೆಲ್ಲರೂ ಈ ಪರ್ವದಿನಕ್ಕಾಗಿ ಚಾತಕಪಕ್ಷಿಯಂತೆ ಕಾದಿದ್ದರು. ನಮ್ಮವರ ಹಣೆಬರಹವೇ ಹೀಗೆ. ಡಂಕಣಿಕೋಟೆಗೆ ಅತ್ತಕಡೆಯಿಂದ ಬಂದು ಸಂಗೀತ ಹೇಳುವವರೆಲ್ಲ ವಿದ್ವಾಂಸರೇ! ಅವರಿಗಿಂತಲೂ ನಮ್ಮೂರಿನಲ್ಲಿ ಎಷ್ಟೋ ಜನ ಒಳ್ಳೆಯ ಸಂಗೀತಗಾರರಿದ್ದರೂ ಅವರಿಗೆ ಬೆಲೆಯಿಲ್ಲ. ಯಾವನಾದರೂ ದೊಣ್ಣೆ ಭಾಗವತ ಬರುತ್ತಾನೆಂದರೆ ಆರತಿ ತಟ್ಟೆ, ಹೂವಿನ ಹಾರ ತೆಗೆದುಕೊಂಡು ಹೋಗುತ್ತಾರೆ. ಐದು ರೂಪಾಯಿ, ಹತ್ತು ರೂಪಾಯಿ ಟಿಕೆಟ್ಟು ತೆಗೆದುಕೊಂಡು ಬಂದಾತನನ್ನು ಪುರಸ್ಕರಿಸುತ್ತಾರೆ. ಅದೇ ನಮ್ಮವರು ಯಾರಾದರೂ ಪುಗಸಟ್ಟೆ ಹಾಡುತ್ತೇವೆಂದರೆ ಕೇಳುವ ಕಿವಿಗಳಿಲ್ಲ. 'ಹಿತ್ತಲ ಗಿಡ ಮದ್ದಲ್ಲ' ಅನ್ನುವುದು ಇಂಥ ಸಂದರ್ಭಗಳಿಗೆಂದೇ ತೋರುತ್ತದೆ.

ನನ್ನ ಹೆಂಡತಿ ಮತ್ತು ನನ್ನ ನಾದಿನಿ ಚಟ್ಟಮ್ಮಾಳ್ ಸಂಗೀತ ಕಚೇರಿಗೆ ನಾನೂ ಬರಬೇಕೆಂದು ಹಟ ಹಿಡಿದರು. ನನಗೆ ಸಂಗೀತದ ಗಂಧಗಾಳಿ ಇಲ್ಲ. ಯಾವಾಗಲಾದರೂ ಸಂಗೀತ ಹೇಳುತ್ತಿರುತ್ತೇನೆ. ರೈಲಿನಲ್ಲಿ ಕುಳಿತಾಗ – ಅದು ಓಡುತ್ತಿರುವಾಗ – ಮತ್ತು ಸ್ನಾನಮಾಡುತ್ತಿರುವಾಗ ಮಾತ್ರ ನನ್ನ ಸಂಗೀತ. ನನ್ನ ಹೆಂಡತಿ ಒಂದು ಸಾರಿ ಆಶ್ಚರ್ಯಪಟ್ಟಿದ್ದು ನನಗೆ ಜ್ಞಾಪಕ ಇದೆ. "ನೀವು ಎಂಥ ತ್ಯಾಗರಾಜ ಕೃತಿಯನ್ನಾದರೂ ಅಮರಕೋಶದಲ್ಲಿನ ಶ್ಲೋಕ ಹೇಳಿದ ಹಾಗೆ ಹೇಳುತ್ತೀರಲ್ಲ!" ಅಂತ ಮೂಗಿನಮೇಲೆ ಬೆರಳಿಟ್ಟುಕೊಂಡಿದ್ದಳು. ಹೆಂಡತಿ ಮತ್ತು ನಾದಿನಿಯ ಆಗ್ರಹಕ್ಕೆ ತಲೆಬಾಗಿ ಸಂಗೀತ ಕಚೇರಿಗೆ ಹೋಗಲೇಬೇಕಾಯಿತು, ಹೋದೆ.

ಜನಸಂದಣಿ ನಾವು ಎಣಿಸಿದಷ್ಟು ಕಿಕ್ಕಿರಿದಿರಲಿಲ್ಲ. ಸಂಗೀತ ಬಲ್ಲ ಗುಣಾಭಿಜ್ಞರು ಮಾತ್ರ ಬಂದಿದ್ದರು. ನಾವು ಹೋಗುವ ಹೊತ್ತಿಗೆ ಪಿಟೀಲಿನವನು ಮತ್ತು ತಬಲದವನು, ತಮ್ಮ ತಮ್ಮ ವಾದ್ಯಗಳನ್ನು ಶೃತಿ ಮಾಡಿಕೊಳ್ಳುತ್ತಿದ್ದರು. ಚಟ್ಟಮ್ಮಾಳ್ ಫಳಫಳನೆ ಹೊಳೆಯುವ ನೀಲಿ ಜರತಾರಿ ಸೀರೆ ಉಟ್ಟುಕೊಂಡು ಚಕ್ಕಳಮುಕ್ಕಳಿ ಹಾಕಿಕೊಂಡು ಒಳ್ಳೆ ಗೌರಮ್ಮ ಕೂತ ಹಾಗೆ ಕೂತಿದ್ದಳು. ಅವಳ ಹಣೆಯಮೇಲೆ ಒಂದು ರೂಪಾಯಿ ಅಗಲದ ಕುಂಕುಮ. ಎಂತಹ ಶುಕ್ರವಾರದ ಮುತ್ತೈದೆಯನ್ನೂ ನಾಚಿಸುವಂತಿತ್ತು. ಹೊಸದಾಗಿ ಹೂವಿನ ಅಂಗಡಿ ಇಡಲು ಸಾಕಾಗುವಷ್ಟು ಹೂ ಮುಡಿದಿದ್ದಳು.

ಮುಕ್ಕಾಲು ಗಂಟೆಯವರೆಗೆ ಪಕ್ಕವಾದ್ಯಗಳವರು ತಮ್ಮ ವಾದ್ಯಗಳನ್ನು ಶೃತಿ ಮಾಡಿದ್ದೂ ಮಾಡಿದ್ದೇ. "ಯಾಕೆ, ಮನೆಯಿಂದ ಬರುವಾಗ ಅವನ್ನು ಶೃತಿ ಮಾಡಿಕೊಂಡು ಬರಲಿಕ್ಕೆ ಅವರಿಗೇನು ಧಾಡಿ?" ಅಂತ ಕೇಳಿದೆ. ನನ್ನ ಹೆಂಡತಿ ತನ್ನ ಕೆಟ್ಟ ಕಣ್ಣಿನಿಂದ ಒಂದು ಸಲ ನನ್ನನ್ನು ನೋಡಿ "ನಿಮಗೆ ಅವೆಲ್ಲಾ ತಿಳಿಯುವುದಿಲ್ಲ ಸುಮ್ಮನಿರಿ" ಅಂತ ಹೇಳಿ ಒಂದುಸಾರಿ 'ಅಬ್ಬಾಕ್' ಹಾಕಿದಳು.

"ನಿದ್ದೆ ಹೋಗಬೇಡಿ, ನಿದ್ದೆ ಮಾಡಿದರೆ ಒಳ್ಳೆಯ ಸಂಗೀತ ಅರ್ಥವಾಗುವುದಿಲ್ಲ" ಎಂದು ನನ್ನಾಕೆ ಎಚ್ಚರಿಕೆ ಕೊಟ್ಟಳು. ದಿನವಿಡೀ ಕಚೇರಿಯಲ್ಲಿ ಅಂಕಿಗಳೊಂದಿಗೆ ಹೋರಾಡಿದ ನನಗೆ ಕಣ್ಣುಗಳು ಎತ್ತಲೋ ತೆಗೆದುಕೊಂಡು ಹೋಗುತ್ತಿದ್ದವು.

ಪಿಟೀಲಿನವನು 'ಕೊಂಯ್' ಅನ್ನಿಸಿದ. ತಬಲದವನು ಎರಡು ಸಾರಿ ಚಟಚಟ ಬಾರಿಸಿ ಸುಮ್ಮನಾದ. ಸ್ಮಶಾನ ಸದೃಶ ಶಾಂತತೆ ಆ ಹಾಲ್‌ನಲ್ಲಿ ಆವರಿಸಿತ್ತು. ಒಂದು ಸೂಜಿ ಕೆಳಕ್ಕೆ ಬಿದ್ದಿದ್ದರೂ ಕೇಳುವಂತಿತ್ತು. ನಿಧಾನವಾಗಿ ಸಂಗೀತ ಆರಂಭವಾಯಿತು. "ನೀವು ಸಿಕ್ಕ ಸಿಕ್ಕ ಹಾಗೆ ತಲೆಹಾಕಬೇಡಿ. ನಾನೂ ರತ್ನ ಹೇಗೆ ತಲೆಹಾಕುತ್ತೇವೋ, ನೀವೂ ಹಾಗೇ ತಲೆಹಾಕಿ. ಇಲ್ಲದಿದ್ದರೆ ನಿಮಗೆ ಸಂಗೀತ ಬರುವುದಿಲ್ಲವೆಂದು ಜನ ತಿಳಿದುಕೊಳ್ಳುತ್ತಾರೆ." ಪಿಸುಮಾತಿನಲ್ಲಿ ಎಲ್ಲರಿಗೂ ಕೇಳುವಂತೆ ನನ್ನ ಹೆಂಡತಿ ಹೇಳಿದಳು. "ನಾನು ತಲೆಹಾಕುವುದೇ ಇಲ್ಲ, ತೆಪ್ಪಗೆ ಕೂತಿರುತ್ತೇನೆ" ಅಂತ ಹೇಳಿದೆ. "ಹಾಗೆ ಕೂತಿ

ದ್ದರೆ ಇದೆಲ್ಲೋ ಪೆಚ್ಚು, ಲಕ್ಷ್ಮೀಗೆ ಒಳ್ಳೆಯ ಗಂಡ ಸಿಕ್ಕ ಅಂತ ಸಂಕಟಪಟ್ಟು ಕೊಳ್ಳುತ್ತಾರೆ." ಸರಿ, ಅವರು ತಲೆಹಾಕಿದಾಗ ತಲೆಹಾಕುವುದು, ಸುಮ್ಮನಿದ್ದಾಗ ಸುಮ್ಮನಿರುವುದು, ಶಹಬಾಸ್‌ಗಿರಿ ಕೊಡಲು ಅವರು ಮುಗುಳ್ನಗೆ ನಕ್ಕಾಗ ನಾನೂ ಹಲ್ಲುಗಿಂಜುವುದು, ಇವನ್ನು ಮಾಡುತ್ತಿದ್ದೆ. ನನ್ನ ಹೆಂಡತಿ ಮತ್ತು ರತ್ನ ಬೇರೆಯವರು ಹೇಗೆ ಮಾಡುತ್ತಿದ್ದರೋ ಅವರೂ ಹಾಗೆಯೇ ಮಾಡುತ್ತಿದ್ದರು!

"ತಬಲಾದವರು ಹೀಗಿರಬೇಕು. ಆತ ಕೋತಿಚೇಷ್ಟೆ ಮಾಡುವುದಿಲ್ಲ. ಮುಖವಿಕಾರ ಮಾಡುವ ತಬಲದವರನ್ನು ನೋಡಬೇಕೆಂದರೆ ನನಗೆ ತುಂಬಾ ಅಸಹ್ಯ" ನನ್ನ ಹೆಂಡತಿ ಹೇಳಿದಳು. ರತ್ನ "ಹೌದು" ಅಂತ ಹೇಳಿದಳು.

"ಆ ಸೀರೆ ನೋಡಿದೆಯೇನೇ ರತ್ನಾ, ನಾಟಕದ ಪರದೆ ಇದ್ದ ಹಾಗೆ ಇದೆ. ಆ ಪುಣ್ಯಾತ್ಗಿತ್ತಿ ಅದನ್ನು ಹೇಗೆ ಉಡುತ್ತಾಳೋ!" ಅಷ್ಟುಹೊತ್ತಿಗೆ ಚಪ್ಪಾಳೆಯ ಸುರಿಮಳೆ. ನಾವು ಮೂವರೂ ಚಪ್ಪಾಳೆ ಹೊಡೆದೆವು.

ಸರಿ, ವಿರಾಮ ಸಮಯ. ಯಾವನೋ ಕಷಾಯದಂಥ ಷರಬತ್ತು ತಂದಿದ್ದ. "ನಾಲಗೆ ಒಣಗಿ ಹೋಗಿದೆ, ಮೂರು ಗ್ಲಾಸ್ ಷರಬತ್ ತನ್ನಿ" ನನ್ನ ಹೆಂಡತಿ ಹೇಳಿದಳು. ಕೆಟ್ಟ ಮುಖ ಮಾಡಿಕೊಂಡು ಅದನ್ನು ಹೀರು ತ್ತಿದ್ದೆವು. "ಒಳ್ಳೆಯ ಸಂಗೀತ ಕೇಳಿದರೆ ನನಗಂತೂ ನಾಲಗೆ ಒಣಗಿಹೋಗುತ್ತೆ" ರತ್ನ ಹೇಳಿದಳು. "ಅದು ಯಾಕೆ?" ಅಪಸ್ವರದಲ್ಲಿ ಕೇಳಿದೆ ನಾನು. "ಇವೆಲ್ಲಾ ನಿಮಗೇನು ಗೊತ್ತಾಗುತ್ತೆ ಸುಮ್ಮನಿರಿ" ಅಂತ ಲಕ್ಷ್ಮಿ ನನ್ನ ಬಾಯಿಗೆ ಕಾರ್ಕ್ ಹಾಕಿದಳು.

ಮತ್ತೆ ಸಂಗೀತಕ್ಕಾರಂಭವಾಯಿತು. ರತ್ನ ಹೇಳಿದಳು: "ಇಲ್ಲಿ ಬಂದಿರು ವವರಲ್ಲಿ ೩೫ ಜನ ಜಾರ್ಜೆಟ್ ಸೀರೆ ಉಟ್ಟಿದ್ದಾರೆ, ೪೯ ಜನ ರೇಷ್ಮೆ ಸೀರೆ ಗಳನ್ನು ಉಟ್ಟಿದ್ದಾರೆ. ಉಳಿದವರೆಲ್ಲ ವಾಯಿಲ್, ಅಂಥವು ಇಂಥವು." ನನ್ನ ಹೆಂಡತಿಗೆ ಸಂತೋಷವೇ ಸಂತೋಷ. "ಎಷ್ಟು ಬೇಗ ಲೆಕ್ಕ ಹಾಕಿದೆಯೆ? ನಿನ್ನಂಥ ಚೂಟಿ ಹುಡುಗಿಯನ್ನು ಬಾಳಿಸಲು ನಿನ್ನ ಗಂಡನಿಗೆ ಯೋಗ್ಯತೆ ಇಲ್ಲ" ಅಂದವಳೇ ಅರಸಿನ ಕುಂಕುಮ ಹತ್ತಿದ್ದ ಕರ್ಚೀಫನ್ನು ಕಣ್ಣಿಗೆ ಹಚ್ಚಿ ಕೊಂಡಳು. ರತ್ನ ಸಹ ಅದೇ ಕೆಲಸಮಾಡಿದಳು. ಆಮೇಲೆ ಇಬ್ಬರೂ ಗಂಡಂದಿರು ಹೇಗಿರಬೇಕೆಂಬ ಬಗ್ಗೆ ಒಂದು ಪುಟ್ಟ ಉಪನ್ಯಾಸ ಕೊಟ್ಟರು.

"ಓಹೋ! ಈಗ ದೀಕ್ಷಿತರ ಕೃತಿಯಂತೆ. ಏನೇ ಹೇಳು, ನನಗೆ ಅವರ ಕೃತಿಗಳೆಂದರೆ ಅಷ್ಟು ಇಷ್ಟವಿಲ್ಲ." ನನ್ನ ಹೆಂಡತಿ ರತ್ನಳಿಗೆ ಹೇಳಿದಳು. (ನಾನಂತೂ ಅದರಲ್ಲಿ ಲೆಕ್ಕವೇ ಇಲ್ಲವಲ್ಲ!) "ನನಗೂ ಅಷ್ಟೇ" ರತ್ನ ಹೇಳಿದಳು. "ಈಗ ಟೈಂ ಎಷ್ಟು?" ಗಡಿಯಾರ ನೋಡುತ್ತ "ಐದೂವರೆ" ಅಂದೆ. "ಆದಿತ್ಯನ ಕನವು – ಚೆನ್ನಾಗಿದೆಯಂತೆ. ಅದಕ್ಕೆ ಹೋಗೋಣ" ಅಂತ ನನ್ನ ಹೆಂಡತಿ ಹೇಳಿದಳು. ಏನು ಮಾಡಬೇಕೆಂದು ನಾನು ಆಲೋಚಿಸುವಷ್ಟರಲ್ಲಿ ಅವರಿಬ್ಬರೂ ಗೇಟ್ ಹತ್ತಿರ ಇದ್ದರು.

'ಆದಿತ್ಯನ ಕನವಿಗೆ' ಹೋದೆವು!

# ಭಿತ್ತಿಪತ್ರಿಕೆಗಳು

ಚಲಚ್ಚಿತ್ರ ಭಿತ್ತಿಪತ್ರಿಕೆಗಳನ್ನು ನೋಡಿದಾಗಲೆಲ್ಲ ನನಗೆ ತುಂಬಾ ನಗು ಬರುತ್ತದೆ. ಜನಗಳನ್ನು ಮೋಸಗೊಳಿಸುವುದಕ್ಕೋಸ್ಕರವೇ ಅಷ್ಟೊಂದು ಹಣ ಖರ್ಚುಮಾಡಿ ಈ ಭಿತ್ತಿಪತ್ರಿಕೆಗಳನ್ನು ತಯಾರಿಸುತ್ತಾರೆ. ಭಿತ್ತಿಪತ್ರಿಕೆಗಳ ಅಂದ ಚೆಂದಗಳನ್ನು ನೋಡಿ ಜನರು ಆ ಚಿತ್ರಗಳಿಗೆ ಹೋಗುತ್ತಾರೆಂದು ಚಲಚ್ಚಿತ್ರ ಪ್ರದರ್ಶಕರ ಮತ್ತು ಚಿತ್ರಮಂದಿರಗಳ ಒಡೆಯರ ನಂಬಿಕೆ. ಆದರೆ ನಿಜಕ್ಕೂ ಭಿತ್ತಿಪತ್ರಿಕೆಗಳನ್ನು ನೋಡಿ ಜನರು ಚಿತ್ರಗಳನ್ನು ನೋಡಲು ಹೋಗುತ್ತಾರೆಂದು ಅವರು ತಿಳಿದುಕೊಂಡಿದ್ದರೆ ಅದು ತಪ್ಪು ತಿಳಿವಳಿಕೆ.

ಚಿತ್ರದ ಶೀರ್ಷಿಕೆಗೂ ಭಿತ್ತಿಪತ್ರಿಕೆಗೂ ಯಾವ ಸಂಬಂಧವೂ ಇರುವುದಿಲ್ಲ. ಉದಾಹರಣೆಗೆ ಕೆಲವು ಚಿತ್ರಗಳ ಶೀರ್ಷಿಕೆ ಮತ್ತು ಅವುಗಳ ಬಗ್ಗೆ ಪ್ರದರ್ಶಿಸಲ್ಪಟ್ಟ ಭಿತ್ತಿಪತ್ರಿಕೆಗಳ ಬಗ್ಗೆ ವಿವರಗಳನ್ನು ಕೊಡುತ್ತೇನೆ.

"ಅಮ್ಮ" ಅಂತ ಒಂದು ತಮಿಳು ಚಿತ್ರ. ಆ ಚಿತ್ರದ ಭಿತ್ತಿಪತ್ರಿಕೆಯಲ್ಲಿ ನಡುಪ್ರಾಯದ ಹೆಂಗಸೊಬ್ಬಳು ಉಯ್ಯಾಲೆಯ ಮೇಲೆ ಕುಳಿತಿದ್ದಾಳೆ. ಅಮ್ಮ ಆದವಳು ಉಯ್ಯಾಲೆ ಆಡುತ್ತ ಕುಳಿತುಕೊಂಡರೆ ಆಕೆಯ ಮಕ್ಕಳ ಗತಿಯೇನು? ಆ ಮಕ್ಕಳಿಗೆ ಅಂಗಿ ಚಡ್ಡಿಗಳನ್ನು ಹಾಕುವವರು ಯಾರು? ಗಂಡನಿಗೆ ಅಡುಗೆ ಮಾಡಿ ಬಡಿಸುವವರು ಯಾರು? ಇಂತಹುದರಲ್ಲಿ ನಮ್ಮ ಮನೆಯಾಕೆಯನ್ನು ಈ ಚಿತ್ರಕ್ಕೆ ಕರೆದುಕೊಂಡುಹೋದರೆ, ಅವಳೂ ಈರೀತಿ ಉಯ್ಯಾಲೆ ಆಡುತ್ತ ಕುಳಿತುಬಿಟ್ಟರೆ ನನ್ನ ಗತಿ ಏನು? ತಾಲ್ಲೂಕು ಕಚೇರಿಯಲ್ಲಿ ನಾನೊಬ್ಬ ಇಂದಾ–ಗೆ ಗುಮಾಸ್ತ. ತಾಲ್ಲೂಕು ಕಚೇರಿಯ ಗುಮಾಸ್ತರಿಗೆ ಮನೆಯನ್ನು ತುಂಬಲು ಬೇರಾವ ಪದಾರ್ಥಗಳಿಲ್ಲದಿದ್ದರೂ, ಮಕ್ಕಳಿಂದ ತುಂಬಬಹುದು. ಇನ್ನು ತಾಯಿಯಾದವಳು, ಉಯ್ಯಾಲೆಮೇಲೆ ಹಾಡುತ್ತ ಕುಳಿತುಕೊಂಡು ಬಿಟ್ಟರೆ ನನ್ನ ಮನೆ ನಿರ್ನಾಮವಾಗಿ ಹೋಗುತ್ತದೆಂಬ ದಿಗಿಲು ನನ್ನಲ್ಲಿ ಹುಟ್ಟಿದೆ.

"ಸ್ತ್ರೀಸಾಹಸಂ" ಎಂಬುದೊಂದು ಚಿತ್ರ. ಅದರಲ್ಲಿ ಹೆಂಗಸೊಬ್ಬಳು ತಲೆ ಕೂದಲು ಹರವಿಕೊಂಡು ಕೆಟ್ಟ ಕಣ್ಣಿನಲ್ಲಿ ನೋಡುತ್ತ ಎರಡು ಕೈಯಲ್ಲೂ ಮಗುವನ್ನೆತ್ತಿಕೊಂಡಿದ್ದಾಳೆ. ಇದು "ಸ್ತ್ರೀಸಾಹಸಂ" ಚಿತ್ರದ ಭಿತ್ತಿ ಪತ್ರಿಕೆ. "ಸ್ತ್ರೀಸಾಹಸಂ" ಅಂದರೆ ಭಾರತದ ವೀರ ನಾರಿಯೋರ್ವಳು, ದೇಶದ ಸ್ವಾತಂತ್ರ್ಯ ಸಾಧನೆಗಾಗಿ ಶತ್ರುಗಳನ್ನು ಸದೆಬಡಿಯಲು ಖಡ್ಗ ಹಿಡಿದು ಹೊರಟಿರುತ್ತಾಳೆಂದು ನಾವು ತಿಳಿಯುತ್ತೇವೆ. ಅಥವಾ ಹೆಂಗಸೊಬ್ಬಳು ತನ್ನ ಮಾನಹಾನಿಯ ಪ್ರಯತ್ನ ನಡೆದಾಗ, ಸಿಂಹಿಣಿಯಂತೆ ಹಾರಿ ಅವರೆಲ್ಲರ ಗಂಟಲಗಾಳವನ್ನು ಹಿಸುಕುವಳೆಂದು ತಿಳಿಯಬಹುದು. ಅಥವಾ ರಾಣಿಯೋರ್ವಳು ತನ್ನ ರಾಜ್ಯಕ್ಕೆ ವಿಪತ್ತೊದಗಿದಾಗ, ಸೆರಗು ಸೊಂಟಕ್ಕೆ ಸಿಕ್ಕಿಸಿ ಕುದುರೆಯಮೇಲೆ ಕುಳಿತುಕೊಂಡು ಹೋಗುತ್ತಿರಬಹುದು ಎಂದು ಭಾವಿಸಿದ್ದೇನೆ. ಆದರೆ ಕೈಯಲ್ಲಿ ಮಗು ಹಿಡಿದುಕೊಂಡ ಒಬ್ಬ ಹೆಂಗಸಿನ ಚಿತ್ರ ಬರೆದು ಅದರ ಕೆಳಗಡೆ "ಸ್ತ್ರೀಸಾಹಸಂ" ಅಂತ ಬರೆದರೆ ನಮ್ಮಂಥ ಪಾಮರರು ಏನಂತ ಅರ್ಥಮಾಡಿಕೊಳ್ಳಬೇಕು ! ಮಕ್ಕಳನ್ನು ಹೆರುವುದರಲ್ಲಿಯೋ ಇವಳ ಸಾಹಸವಾಯಿತೇ ? ಹಾಗಾದಲ್ಲಿ ನನ್ನ ಹೆಂಡತಿ ಹದಿಮೂರು ಮಕ್ಕಳ ತಾಯಿ. ಅವಳ ಸಾಹಸದ ಮುಂದೆ ಈ ಸಿನಿಮಾ ತಾರೆಯ ಸಾಹಸ ಎತ್ತಣದು ? ನಮ್ಮ ದೇಶದಲ್ಲಿ ಮಕ್ಕಳ ಸಂಖ್ಯೆ ಜಾಸ್ತಿ. ನಾವು ಎಲ್ಲ ವಿಷಯಗಳಲ್ಲಿ ಹಿಂದೆ ಬಿದ್ದಿದ್ದರೂ ಈ ಒಂದು ವಿಚಾರದಲ್ಲಿ ಪ್ರಪಂಚದ ಎಲ್ಲ ರಿಕಾರ್ಡುಗಳನ್ನೂ ಮುರಿದಿದ್ದೇವೆ. ಅದಕ್ಕೇ ಇರಬೇಕು – ಭಾರತದ ವೀರ ನಾರಿಯರು ಅಂತ ಜನ ಕರೆಯುವುದು !

"ಗಣೇಶಜನ್ಮ" ಎಂಬೊಂದು ಚಿತ್ರ. ಈ ಚಿತ್ರದ ಭಿತ್ತಿಪತ್ರಿಕೆ ಬಹಳ ಕುತೂಹಲಕರವಾಗಿದೆ. ಹದಿನೈದು – ಹದಿನಾರು ವರ್ಷದ ಹುಡುಗಿಯೊಬ್ಬಳು ಸೊಂಟದಮೇಲೆ ಕೈಯಿಟ್ಟುಕೊಂಡಿದ್ದಾಳೆ. ಈಕೆ ಗೌರಿದೇವಿಯಂತೂ ಅಲ್ಲ. ಗಣೇಶನಿಗೆ ಮದುವೆ ಆಗದಿರುವುದರಿಂದ ಅವನ ಹೆಂಡತಿಯೂ ಅಲ್ಲ. ಗಣೇಶಜನ್ಮ ಎಂದರೆ ಆಗಿನ ಕಾಲದ ಸೂಲಗಿತ್ತಿ ಯಾರಾದರೂ ಇರಬಹುದೇ – ಎಂಬ ಪ್ರಶ್ನೆ ಆ ಭಿತ್ತಿಪತ್ರಿಕೆ ನೋಡಿದವರಲ್ಲಿ ಉಂಟಾಗುತ್ತದೆ.

ಭಾರತಭೂಮಿ ಸಾಧುಸಂತರ ಬೀಡು. ಈ ಸಾಧುಸಂತರ ವಿಚಾರವಾಗಿ ಅನೇಕ ಚಿತ್ರಗಳನ್ನು ತಯಾರಿಸಿದ್ದಾರೆ. ಆದರೆ ಈ ಚಿತ್ರಗಳ ಬಗ್ಗೆ ಬಂದಿರುವ

ಭಿತ್ತಿಪತ್ರಿಕೆಗಳ ಮೇಲೆ ಬರೀ ಹುಡುಗಿಯರ ಚಿತ್ರಗಳೇ ಇವೆ. ಹೆಣ್ಣು ಹೊನ್ನು ಮಣ್ಣುಗಳಿಗೆ ತಿಲಾಂಜಲಿ ಇತ್ತಿರುವ ಸಾಧುಸಂತರು ಡಜನ್‌ಗಟ್ಟಲೆ ಈ ಹೆಣ್ಣು ಗಳನ್ನು ಏನು ಮಾಡುತ್ತಾರೆಂಬುದೇ ನನಗೆ ತಿಳಿಯದು.

ಈ ಭಿತ್ತಿಪತ್ರಿಕೆಗಳಲ್ಲಿ ಇನ್ನೂ ಒಂದು ಮೋಸವಿದೆ. ಏನೆಂದರೆ ಭಿತ್ತಿಪತ್ರಿಕೆ ಗಳಲ್ಲಿ ಚಿತ್ರಿತವಾಗಿರುವ ಗಂಡು ಹೆಣ್ಣುಗಳೆಲ್ಲ ಹಸರು, ನೀಲಿ, ಕೆಂಪು ಮುಂತಾದ ಬಣ್ಣಗಳಿಂದ ಕೂಡಿರುತ್ತವೆ. ಆದರೆ ಚಿತ್ರದಲ್ಲಿ ಅವೆಲ್ಲಾ ಕಪ್ಪು ಬಿಳಿಯ ಬಣ್ಣ ಗಳದ್ದಾಗಿರುತ್ತವೆ. ಇದುವರೆಗೂ ನಾನು ಹಸಿರು ಗಂಡಸರನ್ನೂ, ನೀಲಿ ಹೆಂಗಸ ರನ್ನೂ ಎಲ್ಲಿಯೂ ನೋಡಿಲ್ಲ. ಇವರನ್ನು ನೋಡಿರುವುದು ಈ ಭಿತ್ತಿಪತ್ರಿಕೆಗಳ ಮೇಲೆಯೇ.

ಯಾವ ಚಿತ್ರ ಚೆನ್ನಾಗಿದೆ, ಯಾವ ಚಿತ್ರ ಚೆನ್ನಾಗಿಲ್ಲ ಎಂಬುದನ್ನು ಒಂದು ರೀತಿಯಿಂದ ಭಿತ್ತಿಪತ್ರಿಕೆಗಳನ್ನು ನೋಡಿ ಅರ್ಥಮಾಡಿಕೊಳ್ಳಬಹುದು. ಈ ಚಿತ್ರಗಳನ್ನು ನೋಡಿದ ಪ್ರೇಕ್ಷಕ ಮಹಾಶಯರು ತಮ್ಮ ವಿಮರ್ಶೆಯನ್ನು (ಬಹು ಕಟುವಾಗಿ) ಮಾಡಿರುತ್ತಾರೆ. ಚಿತ್ರಪ್ರದರ್ಶಕರೇ ಹೇಳುವಂಥ ಸುಂದರ ನಟಿಗೆ ಗಿರಿಜಾ ಮೀಸೆ ಬರೆದಿರುತ್ತಾರೆ. ನಟಸಿಗೆ ಮೂರುನಾಮ ಹಾಕಿರುತ್ತಾರೆ. ಎಲೆ ಅಡಿಕೆ ಹಾಕಿಕೊಂಡು ಲಕ್ಷಣವಾಗಿ ಉಗುಳಿರುತ್ತಾರೆ. ಇನ್ನು ಕೆಲವು ಭಿತ್ತಿಪತ್ರಿಕೆ ಗಳ ಮೇಲೆ ಅಪ್ಪಟ ಹಸುವಿನ ಸಗಣಿಯಿಂದ ಹೊಡೆದಿರುತ್ತಾರೆ.

"ಮೋಟುಗೋಡೆಗಳ ಮಿಂಡ" ಎಂದು ಕರೆಯಿಸಿಕೊಳ್ಳುವ ಈ ಭಿತ್ತಿಪತ್ರಿಕೆ ಯಿಂದ ಒಂದು ತರಹ ಅನುಕೂಲವೂ ಇದೆ. ಕೇವಲ ಒಂದೂವರೆ ಇಟ್ಟಿಗೆ ದಪ್ಪದ ಗೋಡೆಗಳು, ಭಿತ್ತಿಪತ್ರಿಕೆಗಳನ್ನು ಒಂದರ ಮೇಲೊಂದರಂತೆ ಅಂಟಿಸಿ ಕೊಂಡು ಕೋಟೆಯ ಗೋಡೆಗಳಂತಾಗಿರುತ್ತವೆ. ಮನೆಗಳಿಗೆ ಇವುಗಳಿಂದ ಆಯಸ್ಸು ಹೆಚ್ಚಾಗುವ ಸಂಭವವೂ ಇದೆ.

ಆದರೆ ಒಂದು ವಿಚಾರ. ಸುರಸುಂದರಿಯರೆಂದು ಕರೆಯಿಸಿಕೊಳ್ಳಲ್ಪಡುವ ಸಿನಿಮಾ ತಾರೆಯರನ್ನು ಕಕ್ಕಸು ಗೋಡೆಗಳಮೇಲೆ ಸಹ ಕೂರಿಸುವುದನ್ನು ನೋಡಿ ನನ್ನ ಮನಸ್ಸು ಮಮ್ಮಲ ಮರುಗಿದೆ. ಒಂದು ಗೋಡೆ ಸಿಕ್ಕಿತು, ಅದರ ಮೇಲೆ ಚೀಟಿ ಅಂಟಿಸಲಾಯಿತು ಅನ್ನುವ ಮನೋಭಾವ ಒಳ್ಳೆಯದಲ್ಲ. ಇನ್ನು

ಕೆಲವು ಗೋಡೆಗಳ ಮೇಲೆ ಆರು ತಿಂಗಳ ಹಿಂದೆಯೋ, ಒಂದು ವರ್ಷದ ಹಿಂದೆಯೋ ಪ್ರದರ್ಶಿಸಲ್ಪಟ್ಟ ಭಿತ್ತಿಪತ್ರಿಕೆ ಇನ್ನೂ ಹಾಗೇ ಇರುತ್ತದೆ. ಇದರ ಜೊತೆಗೆ ಒಂದೇ ಚಿತ್ರದ, ಒಂದೇ ರೀತಿಯ ಹತ್ತಿಪ್ಪತ್ತು ಭಿತ್ತಿಪತ್ರಿಕೆಗಳನ್ನು ಒಂದೇ ಸ್ಥಳದಲ್ಲಿ ಅಂಟಿಸಿರುತ್ತಾರೆ. ಇದಕ್ಕಿಂತಲೂ ದೊಡ್ಡದಾದ, ಆಕರ್ಷಕವಾದ ಭಿತ್ತಿಪತ್ರಿಕೆ ಅಂಟಿಸಿದರೇ ಚೆನ್ನು.

# ಕನ್ಯೆ ತೋರಿಸುವುದು

ಪ್ರಪಂಚದಲ್ಲಿ ಏನಾದರೂ ಆಗಬಹುದು, ಹೆಣ್ಣು ಹೆತ್ತ ತಂದೆಯಾಗ ಬಾರದು. ಕನ್ಯೆ ಹುಳ್ಳಗೆ, ಬೆಳ್ಳಗೆ ಇದ್ದರೆ ಹೇಗಾದರೂ ಖರ್ಚುಮಾಡ ಬಹುದು. ಅದು ಅಕಸ್ಮಾತ್ತಾಗಿ ಎಣ್ಣೆಗಪ್ಪೊ, ಎಮ್ಮೆಗಪ್ಪೊ (ಬ್ಲಾಕ್‌ಮಾರ್ಕೆಟ್ ಮಾದರಿಯದು) ಆದರೆ ಜಾತ್ರೆಯಲ್ಲಿ ಕುಂಟುವ ಮುದಿ ಎತ್ತನ್ನು ಮಾರಾಟ ಮಾಡುವಷ್ಟು ತೊಂದರೆ ಆಗುತ್ತದೆ. ಸ್ಕಿಪಿಂಗ್‌ರೋಪ್ ಆಡುವ, ಲಂಗ ಹಾಕಿ ಕೊಳ್ಳುವ ಹುಡುಗಿ ಹಟಾತ್ತಾಗಿ ದೊಡ್ಡ ಹೆಂಗಸಿನಂತೆ ಕಾಣಲಾರಂಭಿಸು ತ್ತಾಳೆ. "ಈಗಿನಿಂದ ಏನವಸರ, ಹುಡುಗಿ ಇನ್ನೂ ಚಿಕ್ಕವಳು. ಎಲ್ಲಿಯಾದರೂ ಸರಿಯಾದ ವರ ನೋಡಿದರಾಯಿತು" ಅಂತ ತಂದೆ ಅಂದುಕೊಳ್ಳುತ್ತಿರುವಾಗಲೇ ಹುಡುಗಿ, ತಾಳೆಮರದಂತೆ ಬೆಳೆದು ನಿಂತಿರುತ್ತಾಳೆ.

ಎಲ್ಲ ಹುಡುಗಿಯರಿಗೂ ಸೋದರ ಸಂಬಂಧದಲ್ಲಿ ಒಂದು ವರ ಇದ್ದೇ ಇರುತ್ತದೆ. ಹುಡುಗಿ 'ಅಂಬಡೇ, ರೈಟ್' ಆಡುತ್ತಿರುವಾಗ, ಹುಡುಗ ಚಿನ್ನಿ ದಾಂಡು ಆಡುತ್ತಿರುವಾಗ, ಇವರಿಬ್ಬರೂ ಗಂಡ ಹೆಂಡತಿಯರೆಂದು ಇಡೀ ಪ್ರಪಂಚ ಒಕ್ಕೊರಲಿನಿಂದ ಸಾರಿರುತ್ತದೆ. ಹುಡುಗ ಆಟವಾಡಿ ಮನೆಗೆ ಬಂದಾಗ "ಪದ್ದೀ ನಿನ್ನ ಗಂಡ ಬಂದ" ಎಂದು ಮನೆಯ ಜನ ಹೇಳುತ್ತಾರೆ. ಹುಡುಗಿ ಹುಸಿ ಮುನಸಿನಿಂದ "ಅವನು ಸಿಂಬಳಬುರಕ, ಅವನ್ನ ಮಾಡಿಕೊಳ್ಳೊಲ್ಲ" ಅಂತ ಹೇಳಿ ಆಚೆಕಡೆ ಮೂತಿ ತಿರುವುತ್ತಾಳೆ. ಹುಡುಗನ ಮುಖ ಟೊಮ್ಯಾಟೋ ಬಣ್ಣಕ್ಕೆ ತಿರುಗುತ್ತದೆ. ಅವನೂ ಹೇಳುತ್ತಾನೆ: "ಜೋಟುದ್ದ ಹೆರಳಿನ ನಿನ್ನಂಥ ತಾಟಕಿಯನ್ನು ಮದುವೆಯಾಗಲು ನಾನೇನು ಕಾದು ಕೂತಿಲ್ಲ." ಮನೆ ಜನವೆಲ್ಲಾ ಘೊಳ್ಳೆಂದು ನಗುತ್ತಾರೆ. "ಜೊತೆ ಅಂದರೆ ಹೀಗಿರಬೇಕು. ಚಿನ್ನದಲ್ಲಿ ವಜ್ರ ಕೂಡಿಸಿದಂತಿದೆ" ಎಂದು ಹೇಳುತ್ತಾರೆ. ಆದರೆ ಹುಡುಗ ಹುಡುಗಿ ಇಬ್ಬರೂ ವಯಸ್ಸಿಗೆ ಬಂದಮೇಲೆ, ಹುಡುಗಿಯ ತಾಯಿಯ (ಹುಡುಗನ ಅಕ್ಕ) ಎದಿರು ಹುಡುಗ ಕಂಚಿನ ಗಂಟೆ ಬಾರಿಸಿದಂತೆ ಹೇಳಿಬಿಡುತ್ತಾನೆ: "ನಾನು ಎತ್ತಿ

ಆಡಿಸಿದ ಹುಡುಗಿ, ಅವಳನ್ನ ನಾನು ತಂಗಿಯಂತೆ ಭಾವಿಸಿದ್ದೇನೆ. ಅವಳ ನನ್ನ ಮದುವೆ ಸಾಧ್ಯವೇ ಇಲ್ಲ" ಎಂದು ಅಂದುಬಿಡುತ್ತಾನೆ. ಅಕ್ಕ ಸೀರೆಯ ಸೆರಗನ್ನು ಕಣ್ಣಿಗೆ ಹಚ್ಚಿಕೊಳ್ಳುತ್ತಾಳೆ. ಎಡಗಡೆ ಗೋಡೆಗೆ ಮತ್ತೆ ಸುಣ್ಣ ಹಚ್ಚುವಂತೆ ಮಾಡುತ್ತಾಳೆ. ಅಂತಃಕರಣ, ಕರಳು, ಕಟ್ಟೆಯ ಕಲ್ಲು ಕಟ್ಟೆಗೆ ಸೇರುವುದು ಮುಂತಾಗಿ ಸುದೀರ್ಘ ಭಾಷಣ ಮಾಡುತ್ತಾಳೆ. ಹುಡುಗ ಎಲ್ಲವನ್ನೂ ಸಾವಧಾನವಾಗಿ ಕೇಳಿ ಎದ್ದು ಹೊರಟುಹೋಗುತ್ತಾನೆ. ಇಲ್ಲಿಗೆ, ಹಳೆಯ ಮನೆ ಮಳೆ ಹೊಡೆತಕ್ಕೆ ಸಿಕ್ಕಿ ಕುಸಿದುಬೀಳುವಂತೆ ಬಿದ್ದುಹೋಗುತ್ತದೆ ಇವರ ಬಾಂಧವ್ಯ.

ಸರಿ, ತಂದೆಗೆ ವರಾನ್ವೇಷಣ ಕಾರ್ಯ ಆರಂಭವಾಗುತ್ತದೆ. ಈಗಿನ ಕಾಲದಲ್ಲಿ ನಾಲ್ಕು ಸಾಹಸೀ ಮತ್ತು ಅಸಾಧ್ಯ ಕಾರ್ಯಗಳಿವೆ. ಅವು ಯಾವೆಂದರೆ: ಹುಡುಗಿಯರಿಗೆ ವರ ಹುಡುಕುವುದು, ಇಂಜನಿಯರಿಂಗ್ ಮತ್ತು ಮೆಡಿಕಲ್ ಕಾಲೇಜುಗಳಲ್ಲಿ ಸೀಟುಗಳನ್ನು ದೊರಕಿಸಿಕೊಳ್ಳುವುದು, ಸರ್ಕಾರಿ ನೌಕರಿ ದೊರಕಿಸಿಕೊಳ್ಳುವುದು ಮತ್ತು ಬಾಡಿಗೆ ಮನೆ ದೊರಕಿಸಿಕೊಳ್ಳುವುದು. ಒಂದು ಸಾರಿ ಒಂದು ಭಾರೀ ಇನ್‌ಷೂರೆನ್ಸ್ ಕಂಪನಿಯವರು ಆರ್ಗನೈಜರ್ ಹುದ್ದೆಗೆ ಉಮೇದುವಾರರು ಅರ್ಜಿಗಳನ್ನು ಹಾಕಿಕೊಳ್ಳಬೇಕೆಂದು ಪತ್ರಿಕೆಗಳಲ್ಲಿ ಜಾಹೀರಾತು ಕೊಟ್ಟಿದ್ದರು. ಅನೇಕರು ಅರ್ಜಿಗಳನ್ನು ಹಾಕಿಕೊಂಡಿದ್ದರು. ಅವರೆಲ್ಲರೂ ಆ ಇನ್‌ಷೂರೆನ್ಸ್ ಕಂಪನಿಯ ಜನರಲ್ ಮ್ಯಾನೇಜರ್‌ರವರನ್ನು ಭೇಟಿ ಮಾಡಬೇಕೆಂದು ಉಮೇದುವಾರರಿಗೆ ತಿಳಿಸಲಾಗಿತ್ತು. ಅವರು ಎಲ್ಲರನ್ನೂ ಭೇಟಿಮಾಡಿದರು. ಕೊನೆಗೆ ಒಬ್ಬ ಉಮೇದುವಾರ ಬಂದ. "ಈ ಕೆಲಸ ಬಹಳ ಕಷ್ಟಕರವಾದದ್ದು, ನಿಮ್ಮ ಅರ್ಹತೆಗಳೇನು ?" ಎಂದು ಜನರಲ್ ಮ್ಯಾನೇಜರ್ ಕೇಳಿದ. ಅದಕ್ಕೆ ಉಮೇದುವಾರ "ಸ್ವಾಮೀ, ನನಗೆ ಯಾವ ಅರ್ಹತೆಗಳೂ ಇಲ್ಲ, ಆದರೆ ಒಂದು ವಿಷಯ ತಿಳಿಸುತ್ತೇನೆ. ನನಗೆ ಏಳು ಜನ ಹೆಣ್ಣುಮಕ್ಕಳು. ಅವರೆಲ್ಲರೂ ಕುರೂಪಿಗಳು. ಅವರೆಲ್ಲರನ್ನೂ ಬಹಳ ಒಳ್ಳೆಯ ವರಗಳಿಗೆ ಗಂಟುಹಾಕಿದ್ದೇನೆ" ಎಂತ ಹೇಳಿದ. ಆರ್ಗನೈಜರ್ ಹುದ್ದೆ ಈ ಉಮೇದುವಾರನಿಗೇ ದೊರೆಯಿತೆಂದು ನಾನು ನಿಮಗೆ ಪ್ರತ್ಯೇಕವಾಗಿ ಹೇಳಬೇಕಾಗಿಲ್ಲವಷ್ಟೆ ?

ಕನ್ಯೆ ಹದಿನಾರರ ಹೊಸಿಲನ್ನು ದಾಟಿ ಇಪ್ಪತ್ತರ ಮೈಲಿಗಲ್ಲಿನ ಬಳಿ

ಬರುತ್ತಾಳೆ. ಆದರೆ ಅವಳಿಗೆ ಹದಿನಾರು ವರ್ಷವೆಂದೇ ಮನೆಮಂದಿಯೆಲ್ಲ ವಿತಂಡವಾಗಿ ವಾದಿಸುತ್ತಾರೆ. ಹುಡುಗಿ ಸಹ ತಾನು ಇನ್ನೂ ಚಿಕ್ಕವಳಂತೆ ಕಾಣಲು ಎರಡು ಜಡೆ, ಸೊಟ್ಟ ಬೈತಲೆಗಳಿಂದಲೇ ಅಲಂಕೃತಳಾಗಿರುತ್ತಾಳೆ. ಹುಡುಗಿಯ ಜಾತಕ ಹೋದ ಬೇಸಗೆಯಲ್ಲಿ ಮನೆಗೆ ಬೆಂಕಿ ಬಿದ್ದಾಗ ಸುಟ್ಟು ಹೋಯಿತೆಂದು ಅವಳ ತಂದೆ ಹೇಳುತ್ತಿರುತ್ತಾನೆ.

ವರ ಇರುವ ಮನೆಗೆ ಕನ್ಯೆಯನ್ನು ಕರೆದುಕೊಂಡು ಹೋಗಬೇಕು. ಪರಸ್ಥಳದಲ್ಲಿದ್ದರೂ ಅಲ್ಲಿಗೆ ಹೋಗಬೇಕು. ಸಾಮಾನ್ಯವಾಗಿ ಕನ್ಯಾಪರೀಕ್ಷೆ ಬಹು ಕಟುವಾಗಿಯೇ ಇರುತ್ತದೆ. ಅವಳು ಈ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದು ಬಹು ಕಷ್ಟ. ವರನ ಸ್ತ್ರೀ ಅನುಬಂಧಿಗಳಲ್ಲದೆ ಅಕ್ಕಪಕ್ಕದ ಮನೆಯವರೂ ಪರೀಕ್ಷಕರಾಗುತ್ತಾರೆ.

"ಹುಡುಗಿಗೆ ವಯಸ್ಸೆಷ್ಟು ?"

"ಹದಿನಾರು" ಹುಡುಗಿಯ ತಂದೆ ತಟಕ್ಕನೆ ನೀರು ಕುಡಿದಂತೆ ಹೇಳುತ್ತಾನೆ.

"ಹದಿನಾರು ! ಹದಿನಾರು ವರ್ಷಕ್ಕೆ ಈ ಹುಡುಗಿ ಹೀಗೆ ಬೆಳೆದಿದ್ದಾಳೆ. ಇಪ್ಪತ್ತೈದರ ಹೊತ್ತಿಗೆ....?" ಮುದುಕಿಯೊಬ್ಬಳು ಮೂಗಿನಮೇಲೆ ಬೆರಳಿಟ್ಟು ತನ್ನ ಆಶ್ಚರ್ಯ ಸೂಚಿಸುತ್ತಾಳೆ.

"ಸಂಗೀತ ಏನಾದರೂ ಹೇಳಿಸಿದ್ದೀರಾ ?" ಮತ್ತೊಬ್ಬ ಹೆಂಗಸು ಕೇಳುತ್ತಾಳೆ.

"ಏನೋ ನಾಲ್ಕು ದೇವರನಾಮ ಬರುತ್ತೆ. ಹಾಗೆ ಕ್ರಮಾಗತವಾಗಿ ಪಾಠ ಹೇಳಿಸಿಲ್ಲ. ಎಲ್ಲಮ್ಮ ಒಂದು ಹಾಡು ಹೇಳು" ತಂದೆ ಹೇಳುತ್ತಾನೆ.

ಗುಂಗಾಡಿಯಂತೆ ಹುಡುಗಿ ಮೂಗಿನಿಂದ ಒಂದು ಹಾಡು ಆರಂಭಿಸುತ್ತಾಳೆ : "ನೀನ್ಯಾಕೊ ನಿನ ಹಂಗ್ಯಾಕೊ".

"ನೋಡಮ್ಮ ! ಈಗಲೇ 'ನೀನ್ಯಾಕೊ ನಿನ ಹಂಗ್ಯಾಕೊ' ಅಂತ ಗಂಡನಿಗೆ ಹೇಳುವ ಹುಡುಗಿ ಅವನಿಗೆ ಅನ್ನ ಕಾಣಿಸ್ತಾಳೇನಮ್ಮಾ ?" ಅಂತ ಒಂದನೆಯ ಮುದುಕಿ ಹೇಳುತ್ತಾಳೆ. ಅಂತೂ ಒಟ್ಟಿನಲ್ಲಿ ಹುಡುಗಿಯಲ್ಲಿ ಇರುವ ಇಲ್ಲದಿರುವ ಲೋಪದೋಷಗಳನ್ನು ಹುಡುಕುತ್ತಾರೆ.

ಅನೇಕ ವರಗಳು ಕನ್ಯೆಯನ್ನು ನೋಡುವ ಗೋಜಿಗೇ ಹೋಗುವುದಿಲ್ಲ. ಏಕೆಂದರೆ ಅವರು ಮದುವೆಯಾಗುವುದು ಮಾವನನ್ನ! ಮಾವ ಧಡೂತಿ ಆಸಾಮಿಯಾಗಿದ್ದರೆ ಸಾಕು. ಅವನ ಮನೆಗೆ ಅಳಿಯ ಆಗಲೇ ಚಕ್ಕಬಂದಿ ಹಾಕಲಾರಂಭಿಸುತ್ತಾನೆ. ಇಂಥ ವರಗಳು ಕನ್ಯೆಯ ಬಗ್ಗೆ ಯಾವ ತಂಟೆ ತಕರಾರೂ ಹಾಕದೆ, ಕೌಲಿ ಬಸವನಂತೆ ತಲೆಹಾಕಿ ಮದುವೆಯಾಗುತ್ತವೆ.

ಇನ್ನು ಕೆಲವು ವರಗಳು ತಮ್ಮ ಭಾವೀ ಜೀವನಕ್ಕೆ ಬೇಕಾದ ವಳಲೆ, ಕಕ್ಕಸು ಡಬ್ಬ ಮೊದಲುಗೊಂಡು ದೊಡ್ಡದೊಂದು ಪಟ್ಟಿಯನ್ನೇ ಬರೆದುಕೊಂಡಿರುತ್ತವೆ. ಈ ಪಟ್ಟಿಯಲ್ಲಿರುವ ಸಾಮಾನುಗಳನ್ನು ಯಾವ ಮಾವ ಪೂರೈಸುವನೋ ಅವನ ಮಗಳನ್ನೇ ಮದುವೆಯಾಗುತ್ತವೆ.

# ಕಳ್ಳಭಟ್ಟಿ ಷರಾಬು ಪತ್ತೆ

ಕಳ್ಳಭಟ್ಟಿ ಷರಾಬು ತಯಾರಿಸುವುದು ಈಚೆಗೆ ಒಂದು ಗೃಹ ಕೈಗಾರಿಕೆಯೇ ಆಗಿದೆ. ಮನೆಯಲ್ಲಿ ಕಾಫಿ ಕಾಯಿಸುವಂತೆ ಅದನ್ನೂ ತಯಾರಿಸುತ್ತಾರೆ.

ದೊಣ್ಣೆ ಕೊಪ್ಪಲಿನ ಪಟೇಲ ರಂಗೇಗೌಡನ ಹಳ್ಳಿಯಲ್ಲಿ ಕಳ್ಳಭಟ್ಟಿ ತಯಾರಾಗುತ್ತಿದೆಯೆಂದು ಎಲ್ಲ ಕಡೆಗೂ ವದಂತಿ ಹಬ್ಬಿತು. ನೆರೆ ಹಳ್ಳಿಯವರೂ ಊರಿನವರೂ ದೊಣ್ಣೆ ಕೊಪ್ಪಲಿಗೆ ಹವಾ ಸೇವನೆಗೆ ಬರುವುದು ಹೆಚ್ಚಾಯಿತು. ಆ ಹಳ್ಳಿಯ ಮನೆಗಳಿಗೆ ಬೀಗರು ಬಿಜ್ಜರು ಬಂದು ಒಂದೆರಡು ದಿನ ತಂಗುವುದಕ್ಕೂ ಶುರು ಆಯಿತು. ಕಿವಿಯಿಂದ ಬಾಯಿಗೆ ಈ ವಿಷಯ ರಬ್ಬರ್ ಚೆಂಡಿನಂತೆ ಪುಟಿಯುತ್ತಾ ಸಬ್ ಡಿವಿಜನ್ ಆಫೀಸರ್‌ರವರ ಘನ ಕಿವಿಗೂ ಬಿದ್ದಿತು. ಅಮಲ್ದಾರರಿಗೂ ಪೋಲೀಸ್ ಇನ್ಸ್ಪೆಕ್ಟರಿಗೂ ಬುಲಾವ್ ಹೋಯಿತು. ದೊಣ್ಣೆ ಕೊಪ್ಪಲಿಗೆ ಹೋಗಿ ವಿದ್ಯಮಾನ ತಿಳಿದುಕೊಂಡು ಬರಬೇಕೆಂದು ಸಬ್ ಡಿವಿಜನ್ ಆಫೀಸರ್ ಹೇಳಿದರು. ಆದರೆ ಅಲ್ಲಿ ಏನೂ ಪತ್ತೆಯಾಗಲಿಲ್ಲ. ಪಟೇಲ ರಂಗೇಗೌಡನನ್ನು ಕರೆದು "ಏನು ಗೌಡರೇ, ನಮಗೇನೋ ತುಂಬ ಅನುಮಾನ ಇದೆ. ನಾವು ಊರಿನಿಂದ ಹೊರಟ ಸುದ್ದಿ ಆ ಕಳ್ಳರಿಗೆ ಹೇಗೋ ಗೊತ್ತಾಗುತ್ತದೆ. ಎಲ್ಲವನ್ನೂ ಅದುಮಿಬಿಡುತ್ತಾರೆ. ನೀವು ಸ್ಥಳವಂದಿಗರು. ನಿಮಗೆ ಅಷ್ಟೇನೂ ತೊಂದರೆಯಾಗಲಾರದು. ಅಲ್ಲದೆ ಇದರಿಂದ ನಿಮಗೆ ತುಂಬಾ ಅನುಕೂಲವೂ ಉಂಟು." ದೊಣ್ಣೆ ಕೊಪ್ಪಲಿನಲ್ಲಿ ಅದೇ ಮಧ್ಯಾಹ್ನ, ಪಾನದಿಂದ ಆಗುವ ಅನರ್ಥಗಳನ್ನು ವಿವರಿಸುವ ಲಾವಣಿ ಮತ್ತು ಚಲನಚಿತ್ರ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿತ್ತು. ರಂಗೇಗೌಡನ ಮನಸ್ಸಿನ ಮೇಲೂ ಇವು ಬಹಳ ಪರಿಣಾಮವನ್ನುಂಟುಮಾಡಿದವು. ಆದರೆ ಒಂದು ವಿಷಯ ಮಾತ್ರ ರಂಗೇಗೌಡನನ್ನು ತುಂಬಾ ಬಾಧಿಸುತ್ತಿತ್ತು. ಏನೆಂದರೆ ಇದನ್ನು ಪತ್ತೆಮಾಡಿದರೆ ಊರಿನವರ ದ್ವೇಷ ಕಟ್ಟಿಕೊಳ್ಳಬೇಕಾಗುತ್ತದೆ. ಆಮೇಲೆ ಅಲ್ಲಿ ಬಾಳ್ವೆ ಮಾಡುವುದೇ ಕಷ್ಟ.

ರಂಗೇಗೌಡ ಬಹಳ ಆಲೋಚಿಸಿದ. ಇವರನ್ನು ಪತ್ತೆಮಾಡಿ, ಇವರಿಗೆ ಬುದ್ಧಿ ಕಲಿಸಿ ಇನ್ನೆಂದೂ ಕಳ್ಳಭಟ್ಟಿ ತಯಾರಿಸದಂತೆ ಇವರಿಂದ ವಾಗ್ದಾನ ತೆಗೆದುಕೊಳ್ಳಬೇಕು, ಎಂತ ನಿರ್ಧರಿಸಿದ.

ರಂಗೇಗೌಡನೂ ಕಸಬುದಾರ. ಕಳ್ಳಭಟ್ಟಿಯನ್ನು ಆಚೆ ಬೀದಿಯಲ್ಲಿರುವ ಕೊರಮರು ತಯಾರಿಸುತ್ತಿದ್ದಾರೆಂದು ಅವನಿಗೆ ಆಗಲೇ ವಾಸನೆ ಬಂದಿತ್ತು. ತನ್ನ ಇಬ್ಬರು ತಳವಾರರನ್ನು ಕರೆಕಳುಹಿಸಿದ. ಅವರಿಗೆ ತಾನು ಹೊರಟಿರುವ ಕಾರ್ಯದ ಬಗ್ಗೆ ವಿವರಣೆ ಕೊಟ್ಟ. "ನೀವು ಮೇಲಿನ ಬೀದಿಯಿಂದ ಹೋಗಿ, ನಾನು ಆಚೆಬೀದಿಯಿಂದ ಬರುತ್ತೇನೆ. ನೀವು ಅವರೊಂದಿಗೆ ಜಗಳವಾಡಬೇಡಿ. ನೀವು ಗಿರಾಕಿಗಳಂತೆಯೋ, ಸ್ನೇಹಿತರಂತೆಯೋ ಹೋಗಿ. ಒಂದು ವಿಷಯ: ನೀವು ಅದನ್ನೇನಾದರೂ ಕುಡಿದರೆ ಬಲಿಹಾಕಿಬಿಡುತ್ತೇನೆ" ಎಂತ ಹೇಳಿದ. ನಿಂಗ, ಹನುಮ (ತಳವಾರರು) ಕೌಲೆ ಬಸವನಂತೆ ತಲೆಹಾಕಿದರು. ಪಟೇಲ ಕೊಟ್ಟ ಹುಕುಮನ್ನು ಪಾಲಿಸಲು ಹೊರಟರು. ಕೊರಮರ ಬೀದಿಗೆ ತಳವಾರರು ಹೋದಕೂಡಲೇ ಒಂದು ನಾಯಿ ಕೆಟ್ಟದಾಗಿ ಬೊಗಳಿತು. ಗುಡಿಸಿಲುಗಳಿಂದ ಒಬ್ಬೊಬ್ಬರಾಗಿ ಹೊರಬಂದರು. ಹಾಗೆಯೇ ಗುಡಿಸಿಲು ಬಾಗಿಲ ಹತ್ತಿರ ನಿಂತರು. ನಿಂಗ, ಹನುಮ ಹುಸಿನಗೆ ನಗುತ್ತಾ ತಮಗೂ "ಅದು ಸ್ವಲ್ಪ" ಬೇಕೆಂದು ಹೇಳಿದರು. ಕೊರಮರು ಹಿಂದು ಮುಂದು ನೋಡದೆ ಮೂಲೆಯಲ್ಲಿದ್ದ ಒಂದು ಗುಡಿಸಿಲಿಗೆ ಕರೆದುಕೊಂಡು ಹೋದರು. ಅಲ್ಲಿ ಗಡಿಗೆಗಳ ಮೇಲೆ ಗಡಿಗೆಗಳನ್ನು ಪೇರಿಸಿಟ್ಟಿದ್ದರು. ಬ್ರಹ್ಮರಂಧ್ರಕ್ಕೆ ನೇರವಾಗಿ ವಾಸನೆ ಹೊಗುವಂತಿತ್ತು. ಬರೀ ವಾಸನೆಯಿಂದಲೇ ಕೈಲಾಸ ಕಾಣಬಹುದಿತ್ತು.

ತಳವಾರರು ಕುತೂಹಲದಿಂದ ಒಂದೊಂದೇ ಗಡಿಗೆಯನ್ನು ನೋಡಿದರು. ಅಷ್ಟುಹೊತ್ತಿಗೆ ಕೊರಮರವನು ಒಂದು 'ಗಳಾಸಿ'ನಲ್ಲಿ ದ್ರಾವಕವೊಂದನ್ನು ತಂದುಕೊಟ್ಟ. ಇಬ್ಬರೂ ಬೇಡವೆಂದು ತಲೆ ಅಲುಗಾಡಿಸಿದರು. ಕೊರಮ ಹೇಳಿದ: "ಐಯ್ ತಗೋಪ್ಪ, ನಿಷಾ ಆಗಾಣಿಲ್ಲ." ನಿಂಗ ಹನುಮನ ಮುಖ ನೋಡಿದ; ಹನುಮ ನಿಂಗನ ಮುಖ ನೋಡಿದ. ಇಬ್ಬರೂ ಒಂದೊಂದು ಗಳಾಸು ತೆಗೆದುಕೊಂಡರು. ಆಮೇಲೆ ಎಷ್ಟನ್ನು ತೆಗೆದುಕೊಂಡರೋ ಯಾರಿಗೂ ಗೊತ್ತಿಲ್ಲ. ಉರ್ದು ಸಂಗೀತ, ಕೋಲಾಟದ ಪದ, ಬೈಲಾಟದ ಕುಣಿತ

ಮುಂತಾದ ಕಾರ್ಯಕ್ರಮಗಳಲ್ಲಿ ಇಬ್ಬರೂ ಭಾಗವಹಿಸಿ ಮೂಲೆಯಲ್ಲಿದ್ದ ಈಚಲು ಚಾಪೆಯಮೇಲೆ ಸುಖವಾಗಿ ಗೊರಕೆ ಹೊಡೆಯಲಾರಂಭಿಸಿದರು.

ಸಂಜೆ ಐದು ಗಂಟೆಗೆ ಇಬ್ಬರೂ ಒದರಿಕೊಂಡು ಎದ್ದರು. ಅವರಿಬ್ಬರ ಎದೆಯಲ್ಲಿ ಅವಲಕ್ಕಿ ಬತ್ತ ಕುಟ್ಟುತ್ತಿತ್ತು. ಕುಡಿಮುಗಿಡಿದರೆ ಗೌಡ ಬಲಿ ಹಾಕುವುದಾಗಿ ಬೇರೆ ಹೇಳಿದ್ದ. ಹಾಗೆಯೇ ಹೆಜ್ಜೆಯಮೇಲೆ ಹೆಜ್ಜೆ ಹಾಕುತ್ತಾ ಇಬ್ಬರೂ ಸಾಗಿದರು. ಊರಾಚೆ ದೊಡ್ಡ ಹೊಲದ ಬದಿ ಇರುವ ಮಾವಿನ ಮರದ ಹತ್ತಿರ ಹೋದರು. ಅಲ್ಲಿದ್ದ ಬಾಂದುಕಲ್ಲಿಗೆ 'ಗೌಡ ಒರಗಿಕೊಂಡು ಕುಳಿತಿದ್ದ. "ಆಜಾ, ಆಜಾ" ಹೇಳುತ್ತಿದ್ದ.

# ಬೇಸ್ತು

ರಾಮಯ್ಯ ತಾಲ್ಲೂಕು ಕಚೇರಿಯಲ್ಲಿ ಶಿಂಬೆ ಗುಮಾಸ್ತೆ, ಅತಿ ಕರಾರು ವಾಕ್ಕಾಗಿ ಹೇಳಬೇಕೆಂದರೆ ಇಂದಾ–ಗೆ ಗುಮಾಸ್ತೆ. ಅವನಿಗೆ ಮಲೆನಾಡು ಅಲೋಯನ್ಸ್ ಸೇರಿ ಮುವ್ವತ್ತೊಂದು ರೂಪಾಯಿ ಎಂಟಾಣೆ ಸಂಬಳ. ಅವನನ್ನು ನೀವು ನೋಡಿದ್ದೀರಿ. ಇಲ್ಲ ಅಂತ ಹೇಳಿದರೆ ನಾನು ಒಪ್ಪುವುದಿಲ್ಲ. ಅಲ್ಯೂ ಮಿನಿಯಂ ಕಟ್ಟಿನ ಕನ್ನಡಕ, ಹಿಂದುಗಡೆ ಅದನ್ನು ಹಳೆಯ ಜನಿವಾರದ ದಾರ ದಿಂದ ಕಟ್ಟಿದೆ. ಮುಖದ ಮೇಲೆ ಹದಿನೈದು ದಿನಗಳ ಅಕ್ಕಿ – ಎಳ್ಳು ಮಿಶ್ರಿತ ಬಣ್ಣದ ಹುಲುಸಾಗಿ ಬೆಳೆದ ಗಡ್ಡ. ವಾರ ತಿಥಿ ದೋಷಗಳು ಸಮರ್ಪಕವಾಗಿರ ಲಿಲ್ಲವೆಂದೂ, 'ಕ್ಷೌರಕ್ಕೆ ಮುಟ್ಟಲು' ಸಾಧ್ಯವಾಗಲಿಲ್ಲವೆಂದೂ, ಈ ಕಾರಣದಿಂದಲೇ ಗಡ್ಡದ ಹೊರೆಯೆಂದೂ ಅವನು ಸಬೂಬು ಹೇಳುತ್ತಾನೆ. ನಿಜಕ್ಕೂ ಅವನ ಜೇಬಿ ನಲ್ಲಿ ಹಣ ಇಲ್ಲದ್ದರಿಂದಲೇ ಅವನು ಜಟಾಧಾರಿಯಾಗಿರುತ್ತಾನೆಂದು ನನಗೆ ಗೊತ್ತು. ಕಾವಿ ಬಣ್ಣಕ್ಕೆ ತಿರುಗಿದ ಪಂಚೆ, ಅದೇ ಬಣ್ಣದ ಕರೀಗೀರಿನ ಷರ್ಟು, ಮುಚ್ಚು ಗುಂಡಿ ಕೋಟು. ಮೊದಲು ಅದು ಯಾವ ಬಣ್ಣದ್ದಾಗಿತ್ತೆಂದು ಹೇಳಲು ಸಾಧ್ಯ ವಿಲ್ಲ. ಈಗಂತೂ ಕತ್ತೆಬಣ್ಣದ್ದಾಗಿತ್ತು. ಕೋಟಿನ ಮೇಲುಗಡೆ ಜೇಬಿನಲ್ಲಿ ಒಂದು ಕರವಸ್ತ್ರ ಅರ್ಥಾತ್ ನಾಸಿಕವಸ್ತ್ರ. ರಾಮಯ್ಯ ನಶ್ಯ ಹಾಕುತ್ತಿದ್ದನೆಂದು ಪ್ರತ್ಯೇಕ ವಾಗಿ ಹೇಳಬೇಕಾಗಿಲ್ಲ. ಈ ಒಂದು ದೃಷ್ಟಿಯಿಂದಲಾದರೂ ತನ್ನ ಘನತೆ ಕೊಂಚ ಮೇಲೇರಲೆಂದು 'ಅಂಬಾಳ್ ಆಫೀಸರ್ ಸ್ನಫ್' ಹಾಕುತ್ತಾನೆ. ಇದಕ್ಕೆ ಅವನ ಹೆಂಡತಿ ವೆಂಕಮ್ಮ ಕತ್ತರೀ ಪ್ರಯೋಗಮಾಡಲು ಹಲವಾರು ಬಾರಿ ಪ್ರಯತ್ನಿಸಿ ವಿಫಲಳಾದಳು. ಅವನು ತನ್ನ ಹೆಂಡತಿಯನ್ನು ಬಿಡಲು ಸಿದ್ಧನಾಗಿದ್ದ, ಆದರೆ ತನಗೆ ಆಮೋದ ಕೊಡುವ ನಶ್ಯ ಬಿಡಲು ಸಿದ್ಧನಾಗಿರಲಿಲ್ಲ. ರಾಮಯ್ಯನ ಬಡತನ, ಅದಕ್ಕೆ ಅಂಟಿಕೊಂಡಿದ್ದ ಕಾರ್ಪಣ್ಯ/ಊರಿನ ಮನೆಮಾತಾಗಿದ್ದಿತು. ವಿಧಿಯಿಲ್ಲದೆ ಅವನು ಸರಳಜೀವಿಯಾಗಿದ್ದ. ಬಡತನಕ್ಕೆ ಬ್ರಹ್ಮೇತಿ ಬೆನ್ನು ಹತ್ತಿದಂತೆ ಮನೆ ತುಂಬ ಮಕ್ಕಳು. ಆ ಊರಿನ ಪ್ರಜಾಸಂಖ್ಯೆ ಹೆಚ್ಚಲು

'ರಾಮಯ್ಯ ದಂಪತಿ'ಗಳೇ ಕಾರಣರೆಂದು ಜನ ಆಡಿಕೊಳ್ಳುತ್ತಿದ್ದರು.

ರಾಮಯ್ಯ ಎಷ್ಟು ಬಡವನೋ ಅಷ್ಟೇ ದಡ್ಡನಾಗಿದ್ದ. ತಾಲ್ಲೂಕು ಕಚೇರಿಯಲ್ಲಿ ಈಗಾಗಲೇ ಅವನು ೨೦-೨೫ ವರ್ಷಗಳಿಂದ ದುಡಿಯುತ್ತ ಬಂದಿದ್ದರೂ ಅವನಿನ್ನೂ 'ಇಂದಾ–ಗೆ' ಗುಮಾಸ್ತೆಯಾಗಿರುವುದೇ ಇದಕ್ಕೆ ಸಾಕ್ಷಿ. ಆಗಾಗ್ಗೆ ಬಂದ ಅಮಲ್ದಾರರುಗಳು ಇವನ ಬಡತನಕ್ಕೆ ಮನಕರಗಿ ಸ್ವಲ್ಪ ದೊಡ್ಡ ಕೆಲಸಗಳನ್ನು ಕೊಡಿಸಿದ್ದೂ ಉಂಟು. ಕೊನೆಗೆ ಶೇಕದಾರನನ್ನಾಗಿ ಮಾಡಿ ಅವನಿಗೆ ವಿಶ್ರಾಂತಿ ಕೊಡಬೇಕೆಂದು ಅವರು ಪ್ರಯತ್ನಿಸಿದರು. ಆದರೆ ರಾಮಯ್ಯನ ಮೊಂಡತನ ಅವರ ಎಲ್ಲ ಪ್ರಯತ್ನಗಳನ್ನೂ ವಿಫಲಗೊಳಿಸಿತು.

ಇದೇ ತಾಲ್ಲೂಕು ಕಚೇರಿಯಲ್ಲಿ ರಾಮಯ್ಯನ ಪ್ರತಿಕಕ್ಷಿಯಿದ್ದ. ಅವನ ಹೆಸರು ಕೃಷ್ಣಪ್ಪ – ತಕರಾರುತಃಖ್ತೆ ಗುಮಾಸ್ತೆ. ರಾಮಯ್ಯನಿಗೂ ಕೃಷ್ಣಪ್ಪನಿಗೂ ಹೆಚ್ಚುಕಡಿಮೆ ಯಾವುದರಲ್ಲಿಯೂ ಅಂತರವಿರಲಿಲ್ಲ. ತಕರಾರುತಃಖ್ತೆ ಬಾಬು ಕೊಂಚ ಲಾಭದಾಯಕವಾದ್ದರಿಂದ ಕೃಷ್ಣಪ್ಪನಿಗೆ ಮೇಲು ಸಂಪಾದನೆಯ ಪುಡಿ ಕಾಸುಗಳು ದೊರಕುತ್ತಿದ್ದವು. ರಾಮಯ್ಯನಿಗೆ ಅದೂ ಇಲ್ಲ. ಇವರಿಬ್ಬರಿಗೂ ವಾಗ್ಯುದ್ಧ ತಪ್ಪುತ್ತಲೇ ಇರಲಿಲ್ಲ. ಒಬ್ಬರ ಮೇಲೊಬ್ಬರು ಹೆಡ್ ಗುಮಾಸ್ತೆಯಲ್ಲಿಯೂ, ಅಮಲ್ದಾರರಲ್ಲಿಯೂ ಸಂದರ್ಭ ಸಿಕ್ಕಿದಾಗಲೆಲ್ಲ ಚಾಡಿ ಹೇಳುತ್ತಿದ್ದರು.

ಅವೊತ್ತು ಒಂದನೆಯ ತಾರೀಖಿನ ಸಂಜೆಗೇ ರಾಮಯ್ಯನಿಗೆ ಸಂಬಳ ಆಯಿತು. ಸಂಬಳ ಬಂದ ದಿನ ನೇರವಾಗಿ ಮನೆಗೇ ಬರಬೇಕೆಂಬ ಹೆಂಡತಿಯ ಕಟ್ಟಾಣತಿಯನ್ನು ಪರಿಪಾಲಿಸಲು ಅವನು ದಿನದ ನಿದಾನದ ನಡಿಗೆಗಿಂತ ಕೊಂಚ ಬಿರುಸಾಗಿಯೇ ಬರುತ್ತಿದ್ದ. "ಸ್ವಾಮಿ" ಅಂತ ಯಾರೋ ಕೂಗಿದ ಹಾಗಾಯಿತು. ಸಾಮಾನ್ಯವಾಗಿ ರಾಮಯ್ಯ ಯಾರಿಂದಲೂ 'ಸ್ವಾಮಿ' ಅನ್ನಿಸಿಕೊಂಡು ಅಭ್ಯಾಸವಿಲ್ಲ. ಆಬಾಲವೃದ್ಧರಾದಿಯಾಗಿ ಎಲ್ಲರೂ ಅವನನ್ನು ಬರೀ 'ರಾಮಯ್ಯ' ಎಂತಲೇ ಕರೆಯುವ ಅಭ್ಯಾಸ ಇಟ್ಟುಕೊಂಡಿದ್ದಾರೆ. ರಾಮಯ್ಯ "ಯಾರು ?" ಅಂತ ಕೊಂಚ ಗಡುಸಾಗೇ ಕೇಳಿದ. ಅವನ ಸ್ವಭಾವವೇ ಹೀಗೆ. ಜೇಬಿನಲ್ಲಿ ಎರಡಾಣೆ ಇದ್ದರೆ ಪೇಟೆಯನ್ನೇ ಕೊಂಡುಕೊಳ್ಳುವ ದಿಟ್ಟತನ ಅವನಲ್ಲಿ. ಈದಿನ ಮುವ್ವತ್ತೊಂದು ರೂಪಾಯಿ ಏಳಾಣೆ ಅವನಲ್ಲಿತ್ತು. (ಒಂದಾಣೆ ರಸೀತಿ ಸ್ಟಾಂಪಿಗೆ

ಖರ್ಚಾಗಿತ್ತು). ಅವನನ್ನು ಮಾತನಾಡಿಸುವ ದಾಷ್ಟೀಕ ಯಾರಿಗಿದೆ? "ಏನಯ್ಯ ಅದು?" ರಾಜಠೀವಿಯಿಂದ ರಾಮಯ್ಯ ಮಾತನಾಡಿಸಿದ.

"ನನ್ನದು ಬೆಂಗಳೂರು, ಏನೋ ಇಲ್ಲಿ ಕೆಲಸ ಸಿಕ್ಕೀತೆಂದು ಗಂಡ ಹೆಂಡತಿ ಬಂದೆವು. ಕೆಟ್ಟಕಾಲ ಸ್ವಾಮಿ, ಯಾವ ಕೆಲಸವೂ ಸಿಕ್ಕಿಲ್ಲ. ಊರಿಗೆ ಹೋಗ ಬೇಕೆಂದು ಮಾಡಿದ್ದೇವೆ. ಅದಕ್ಕೆ........"

"ಅದಕ್ಕೆ ನಾನೇನು ಮಾಡಬೇಕಂತ ಮಾಡಿದ್ದೀಯ? ನಿಮ್ಮಂಥವರಿಗೆ ಕೊಟ್ಟು ಕೊಟ್ಟು ನಾವೆಲ್ಲ ನುಣ್ಣಗಾಗಿ ಹೋದೆವು."

"ನಾನೇನು ಹಾಗೆ ಧರ್ಮ ಕೇಳೋದಿಲ್ಲ ಸ್ವಾಮಿ. ನನ್ನ ಹೆಂಡತಿ ಕಿವಿಯಲ್ಲಿ ಓಲೆ ಜೊತೆ ಇತ್ತು. ಹೋದ ವರ್ಷ ನಂಜನಗೂಡು ನದಿಯಲ್ಲಿ ಒಂದು ಕಳೆದುಹೋಯಿತು. ಇನ್ನೊಂದು ಇದೆ, ಅದನ್ನು ತೆಗೆದುಕೊಂಡು ಏನಾದರೂ ಕೊಡಿ" ಎಂದು ಹೇಳುತ್ತಾ ಒಂದು ಓಲೆಯನ್ನು ರಾಮಯ್ಯನ ಕೈಗಿತ್ತ.

"ಇವೆಲ್ಲಾ ನಮಗ್ಯಾಕಯ್ಯ?" ಎಂದು ಹೇಳುತ್ತಾ ರಾಮಯ್ಯ ಓಲೆಯ ತೂಕವನ್ನು ತನಗರಿವಾಗದಂತೆಯೇ ನೋಡಿದ, ಏನೋ ದಿನವೂ ಚಿನ್ನವನ್ನು ಖರೀದಿ ಮಾಡುವವನಂತೆ. ಥಳಥಳ ಹೊಳೆಯುತ್ತಿತ್ತು. ತುಂಬಾ ಭಾರವಾಗಿತ್ತು. ಮನುಷ್ಯ ನೋಡಲು ಸಂಭಾವಿತನಂತೆಯೇ ಕಾಣುತ್ತಿದ್ದ. ಆದರೂ ಈ ಹಾಳು ರೇಜಿಗೆ ತನಗೇಕೆಂದು ರಾಮಯ್ಯ "ಇದೆಲ್ಲಾ ಕಟ್ಟಿಕೊಂಡು ನಾನೇನು ಮಾಡಲಿ" ಅಂತ ಹೇಳುತ್ತ ಮುಂದೆ ಹೆಜ್ಜೆ ಹಾಕಿದ. ಅಷ್ಟರಲ್ಲಿ ಆ ಮನುಷ್ಯ ಎರಡು ಕಣ್ಣುಗಳಿಂದಲೂ ನೀರನ್ನು ಕೋಡಿಯಾಗಿ ಹರಿಸುತ್ತ "ನಿಮ್ಮಂಥವರೇ ಹೀಗೆಂದರೆ ಹೇಗೆ ಸ್ವಾಮಿ? ನನ್ನ ಹೆಂಡತಿಯ ಮೇಲೆ ಆಣೆ ಇಟ್ಟು ಹೇಳುತ್ತೇನೆ. ಇದು ಚಿನ್ನದ್ದು. ಇದರ ಬೆಲೆಯನ್ನು ಹೇಳಿದರೆ ನೀವು ನಂಬುವುದಿಲ್ಲ. ಒಂದಿದೆ, ತೆಗೆದುಕೊಂಡು ನಿಮಗೆ ತಿಳಿದದ್ದು ಕೊಡಿ" ಅಂತ ಹೇಳುತ್ತ ಇನ್ನೂ ಗಳಗಳನೆ ಅಳಲಾರಂಭಿಸಿದ. ರಾಮಯ್ಯನ ಅಂತಃಕರಣದ ಕೋಡಿ ಸೂಸಿ ಹರಿಯಿತು. ಮತ್ತು ಲೆಕ್ಕ ಹಾಕಿದ, ಇದನ್ನು ಮಾರಿದರೆ ಹಾದಿಯಲ್ಲಿ ಹೋಗುವ ಕಳ್ಳನೂ ೧೫-೨೦ ರೂಪಾಯಿ ಕೊಡುತ್ತಾನೆ. ದಾನವೂ ಆಯಿತು, ಲಾಭವೂ ಆಯಿತು. ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಹೊಡೆದ ಹಾಗೆ, ಎಂದು ಯೋಚಿಸಿ ಜೇಬಿಗೆ ಕೈಹಾಕಿ ಮೂರು ರೂಪಾಯಿ ಆರಾಣೆ ತೆಗೆದುಕೊಟ್ಟ.

ಆ ಮನುಷ್ಯ "ಏನು ಸ್ವಾಮಿ, ಇನ್ನೆರಡು ರೂಪಾಯಿ ಕೊಡಬಾರದೆ?" ಅಂತ ಅಂಗಲಾಚಿದ. "ಇದರ ಬೆಲೆ ಎಷ್ಟೆಂಬುದು ನನಗೆ ಗೊತ್ತು. ಸಾಕು, ತೆಗೆದು ಕೊಂಡು ಹೋಗು" ಅಂತ ಜಬರ್‌ದಸ್ತಿಯಲ್ಲಿ ಹೇಳಿ ರಾಮಯ್ಯ ಮನೆಯ ಕಡೆ ಹೊರಟ.

ಮನೆಗೆ ಹೋಗುತ್ತ ದಾರಿಯಲ್ಲಿ ರಾಮಯ್ಯ ಈ ರೀತಿ ಲೆಕ್ಕಹಾಕಿದ. ಆ ದಿನ ಸಂಬಳ ಆಗಲಿಲ್ಲ ಅಂತ ಹೇಳುವುದು. ಮಾರನೆಯ ದಿನ ಓಲೆಯನ್ನು ಮಾರಿ ಬಂದ ಹೆಚ್ಚು ಹಣವನ್ನು ತನ್ನ ಸ್ವಂತಕ್ಕೆ ಉಪಯೋಗಿಸಿಕೊಳ್ಳುವುದು.

ಮಾರನೆಯ ದಿನ ಕಚೇರಿ ಮುಗಿದ ಕೂಡಲೇ ರಾಮಯ್ಯ ಪೇಟೆ ಕಡೆ ಹೊರಟ. ಅಕಸ್ಮಾತ್ತಾಗಿ ಹಿಂದಿರುಗಿ ನೋಡಿದಾಗ ಕೃಷ್ಣಪ್ಪ ಬರುತ್ತಿರುವುದನ್ನು ನೋಡಿದ. 'ಎಲಾ, ಈ ನೀಚ ನನ್ನ ಹಿಂದೆ ಏಕೆ ಬರುತ್ತಿದ್ದಾನೆ!' ಅಂತ ಅನುಮಾನಿಸಿ ನಿಂತುಕೊಂಡ.

"ಏನು ಕೃಷ್ಣಪ್ಪ, ಎತ್ತ ಹೊರಟೆ?" ರಾಮಯ್ಯ ಕೇಳಿದ. "ಏನಿಲ್ಲ, ಪೇಟೆಯಲ್ಲಿ ಸ್ವಲ್ಪ ಕೆಲಸವಿದೆ. ನಿನ್ನೆ ಅಗ್ಗವಾಗಿ ಒಂದು ಓಲೆ ಸಿಕ್ಕಿತು. ನಾಲ್ಕೇ ರೂಪಾಯಿ ಕೊಟ್ಟು ಕೊಂಡಿದ್ದೆ. ಅದನ್ನ ಮಾರೋಣ ಅಂತ ಹೊರ ಟಿದ್ದೆ" ಎಂತ ಕೃಷ್ಣಪ್ಪ ಠೀವಿಯಿಂದಲೂ ರಾಜಗಾಂಭೀರ್ಯದಿಂದಲೂ ಹೇಳಿ ಓಲೆ ತೋರಿಸಿದ.

ರಾಮಯ್ಯ ಜೇಬಿಗೆ ಕೈಹಾಕಿ "ಅದರ ಜೊತೆ ಇಲ್ಲಿದೆ ನೋಡಿ!" ಅಂತ ತಾನು ಕೊಂಡಿದ್ದ ಓಲೆ ತೋರಿಸಿದ.

ಒಬ್ಬರ ಮುಖ ಒಬ್ಬರು ನೋಡಿಕೊಂಡರು. ಎರಡು ಮುಖಗಳೂ ಹರಳೆಣ್ಣೆ ಕುಡಿದಂತಾಗಿದ್ದವು.

# ಅದೃಷ್ಟ

ಪ್ರಜಾಮತ ಪತ್ರಿಕೆಯಲ್ಲಿ ಭವಿಷ್ಯ ಬರೆಯುವ ವ್ಯಾಪಣಕರರಿಗೂ ನನಗೂ ಯಾವುದೋ ಜನ್ಮದ ವೈರ ಇದ್ದಂತೆ ಕಾಣುತ್ತದೆ. ನನ್ನ ರಾಶಿಯ ಭವಿಷ್ಯ ಬರೆಯುವಾಗ ಅದೇನು ಮಸಲತ್ತು ಮಾಡಿ ಬರೆಯುತ್ತಿದ್ದರೋ ನನಗೆ ತಿಳಿಯದು. ಗ್ರಹಚಾರವೇ ಹಾಗಿತ್ತೋ, ವ್ಯಾಪಣಕರರ ಭವಿಷ್ಯವೇ ಹಾಗಿತ್ತೋ ಅದೂ ನನಗೆ ತಿಳಿಯದು. ಒಟ್ಟಿನಲ್ಲಿ ಅವರು ಬರೆದ ಕೆಟ್ಟ ಭವಿಷ್ಯಗಳೆಲ್ಲ ನಿಜವಾಗುತ್ತಿದ್ದವು. ಆದರೆ ಅಕಸ್ಮಾತ್ತಾಗಿ ಒಂದು ಬಾರಿ ನನ್ನ ರಾಶಿಗೆ ಅವರು ಬಹಳ ಒಳ್ಳೆಯ ಭವಿಷ್ಯ ಬರೆದಿದ್ದರು. "ನಿಮ್ಮ ಮೊಂಡ ಪತ್ನಿಯು ನೀವು ಹೇಳಿದ ಹಾಗೆ ಕೇಳುವಳು. ಆರೋಗ್ಯ, ಆರ್ಥಿಕಸ್ಥಿತಿ ಠೀಕ್. ಸಟ್ಟಾ, ಲಾಟರಿ, ರೇಸ್‌ಗಳಲ್ಲಿ ಜಯ. ಗೆಳೆಯರೇ, ಜಯದುಂದುಭಿ ಬಾರಿಸಿರಿ. ವಿಜಯಶ್ರೀಯು ನಿಮ್ಮ ಕೊರಳಿಗೆ ಮಾಲೆ ಹಾಕಲಿದ್ದಾಳೆ. ಬಂದಿರುವ ಸದವಕಾಶವನ್ನು ನಿಮ್ಮ ಉಪಯೋಗಕ್ಕೆ ತಿರುಗಿಸಿಕೊಳ್ಳಿರಿ."

ಇತ್ತೀಚೆಗೆ ಹೀನ ಅದೃಷ್ಟ ಒಂದೇ ಸಮನೆ ಸಾಕಿದ ನಾಯಿಯಂತೆ ಎಡತಾಕುತ್ತಿರುವಾಗ, ಅಕಸ್ಮಾತ್ತಾಗಿ ಒಳ್ಳೆಯದೇನಾದರೂ ಸಂಭವಿಸಬಹುದೆಂಬ ಸುದ್ದಿಯನ್ನು ಕೇಳಿದರೆ ಹೇಗಾಗುತ್ತದೆಂಬುದನ್ನು ನೀವೇ ಊಹಿಸಿ. ಹೇಗಾದರೂ ಮಾಡಿ ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಆಲೋಚಿಸಿದ್ದೆ. ಈಗಿನ ಕಾಲದಲ್ಲಿ ಸಾಯುವ ಪ್ರಯತ್ನಮಾಡಿ ಸ್ವಲ್ಪ ಹೆಚ್ಚು ಕಡಿಮೆಯಾಗಿ ಬದುಕಿಕೊಂಡರೆ ಜೈಲಿನಲ್ಲಿ ವರ್ಷವೋ ಆರು ತಿಂಗಳೋ ಕೊಳೆಯಬೇಕು. ಸಾಯುವುದಕ್ಕೆ ಮಾಡಿದ ಒಂದು ಪ್ರಯತ್ನ ವಿಫಲವಾದರೆ ಇನ್ನೊಂದು, ಮತ್ತೊಂದು ಹೀಗೆ ತಯಾರಿಸಿಕೊಂಡಿರಬೇಕು. ಹೀಗೆ ಈ ಎಲ್ಲ ಪ್ರಯತ್ನಗಳಿಗೆ ಒಟ್ಟು ಒಂಬತ್ತು ರೂಪಾಯಿ ನಾಲ್ಕೂವರೆ ಆಣೆ ವೆಚ್ಚವಾಗುತ್ತದೆ. ಹೇಗೆಂದರೆ—

| | | | | |
|---|---|---|---|---|
| ಮೈಲುತುತ್ತ .... .... | .... | 0 | 1 | 0 |
| ಪೊಟಾಸಿಯಂ ಸಿಯಾನೈಡ್ .... | .... | 0 | 8 | 0 |
| ಹಗ್ಗ .... .... | .... | 0 | 6 | 0 |
| ಗುಟ್ಟಹಳ್ಳಿಗೆ ಬಸ್ ಚಾರ್ಜ್ .... (ಅಲ್ಲೇ ಕೆಂಪಾಬುಧಿ ಕೆರೆ) | .... | 0 | 2 | 0 |
| ರೈಲ್ವೆ ಲೆವಲ್‌ಕ್ರಾಸಿಂಗ್‌ಗೆ ಬಸ್ ಚಾರ್ಜ್ | .... | 0 | 3 | 6 |
| ಕಾಫ್‌ಮನ್ ರೇಜರ್ .... | .... | 8 | 0 | 0 |
| ಒಟ್ಟು... | | 9 | 4 | 6 |

ನನ್ನಲ್ಲಿ ಮೇಲ್ಕಂಡ ಒಂಬತ್ತು ರೂಪಾಯಿ ನಾಲ್ಕುವರೆ ಆಣೆ ಇಲ್ಲದ್ದರಿಂದ ನನ್ನ ಆತ್ಮಹತ್ಯ ಸಿರ್ಧಾರವನ್ನು ಬದಿಗೊತ್ತಬೇಕಾಯಿತು.

ಇರಲಿ; ಆ ವಾರ ಅಂಥ ಒಳ್ಳೆಯ ಭವಿಷ್ಯ ನೋಡಿದ ಕೂಡಲೇ ನನ್ನ ಮನಸ್ಸು ಅ ರ ಳಿ ಯ ಂ ತೆ ಹಗುರವಾಯಿತು. ಬಾಯಿಂದ ತನಗೆ ತಾನೇ 'ಆವಾರಾಹೂಂ' ಎಂಬ ಚಿತ್ರಗೀತೆ ಹೊರಟಿತು. ಮನೆಯಲ್ಲಿಯೇ ಇದ್ದರೆ ಒಳ್ಳೆಯ ಅದೃಷ್ಟಕ್ಕೆ ಮಂಕು ಹಿಡಿದೀತೆಂದು ಹೊರಬಿದ್ದೆ. ದಾರಿಯಲ್ಲಿ ಅರ್ಧ ಕಣ್ಣುಮುಚ್ಚಿ ಕೂತಿದ್ದ ಕುರುಡನ ಅಲ್ಯೂಮಿನಿಯಂ ತಟ್ಟೆಯಲ್ಲಿ ಒಂದಾಣೆ ಹಾಕಿ ಮುಂದೆ ಹೊರಟೆ.

ಎದುರಿಗೆ ನಮ್ಮ ಬೀದಿಯ ಪೋಸ್ಟ್‌ಮ್ಯಾನ್ ಸಿಕ್ಕಿದ. ಸರಿ, ಕಾಗದ ಕೊಡಯ್ಯ ಅಂದರೆ ಟೆಲಿಗ್ರಾಂ ಕೊಟ್ಟ. ನಮ್ಮಲ್ಲಿ ಯಾರಾದರೂ 'ಗೊಟಕ್' ಅಂದಾಗ ಮಾತ್ರ ಟೆಲಿಗ್ರಾಮು ಬರುವುದು ವಾಡಿಕೆ ಇರುವುದರಿಂದ ಮನಸ್ಸಿನಲ್ಲಿಯೇ ಕಾಹಿಲೆಯಾದವರ ಪಟ್ಟಿಯನ್ನೆಲ್ಲಾ ನೋಡಿದೆ. ಈ ಸಂಶಯ ಸಾಮ್ರಾಜ್ಯ ಎಲ್ಲಿಯವರೆಗೆ ಎಂದು ಕವರು ಬಿಚ್ಚಿದೆ. ನಾನಲ್ಲದೆ ಇನ್ನಾರಾದರೂ ಆಗಿದ್ದರೆ ಅಲ್ಲಿಯೇ ಹಾರ್ಟ್‌ಫೇಲ್ ಆಗಿ ಸತ್ತುಹೋಗುತ್ತಿದ್ದರು. ಎರಡು ಮಹಾಯುದ್ಧಗಳು, ನಿರಂತರ ಅಭಾವ, ಬಹುಕಾಲ ಕ್ಷಾಮ, ಐದು ಜನ ಹೆಣ್ಣು ಮಕ್ಕಳು, ಮೊಂಡ ಹೆಂಡತಿ, ಇಷ್ಟೆಲ್ಲ ಕಂಡಿರುವ ನಾನು ಇಂಥದಕ್ಕೆಲ್ಲ ಗಾಬರಿ ಪಡುವವನಲ್ಲ. ಆ ಸಾರಿ ನಾನು ಕಳಿಸಿದ್ದ ಕ್ರಾಸ್‌ವರ್ಡ್ ಪಜಲ್‌ನಲ್ಲಿ ನನಗೆ

ಮೊದಲನೆಯ ಬಹುಮಾನ ಬಂದಿತ್ತು, ಅಷ್ಟೇ. ಟೆಲಿಗ್ರಾಂ ತೋರಿಸಿ ಸಾಹುಕಾರನಿಂದ ಒಂದು ಸಾವಿರ ರೂಪಾಯಿ ಕೈಗಡ ತೆಗೆದುಕೊಂಡೆ.

ಅದೃಷ್ಟದ ಒಂದು ಪೊದರು ಸಿಕ್ಕಿತೆಂದರೆ ಅದನ್ನು ಅಲ್ಲಿಗೇ ಬಿಡುವುದು ಮೂರ್ಖತನ. ಆ ದಿನ ರೇಸ್ ಇತ್ತು. ನೇರವಾಗಿ ಅಲ್ಲಿಗೆ ಹೋದೆ. ಸಾಮಾನ್ಯವಾಗಿ ರೇಸ್‌ನಲ್ಲಿ ನಾನು ಎಂದೂ ಮೂರುಕಾಸು ಕಂಡವನಲ್ಲ. ಆ ದಿನ ನಾನು ಪಂದ್ಯ ಕಟ್ಟಿದ ಕುದುರೆ ಫೇವರಿಟ್ ಇರಲಿ, ಫ್ಲೂಕ್ ಇರಲಿ ದಡ ದಡ ಅಂತ ಗೆಲ್ಲುತ್ತಿತ್ತು. ನನ್ನ ಹಳೆಯ ಕೋಟಿನ ಜೇಬುಗಳೆಲ್ಲ ನೋಟಿನ ಕಂತೆಗಳಿಂದ ತುಂಬಿದ್ದವು.

ಸಿದ್ಧಪಡಿಸಿದ ಉಡುಪುಗಳ ಅಂಗಡಿಗೆ ಹೋಗಿ ಸಾಲಂಕೃತನಾಗಿ ಹೊರಗೆ ಬಂದೆ. ನನ್ನ ಹಳೆಯ ಬಟ್ಟೆಗಳನ್ನೆಲ್ಲ ಯಾವನೋ ಭಿಕ್ಷುಕನಿಗೆ ಕೊಟ್ಟುಬಿಟ್ಟೆ. ಕಾಲಲ್ಲಿ ಹೊಸ ಚಪ್ಪಲಿಯೂ ರಾರಾಜಿಸಲಾರಂಭಿಸಿತು.

ಪೇಟೆಯಲ್ಲಿ ಹಾಗೇ ಹೋಗುತ್ತಿರುವಾಗ ಎದುರಿಗೆ ನಳಿನಿ ಸಿಕ್ಕಿದಳು. ಯಾವ ನಳಿನಿ ಅನ್ನುತ್ತೀರಾ? ಅವಳೇ ನನ್ನ ಕಾಲೇಜು ಗೆಳತಿ. ಅವಳೇ ನನ್ನ ಜೀವನದ ಸಂಗಾತಿಯೂ ಆಗಬೇಕಿತ್ತು. ಆದರೆ ನನ್ನ ತಂದೆತಾಯಿಗಳ ಬಲವಂತಕ್ಕೆ ಸಿಕ್ಕಿ, ಭಾವೀ ಹೆಂಡತಿಯ ಮುಖ ನೋಡದೆ ಮಾವ ಕೊಡುವ ಎರಡು ಸಾವಿರ ರೂಪಾಯಿಗಳ ಮುಖ ನೋಡಿ, ಮದುವೆಯಾದೆ. ನಳಿನಿ ವರ್ಷ ಒಪ್ಪತ್ತು ನನ್ನೊಡನೆ ಮಾತೇ ಬಿಟ್ಟಿದ್ದಳು. ಎರಡು ಸಾವಿರ ರೂಪಾಯಿ ಎರಡು ಸಾವಿರ ದಾರಿ ಹಿಡಿದು ನಾನು ನಿರುದ್ಯೋಗಿಯಾದ ಮೇಲೆ ಆಗಾಗ್ಗೆ ನನ್ನ ಆರೋಗ್ಯ ವಿಚಾರಿಸುತ್ತಿದ್ದಳು. ಆದಿನ ಅವಳು ನನ್ನನ್ನು ಕಂಡೊಡನೆ ನಗೆದಿಂಗಳನ್ನೇ ಹರಿಸಿದಳು. ಕವಿಗಳು ಹೇಳುವ ಹಾಗೆ ಅವಳ ಕಣ್ಣುಗಳು ಯಾವುದೋ ವಿಚಿತ್ರಭಾವವನ್ನು ಸೂಚಿಸುತ್ತಿದ್ದವು.

"ನೆನೆಸಿದವರು ಮನಸ್ಸಿನಲ್ಲಿಯೇ. ನೀವು ಸಿಕ್ಕರೆ ಎಷ್ಟು ಚೆನ್ನಾಗಿತ್ತು ಅಂತ ಅಂದುಕೊಂಡೆ. ದೇವರು ಪ್ರತ್ಯಕ್ಷವಾದ ಹಾಗೆ ಎದಿರು ನಿಂತಿದ್ದೀರಿ. ಏನು, ದೊಡ್ಡ ಕೆಲಸವಾಯಿತೆ? ಅಥವಾ ನಿಮ್ಮ ಅನುಬಂಧಿಗಳಾರಾದರೂ ನಿಮಗೆ ಹಣ ಬಿಟ್ಟು ಸತ್ತರೆ?"

"ಇಲ್ಲ ನಳಿನಿ, ಏನೋ ಬಿಜಿನೆಸ್ ಮಾಡುತ್ತಿದ್ದೇನೆ. ಏನೋ ೫೦-೬೦ ಸಾವಿರ ಬಂದಿರಬಹುದು."

"ಏನಾದರೇನು ? ನನಗೆ ಯಾವುದೂ ಲಭ್ಯವಿಲ್ಲ" ಎಂದು ಹೇಳುತ್ತಾ ಕರವಸ್ತ್ರವನ್ನು ಕಣ್ಣಿಗೆ ಹಚ್ಚಿದಳು.

"ಛೆ, ಛೆ, ಎನಿದನ್ಯಾಯ. ನನ್ನ ದೇಹಪಂಜರದಲ್ಲಿ ಕೊನೆ ಉಸಿರಿರುವ ವರೆಗೆ ನಿನ್ನ ಕಣ್ಣುಗಳಲ್ಲಿ ನೀರು ಬಂದಿದ್ದನ್ನು ನೋಡಲಾರೆ" ಎಂದು ಅವಳನ್ನು ಸಂತೈಸಿದೆ.

ಹಾಗೇ ಮುಂದೆ ಬಂದೆವು. ಅಂದು ಪೌರ್ಣಿಮೆ. ಹಾಲು ಚೆಲ್ಲಿದ ಹಾಗೆ ಬೆಳದಿಂಗಳು. ನದಿಯು ಬೆಳ್ಳಿಯ ತಗಡಿನಂತೆ ಪಳಪಳನೆ ಹೊಳೆಯುತ್ತಿತ್ತು. ತಂಗಾಳಿ ಹಿತವಾಗಿ, ಮಿತವಾಗಿ ಬೀಸುತ್ತಿತ್ತು.

ಹಟಾತ್ತನೆ ನನ್ನ ಕೈ ನಳಿನಿಯ ಕೈ ಹಿಡಿಯಿತು. ಅವಳು ಕೈ ಕೊಸರಿ ಕೊಳ್ಳಲಿಲ್ಲ. ತಲೆ ತಗ್ಗಿಸಿ ಹೆಜ್ಜೆಯಮೇಲೆ ಹೆಜ್ಜೆಯುನಿಕ್ಕುತ ನಿದಾನವಾಗಿ ಬರುತ್ತಿದ್ದಳು.

ನದಿಯ ಸಮೀಪ ಮರಳಿನ ರಾಶಿಯ ಮೇಲೆ ಕುಳಿತುಕೊಂಡೆವು. ತಟಕ್ಕನೆ ನಳಿನಿ ಮೇಲೆದ್ದಳು. "ನನಗೆ ನೀರಡಿಕೆ ಆಗುತ್ತಿದೆ. ನೀರು ಕುಡಿಯಬೇಕು" ಅಂತ ಹೇಳಿದಳು. "ಬಾ ಅದಕ್ಕೇನು" ಅಂತ ಹೇಳುತ್ತ ಮೇಲಕ್ಕೆದ್ದೆ. ನದಿಯಲ್ಲಿ ಸ್ವಲ್ಪ ದೂರ ಹೋದೆವು. ನಳಿನಿ ನನ್ನ ಕೈಯನ್ನು ಬಲವಾಗಿ ಹಿಡಿದುಕೊಂಡಿದ್ದಳು. ಬಟ್ಟೆ ನೆನೆಯುತ್ತದೆಂಬುದರ ಅರಿವಿಲ್ಲದೆಯೇ ನೀರೊಳಗೆ ನುಗ್ಗುತ್ತಲೇ ಇದ್ದಳು. ಮೊಣಕಾಲಿನಿಂದ ಸೊಂಟಕ್ಕೆ, ಸೊಂಟದಿಂದ ಕುತ್ತಿಗೆಗೆ ನೀರು ಬಂದಿತು. ಅವಳು ನನ್ನನ್ನು ದರದರನೆ ಎಳೆಯುತ್ತಲೇ ಇದ್ದಳು. "ನೀಚಾ, ನನ್ನಂಥ ರೂಪವತಿಯನ್ನು ತ್ಯಜಿಸಿ ಆ ಕುರೂಪಿಯನ್ನೇಕೆ ಮದುವೆಯಾದೆ. ಅದಕ್ಕೆ ಇದೇ ಶಿಕ್ಷೆ" ಅಂತ ನಳಿನಿ ಚೀರಿದಳು. ಅವಳ ಕೈ ಬಿಡಿಸಿಕೊಳ್ಳಲು ನಾನು ಮಾಡಿದ ಪ್ರಯತ್ನ ವಿಫಲವಾಯಿತು. "ಅಯ್ಯೋ ಅಪ್ಪಾ" ಎಂದು ಕೂಗಿದೆ.

"ಅಯ್ಯೋಂತೆ, ಅಪ್ಪಾಂತೆ, ಸಾಕು ಏಳಿ. ಏಳೂವರೆ ಗಂಟೆ ಆಗಿದೆ, ಇನ್ನೂ ಏಳುವುದಕ್ಕೆ ರೋಗ!" ನನ್ನ ಸ್ಥೂಲಕಾಯದ ಹೆಂಡತಿ ಪೊರಕೆ ಹಿಡಿದು ಕೊಂಡು ನಿಂತಿದ್ದಳು—ಕಸ ಹೊಡೆಯಲು!

ಈ ದುಸ್ವಪ್ನ ವೃತ್ತಾಂತವನ್ನು ಅವಳಿಗೆ ಹೇಳುವ ಶ್ರಮವನ್ನು ನಾನು ತೆಗೆದುಕೊಳ್ಳಲಿಲ್ಲ; ಏಕೆಂದರೆ ಅದನ್ನು ಕೇಳುವ ಶ್ರಮವನ್ನು ಅವಳು ತೆಗೆದು ಕೊಳ್ಳುವಳೋ ಇಲ್ಲವೋ ಎಂಬ ಅನುಮಾನದಿಂದ.

# ಆದರದ ಕರೆ !

ನನ್ನ ಭಾವಮೈದುನ ರಾಮೂಗೆ ಹೊಸಹಳ್ಳಿಗೆ ವರ್ಗವಾಯಿತು. ನಮ್ಮ ಊರಿನಿಂದ ಹೊಸ ಹಳ್ಳಿಗೆ ಕೇವಲ ನಾಲ್ಕು ಮೈಲಿ. ರಾಮು ಹೊಸ ಹಳ್ಳಿಗೆ ಏಕೆ ಬಂದನೆಂದು ನಾನು ತಿಳಿಸಬೇಕಾಗಿಲ್ಲ. ಅಲ್ಲಿ ಅವನು ಪ್ರೈಮರಿ ಸ್ಕೂಲ್ ಟೀಚರ್. ಬರೀ ಟೀಚರ್ ಅಷ್ಟೇ ಅಲ್ಲ, ಅದರ ಹೆಡ್‌ಮಾಸ್ಟರ್, ಅಸಿಸ್ಟೆಂಟ್ ಮಾಸ್ಟರ್, ಶಾಲೆಯ ಜವಾನ ಇತ್ಯಾದಿ. ಒಬ್ಬರೇ ನೌಕರರಿರುವ ಕೆಲವು ಪುಟ್ಟ ರೈಲ್ವೆ ಸ್ಟೇಷನ್‌ಗಳನ್ನು ನೀವು ನೋಡಿರಬಹುದು. ಸ್ಟೇಷನ್ ಮಾಸ್ಟರ್, ಅಸಿಸ್ಟೆಂಟ್ ಮಾಸ್ಟರ್, ಗೂಡ್ಸ್ ಮಾಸ್ಟರ್, ಪೋರ್ಟರ್ ಇತ್ಯಾದಿಯೆಲ್ಲಾ ಒಬ್ಬರೇ ಆಗಿರುವಂತೆ, ರಾಮುವೂ ಏಕೈಕ ವೀರನಾಗಿ ಹೊಸ ಹಳ್ಳಿಗೆ ಬಂದ. ಅಷ್ಟೇ ಅಲ್ಲ, ನಾನು ಒಂದು ದಿನ ಹೊಸಹಳ್ಳಿಗೆ ಬರಲೇ ಬೇಕೆಂದು ಆಗ್ರಹಪೂರ್ವಕವಾಗಿ ಆಹ್ವಾನವಿತ್ತ. "ಸಂಜೆ ಹಾಗೇ ವಾಕಿಂಗ್ ಬಂದುಬಿಡು. ದೊಡ್ಡ ರಸ್ತೆಯಿಂದ ಎರಡನೇ ಮೈಲುಕಲ್ಲಿನವರೆಗೆ ಬಂದು, ಅಲ್ಲಿಂದ ಎಡಕ್ಕೆ ಮುಕ್ಕಾಲು ಮೈಲಿ ಬಂದು ಹಾಗೇ ಇನ್ನೊಂದು ಮೈಲಿ ಬಂದು, ಅಡ್ಡ ರಸ್ತೆ ತಿರುಗಿ ಸ್ವಲ್ಪ ದೂರ ಬಂದರೆ ಹೊಸಹಳ್ಳಿ ಸಿಗುತ್ತೆ" ಅಂತ ಗಿಳಿಪಾಠ ಒಪ್ಪಿಸಿದ. ಅಕಸ್ಮಾತ್ ದಾರಿ ತಪ್ಪೀತೆಂದು ಅವನು ಹೇಳಿದ್ದನ್ನೆಲ್ಲಾ ಕಾಗದದ ಮೇಲೆ ಗುರ್ತು ಹಾಕಿಕೊಂಡೆ. "ಪಟ್ಟಣದವರ ಹಣೆಬರಹವೇ ಇಷ್ಟು. ಪ್ರತಿಯೊಂದನ್ನೂ ಡೈರಿಯಲ್ಲಿ ಗುರ್ತು ಹಾಕಿಕೊಳ್ಳುವುದು, ನೋಟ್‌ಬುಕ್‌ನಲ್ಲಿ ಗುರ್ತು ಹಾಕಿಕೊಳ್ಳುವುದು; ನಮ್ಮದು ಹಾಗಲ್ಲ, ಎಲ್ಲಾ ಇಲ್ಲಿ ಇರುತ್ತೆ" ಅಂತ ತನ್ನ ಕುಂಬಳಕಾಯಿಯಂತಹ ತಲೆ ತೋರಿಸಿದ.

"ಮನೆಮಾಡಿ ನಿನ್ನ ಹೆಂಡತೀ ಕರೆಸಯ್ಯ. ಈಗೇಕೆ ಸುಮ್ಮನೇ? ಒಂದು ಲೋಟಾ ಕಾಫೀಗೂ ಗತಿಯಿಲ್ಲದಾಗುತ್ತೆ" ಅಂತ ನೆಪಹೂಡಿದೆ. "ಅವಳು ಬಂದಮೇಲೆ ಸೊಗಸಾದ ಊಟ ಹೊಡೆಯುವಿಯಂತೆ, ಒಂದು ಲೋಟಾ ಕಾಫಿಗೆ ನೀನೇನೂ ಪೇಚಾಡಬೇಕಾಗಿಲ್ಲ" ಅಂತ ಆಶ್ವಾಸನ ಕೊಟ್ಟ.

ನಾನು ತಾಲ್ಲೂಕು ಕಚೇರಿಯಲ್ಲಿ ಇಂದಾ-ಗೆ ಗುಮಾಸ್ತೆ. ಅವೊತ್ತು ಶನಿವಾರ. ಅಮಲ್ದಾರರು ಯಾವುದೋ ಊರಿಗೆ ಸರ್ಕೀಟು ಹೋಗಿದ್ದರು. ಮರುದಿನ ಭಾನುವಾರ ರಜಾ. ಸರಿ, ಶನಿವಾರ ಸಂಜೆಯೇ ಆರ್. ಆರ್. ಕ್ಲಾರ್ಕ್ ವೆಂಕಟರಾಮಯ್ಯನನ್ನು ಪುಸಲಾಯಿಸಿ ಕರೆದುಕೊಂಡು ಹೊಸಹಳ್ಳಿಗೆ ಹೊರಟೆ. ಆಗ ಅವರೆಕಾಯಿ ದಿನವಾಗಿದ್ದರಿಂದ ವೆಂಕಟರಾಮಯ್ಯ ಸಿಮೆಂಟ್ ಚೀಲ ವೊಂದನ್ನು ಕಂಕುಳಲ್ಲಿ ಇರುಕಿಕೊಂಡು ಬಂದಿದ್ದ. "ನಿನ್ನ ಭಾವಮೈದುನ ಅವರೇಕಾಯಿ ಕೊಟ್ಟರೆ ಹಾಕಿಕೊಳ್ಳೋದಕ್ಕೆ ಇರಲಿ" ಅಂದ. ನಾನು ಯಾವ ಮಾತೂ ಆಡಲಿಲ್ಲ.

ದೊಡ್ಡ ರಸ್ತೆಯಿಂದ ಎರಡನೇ ಮೈಲುಕಲ್ಲಿನವರೆಗೆ ಕಳ್ಳರು, ದೆವ್ವ, ನಾಗರಹಾವು ಮುಂತಾದ ವಿಚಾರಗಳ ಬಗ್ಗೆ ಮಾತನಾಡುತ್ತ ಬಂದೆವು. ಹಾಗೇ ಇನ್ನೊಂದು ಮೈಲಿ ಬಂದು ಅಡ್ಡರಸ್ತೆ ಹುಡುಕಿದೆವು. ಅದು ಕಾಡು ಹಾದಿ, ಅಲ್ಲದೆ ಕತ್ತಲಾಗುತ್ತ ಬರಲಾರಂಭಿಸಿತು. ನಾವು ಕರಾರುವಾಕ್ಕಾಗಿ ಒಂದು ಮೈಲಿ ಬಂದಿದ್ದೇವೆಂದು ಹೇಳುವುದಾದರೂ ಹೇಗೆ? ಯಾರನ್ನಾದರೂ ವಿಚಾರಿಸೋಣವೆಂದರೆ ಅಲ್ಲಿ ಒಂದು ನರಪ್ರಾಣಿಯ ಸುಳಿವೂ ಇರಲಿಲ್ಲ. ಏನೋ ದೇವರ ಮೇಲೆ ಭಾರ ಹಾಕಿ ಮೊಟ್ಟಮೊದಲು ಸಿಕ್ಕಿದ ಅಡ್ಡರಸ್ತೆ ಕಡೇಗೆ ತಿರುಗಿ ದೆವು. ಆದರೆ ರಾಮುವಿನ ಹೊಸಹಳ್ಳಿ ಹೋಗಲಿ ಯಾವ ಹಳ್ಳಿಯೂ ಕಾಣಲಿಲ್ಲ. ಏನೂ ತೋರದೆ ಮುಂದು ಮುಂದಕ್ಕೆ ಹೋದೆವು. ಈ ವೇಳೆಗೆ ಪೂರ್ತಿ ಕತ್ತಲಾಗಿದ್ದರಿಂದ ಕಾಲಿನ ಕೆಳಗಿದ್ದ ಅಡ್ಡರಸ್ತೆಯನ್ನು ಬಿಟ್ಟುಕೊಡಲು ನಮಗೆ ಮನಸ್ಸಾಗಲಿಲ್ಲ. ಸ್ವಲ್ಪ ದೂರ ಹೋದನಂತರ ದೂರದಲ್ಲಿ ದೀಪವೊಂದು ಕಾಣಿಸಿತು. ಕೊನೆಗೂ ಅದೃಷ್ಟ ನಮ್ಮ ಕಡೆಗೇ ಇದೆಯೆಂದು ಮುನ್ನುಗ್ಗಿ ಆ ದೀಪ ಅರ್ಥಾತ್ ಆ ಹಳ್ಳಿಯ ಸಮೀಪಕ್ಕೆ ಬಂದೆವು. ಹಳ್ಳಿಯ ಬಳಿ ಇರುವ ಅರಳೀ ಕಟ್ಟೆಯ ಹತ್ತಿರ ಮುದುಕನೊಬ್ಬ ಎಮ್ಮೆಗಳನ್ನು ಹೊಡೆದುಕೊಂಡು ಹೋಗುತ್ತಿದ್ದ. "ಇದೇನಯ್ಯ ಹೊಸಹಳ್ಳಿ?" ವೆಂಕಟರಾಮಯ್ಯ ಆತುರವಾಗೇ ಕೇಳಿದ. "ಇಲ್ಲಿ ಎಲ್ಡು ಹೊಸಳ್ಳಿ ಇವೆ. ರಾಗೀ ಹೊಸಳ್ಳೀನೋ, ದಾಸರ ಹೊಸಳ್ಳೀನೋ?" ಮುದುಕ ಕೇಳಿದ. ಈ ಪ್ರಶ್ನೆ ನಮ್ಮಿಬ್ಬರನ್ನೂ ತಬ್ಬಿಬ್ಬು ಮಾಡಿತು. "ಯಾವುದೋ?" ಅಂತ ವೆಂಕಟರಾಮಯ್ಯ ನನ್ನ ಪಕ್ಕೆ ತಿವಿದ. "ನಂಗೇನು ಗೊತ್ತು!" ಅಂತ ಉತ್ತರ ಕೊಟ್ಟೆ. "ಮತ್ತೆ ಮಹಾ ದೊಡ್ಡಮನುಷ್ಯನ

ಹಾಗೆ ನನ್ನನ್ನು ಕರೆದುಕೊಂಡು ಬಂದೆ?" ಈ ಪ್ರಶ್ನೆಗೂ ನಾನು ಉತ್ತರ ಕೊಡಲು ಸಿದ್ಧನಿರಲಿಲ್ಲ. ಆದರೂ ಒಂದು ಸ್ಫೂರ್ತಿಯ ಕಿಡಿ ನನ್ನ ತಲೆಯಲ್ಲಿ ಹಾರಿತು. "ಯಾವ ಹೊಸಹಳ್ಳಿಯಲ್ಲಿ ಇಸ್ಕೂಲಿದೆ?" "ದಾಸರ ಹೊಸಳ್ಳೀಲಿ" ಎಂತ ಅವನು ಹೇಳಿದ. "ಹಾಗಾದರೆ ಇದು ಯಾವ ಹೊಸಳ್ಳಿ?" "ಇದು ರಾಗೀ ಹೊಸಳ್ಳಿ!" ನಮ್ಮಿಬ್ಬರ ನಾಲಗೆಯೂ ಒಣಗಿತು. "ಇಲ್ಲಿಂದ ದಾಸರ ಹೊಸಳ್ಳಿಗೆ ಹೇಗೆ ಹೋಗಬೇಕು?" ನಾನೇ ಮುದುಕನನ್ನು ಕೇಳಿದೆ. "ರಸ್ತೆ ಸಂದಾಕಿಲ್ಲ, ಯಾಕೆ ಹೋಯ್ತೀರಾ?" ಅಂತ ಅವನ ಮರು ಪ್ರಶ್ನೆ. ವೆಂಕಟ ರಾಮಯ್ಯನಿಗೆ ಈ ವೇಳೆಗೆ ತಲೆ ಕಾದಿರಬೇಕು. "ರಸ್ತೆ ಹ್ಯಾಗಾದರೂ ಇರಲಿ, ಹ್ಯಾಗೆ ಹೋಗಬೇಕು?" ಅಂತ ಅವನು ಕೆಟ್ಟದಾಗಿ ಕೇಳಿದ. "ನೋಡಿ, ಈ ಅಡ್ಡರಸ್ತೆ ಗುಂಟಾ ಒಂದು ಹರದಾರಿ ಹೋದ್ರೆ ಮೂಡ್ಲಯ್ಯನ ಹೊಲಾ ಸಿಕ್ತೀತೆ, ಅಲ್ಲಿ ಒಂದು ದೊಡ್ಡ ಆಲದ ಮರ ಐತೇ. ಅಲ್ಲಿಂದ ಬಲಗಡೆ ತಿರುಗಿ ಸ್ವಲ್ಪ ದೂರ ಹೋದರೆ ಹೊಸಳ್ಳಿ ಸಿಕ್ತದೆ" ಅಂತ ಹೇಳಿದ.

ವೆಂಕಟ್ರಾಮಯ್ಯ ನನ್ನ ಮತ್ತು ರಾಮೂನ ಹತ್ತಿರದ ಸ್ತ್ರೀ ಅನುಬಂಧಿಗಳನ್ನೆಲ್ಲಾ ಒಂದೇ ಸಮನೆ ಬಯ್ದ. ಇದರಲ್ಲಿ ತಪ್ಪು ಯಾರದು, ಎಂಬುದೇ ನನಗೆ ಅರ್ಥವಾಗಲಿಲ್ಲ. ವೆಂಕಟ್ರಾಮಯ್ಯನ ನಾಲಗೆ ನಿಮಿಷ ನಿಮಿಷಕ್ಕೂ ಉದ್ದವಾಗತೊಡಗಿತು. ಎಲ್ಲವನ್ನೂ ಸಹಿಸಿದೆ. ಮೂಡ್ಲಯ್ಯನ ಹೊಲ ಮುದುಕನಿಗೆ ಗೊತ್ತಿರಬಹುದು. ನಮಗೆ ಹೇಗೆ ಗೊತ್ತು! ಅಂತೂ ಕುರಿಗಳಂತೆ ತಲೆತಗ್ಗಿಸಿ ದಾರಿ ತುಳಿಯತೊಡಗಿದೆವು.

ಸಂಜೆ ಹೊರಡುವಾಗ "ಇರ್ಲಿ" ಅಂತ ಜನಾರ್ಧನಯ್ಯನ ಹೋಟಲಿನಲ್ಲಿ ಎರಡೆರಡು ಖಾಲಿ, ಒಂದೊಂದು ಲೋಟ ಕಾಫಿ ಹಾಕಿದ್ದೆವು. ಆದರೆ ಈ ವೇಳೆಗೆ, ಅದೆಲ್ಲಾ ಎಲ್ಲಿ ಮಾಯವಾಗಿತ್ತೋ ತಿಳಿಯದು. ಎರಡು ಏಕಾದಶಿ ಮಾಡಿದಷ್ಟು ಸಂಕಟವಾಗುತ್ತಿತ್ತು.

ಮುದುಕ ಹೇಳಿದ್ದಂತೆ ದೊಡ್ಡ ಆಲದ ಮರ ಸಿಕ್ಕಿತು. ಮೂಡ್ಲಯ್ಯನ ಹೊಲ ಸಿಕ್ಕಿತೋ ಇಲ್ಲವೋ ತಿಳಿಯದು. ಕೊಂಚ ದೂರದಲ್ಲಿ ದೀಪದ ಬೆಳಕೊಂದು ಕಾಣಿಸಿತು, ಅದೇ ರಾಮೂನ ಹಳ್ಳಿ ಇರಬೇಕೆಂದು ಯೋಧರಂತೆ ಮುನ್ನುಗ್ಗಿದೆವು. ಮೊದಲು ಸಿಕ್ಕ ಮನೆಯನ್ನೇ ವೆಂಕಟ್ರಾಮಯ್ಯ ತಟ್ಟಿದ. ನಾವು ಜಗಲಿಯ ಹತ್ತಿರ ನಿಂತಾಗ ಮನೆ ಒಳಗೆ ಜನಗಳು ಮಾತನಾಡುವುದು

ಕೇಳಿಸುತ್ತಿತ್ತು. ವೆಂಕಟ್ರಾಮಯ್ಯ ಬಾಗಿಲು ತಟ್ಟಿದ ಕೂಡಲೇ ಆ ಕೂಗಾಟ ಪಟಾತ್ತನೆ ನಿಂತಿತು. ಆದರೂ ವೆಂಕಟ್ರಾಮಯ್ಯ ಒಂದು ತರಹ ಪೋಲೀಸ್ ಜಬರ್‌ದಸ್ತಿಯಿಂದ ಬಾಗಿಲು ತೆಗೆಯಿಸಿದ. "ನೀವು ನೇಕದಾರ್ರೊ ಅಂತ ಬಾಕಿಲು ತೆಗೀನಿಲ್ಲ" ಅಂತ ಹರೆಯದ ಹುಡುಗನೊಬ್ಬ ಹೇಳಿದ. ಸ್ಕೂಲು ಎಲ್ಲಿದೆ ಎಂದು ಕೇಳಿದಾಗ, "ಈ ರಸ್ತೇಲೆ ಕೊನೇವಗರ್ೂ ಹೋಗಿ, ಅಲ್ಲೇ ಮಂಗಳೂರು ಹೆಂಚಿನ ಕಟ್ಟಡ ಕಾಣಿಸ್ತೈತೆ. ಅದೇ ಇಸ್ಕೋಲು" ಅಂತ ಹೇಳಿದ. ಅವನ ಹೇಳಿಕೆಯಂತೆ ಅದೇ ರಸ್ತೆ ಕೊನೆಯವರೆಗೂ ಹೋದೆವು. ಮಂಗಳೂರು ಹೆಂಚಿನ ಕಟ್ಟಡವೂ ಸಿಕ್ಕಿತು. ಬಾಗಿಲ ಬಳಿ ಯಾರೋ ಮಲಗಿದ್ದರು. ಮುಂದುಗಡೆ ಎರಡಂಕಣದ ಒಪ್ಪಾರ. ವೆಂಕಟ್ರಾಮಯ್ಯ ಮುಂದೆ ಹೋಗಿ ನೋಡಿದ. ಸ್ಕೂಲಿಗೆ ಬಲವಾದ ಬೀಗ ಹಾಕಿತ್ತು. ಮಲಗಿದ ಮನುಷ್ಯನನ್ನು ಕಷ್ಟಪಟ್ಟು ಎಬ್ಬಿಸಿದ. ಆತ ಆಕಳಿಸುತ್ತಲೇ ಹೇಳಿದ: "ಇಸ್ಕೋಲು ಐನೋರು ಈವೊತ್ತು ಪ್ಯಾಟೀಗೆ ಹೋದ್ರು."

ಸರಿ, ಇಬ್ಬರೂ ಒಪ್ಪಾರದ ಮೂಲೆಯಲ್ಲಿ ಮಲಗಿದೆವು. ಸೊಳ್ಳೆ, ತಿಗಣೆ, ಮುಂತಾದ ನಿದ್ರಾಭಂಗ ಕ್ರಿಮಿಕೀಟಗಳಿಗೆ ಆಹುತಿಯಾದೆವು. ರಾತ್ರಿಯೆಲ್ಲಾ ಹೊಟ್ಟೆ ತುಂಬುವವರೆಗೆ ರಾಮುವನ್ನು ಬಯ್ದೆವು.

ಬೆಳಗಿನಜಾವ ಐದು ಗಂಟೆಯ ಹೊತ್ತಿಗೆ ಎದ್ದು ಆರಂಬಕ್ಕೆ ಹೋಗುವ ಒಕ್ಕಲುಮಕ್ಕಳಿಂದ ಊರಿನ ಹಾದಿ ತಿಳಿದುಕೊಂಡು, ಬೆಳಿಗ್ಗೆ ಏಳು ಗಂಟೆಯ ಹೊತ್ತಿಗೆ ಮನೆಗೆ ಬಂದೆವು.

*         *         *         *

ನಾನು, ವೆಂಕಟ್ರಾಮಯ್ಯ ಒಂದು ಸಂಜೆ ಆಫೀಸಿನಲ್ಲಿ ಕುಳಿತಿದ್ದಾಗ ರಾಮು ಬಂದ. "ಏನಯ್ಯ, ಒಂದು ಸಾರಿ ನಮ್ಮ ಹೊಸಹಳ್ಳಿಗೆ ದಯವಿಟ್ಟು ಬರಬಾರದೆ? ಇಲ್ಲಿಂದ ದೊಡ್ಡ ರಸ್ತೆಗೆ ಎರಡು ಮೈಲಿ ಬಂದು........"

ವೆಂಕಟ್ರಾಮಯ್ಯ ರೂಲುದೊಣ್ಣೆ ಕೈಗೆ ತೆಗೆದುಕೊಂಡ. ರಾಮು ಅದೃಶ್ಯನಾಗಿದ್ದ.

# ಗಡಿಯಾರ ರಿಪೇರಿ

ನನ್ನ ಸಂಸಾರಕ್ಕೂ ಗಡಿಯಾರ ಒಂದಕ್ಕೂ ನಿಕಟ ಸಂಬಂಧ ಇದೆಯೆಂದು ಹೇಳಿದರೆ ಯಾರೂ ನಂಬುವುದಿಲ್ಲ. ಆದರೆ ಅಕಸ್ಮಾತ್ತಾಗಿ ನಿಜ ಹೇಳುವ ಪರಿಪಾಠ ಇರುವುದರಿಂದಲೂ, ಗೌಳಿಗರು ಹೇಳುವ ಹಾಗೆ ಇದು 'ಅಪ್ಪಟ' ನಿಜವಾಗಿರುವುದರಿಂದಲೂ, ವಾಚಕರು ನನ್ನ ಮಾತಿನಲ್ಲಿ ವಿಶ್ವಾಸ ಇಡಬೇಕೆಂದು ಕೇಳಿಕೊಳ್ಳುತ್ತೇನೆ.

ಎಲ್ಲ ಭಾವೀ ವರಗಳಂತೆ ಈಗಿನ ಕಾಲದಲ್ಲಿ ಬಂದ ಕನ್ಯೆಗಳನ್ನೆಲ್ಲಾ ತಿರಸ್ಕರಿಸುವುದು ಒಂದು ಫ್ಯಾಷನ್ ಅಷ್ಟೆ? ನಾನು ಸಹ ಈ ನಿಯಮಕ್ಕೆ ಅಪವಾದವಾಗಲಿಲ್ಲ. ಇವೊತ್ತಿಗೂ ೪೦-೫೦ ಕನ್ಯೆಗಳನ್ನು ತಿರಸ್ಕರಿಸಿದುದಾಗಿ ನಾನು ಜಂಬ ಕೊಚ್ಚಿಕೊಳ್ಳುತ್ತೇನೆ. ಡೆಪ್ಯುಟಿ ಕಮೀಷನರ ಮನೆಯಿಂದ ಆರಂಭವಾಗಿ ವರ್ಷಕ್ಕೆ ಅರವತ್ತು ರೂಪಾಯಿ ಫೋಟಿಗೆ ಬರುವ ಬಡ ಶಾನು ಭೋಗರ ಮನೆಯವರೆಗೂ ನನಗೆ ಕನ್ಯೆಗಳು ಬಂದಿದ್ದವು. ಅವೆಲ್ಲವುಗಳನ್ನೂ ನಾನು ತಿರಸ್ಕರಿಸಿದ್ದೆ. ಆದರೆ ಹಾಳಾದ್ದು ಮಿರುಮಿರುಗುವ ಒಂದು ಗಡಿಯಾರಕ್ಕೆ ಬಲಿಬಿದ್ದು, (ನಮ್ಮ ಮಾವ ಹೇಳಿದಂತೆ ಅದರ ಬೆಲೆ ರೂ. ೧೫೫-೭-೬) ಈಗಿರುವ ನನ್ನಾಕೆಯ ಕೈಹಿಡಿದೆ. ಇದು ಕೊಂಚ ವಿಷಯಾಂತರ ಎನ್ನುವುದನ್ನು ನಾನು ಬಲ್ಲೆ. ಆದರೂ ವಿಷಯಕ್ಕೆ ಬಾದರಾಯಣ ಸಂಬಂಧ ಇರುವುದರಿಂದ ನನ್ನ ಬಗ್ಗೆ ಕೊಂಚ ತಾಳ್ಮೆ ವಹಿಸಬೇಕೆಂದು, ವೆಂಕಟಾಚಾರ್ಯರ ಕಾದಂಬರಿ ಯಲ್ಲಿ ಹೇಳುವಂತೆ ವಾಚಕರನ್ನು ಕೇಳಿಕೊಳ್ಳುತ್ತೇನೆ.

ಗಡಿಯಾರ ಎಂದರೆ ಮೊದಲಿಂದಲೂ ನನಗೆ ಒಂದು ತರಹ ಹುಚ್ಚು. ಹುಚ್ಚೇನು, ರಕ್ತಗತವಾಗಿ ಬಂದ ಒಂದು ಗೀಳು. ಈ ಮನೋದೌರ್ಬಲ್ಯ ದಿಂದಲೋ ಏನೋ ಎಲ್ಲ ನಮೂನೆ ಸಿಗರೇಟ್‌ಗಳನ್ನು ಬದಿಗೊತ್ತಿ ನಾನು ವಾಚ್ ಸಿಗರೇಟ್‌ಗಳನ್ನು ಕುಡಿಯಲು ಆರಂಭಿಸಿದ್ದೇನೆ.

ಮಿರುಮಿರುಗುವ ಕೈಗಡಿಯಾರ ಕಟ್ಟಬೇಕೆಂಬುದೇ ನನ್ನ ಜೀವನದ ಮಹತ್ವಾಕಾಂಕ್ಷೆಯಾಗಿತ್ತು. ತಲೆಯಮೇಲೆ ಅಚ್ಚ ಕರಿಯ ಕೂದಲಿದ್ದರೂ ಅಮೃತ ಸರಪ ಕೂದಲು ಕಪ್ಪುಮಾಡುವ ಎರಡು ಎಣ್ಣೆಯ ಸೀಸೆಗಳನ್ನು ತರಿಸಿಕೊಂಡಿದ್ದೆ – ಬಹುಮಾನ ಗಡಿಯಾರಗಳ ಆಸೆಯಿಂದ – ತಲೆಕೂದಲೇನೋ ಕಪ್ಪಾಯಿತು (ನನಗೆ ಮೀಸೆ ಇರಲಿಲ್ಲವಾದ್ದರಿಂದ ಆ ಪ್ರಶ್ನೆಯೇ ಏಳುವುದಿಲ್ಲ – ಮಂತ್ರಿಗಳು ಶಾಸನಸಭೆಗಳಲ್ಲಿ ಹೇಳುವಂತೆ) ಗಡಿಯಾರ ಮಾತ್ರ ನಡೆಯುತ್ತಿರಲಿಲ್ಲ. ಅವು ನಡೆಯುವ ಗಡಿಯಾರಗಳೂ ಅಲ್ಲವಂತೆ – ಕೇವಲ ಅಂದದವು ಮಾತ್ರ. ಆದರೂ ಇವನ್ನೇ ಕಟ್ಟಿಕೊಂಡು ಯಾರಾದರೂ ಗಂಟೆ ಕೇಳಿದರೆ ಅರ್ಧ ಗಂಟೆ ಹೆಚ್ಚು ಕಡಿಮೆ ಹೇಳುತ್ತಿದ್ದೆ. ಇದು ಹೇಗೋ ನನ್ನ ಸ್ನೇಹಿತರಿಗೆ ತಿಳಿದು, ನನ್ನನ್ನು ತುಂಬಾ ಗೇಲಿಗೆ ಗುರಿಮಾಡಿದರೆಂದು ಹೇಳದೆ ವಿಧಿಯಿಲ್ಲ. ಇರಲಿ.

ಹೆಂಡತಿ ಆಗುವವಳ ಮುಖ ನೋಡದೆ ಗಡಿಯಾರದ ಮುಖ ನೋಡಿ ಮದುವೆ ಆಗಲು ಒಪ್ಪಿದೆ. ಮದುವೆಯೇನೋ ಆಯಿತೆನ್ನಿ. ಕುರುಡನಿಗೆ ಕಣ್ಣು ಬಂದಂತೆ, ತಿರುಕ ಎಣ್ಣೆನೀರು ಹಾಕಿಕೊಂಡಂತೆ ನನಗೆ ಅದು ಏನೋ ಒಂದು ಸಂಭ್ರಮ.

* * * *

ಒಂದು ದಿನ ವೆಂಕಟು ಬಂದು ಗಂಟೆ ಎಷ್ಟು ಎಂದು ಕೇಳಿದ. ನಾಲ್ಕಕ್ಕೆ ಎರಡು ನಿಮಿಷ ಇಪ್ಪತ್ತೆರಡು ಸೆಕೆಂಡ್ ಎಂತ ಗಡಿಯಾರ ನೋಡಿ ಹೇಳಿದೆ. ಅವನು "ರೇಡಿಯೋಕ್ಕೆ ನಿನ್ನ ಗಡಿಯಾರ ಸರಿ ಇಲ್ಲ" ಅಂತ ಹೇಳಿದ. "ರೇಡಿಯೋ ನೋಡಿಯೇ ಇಟ್ಟಿದ್ದೆ" ಎಂತ ನಾನು ಹೇಳಿದೆ ಮತ್ತು ಈ ಗಡಿಯಾರ ಆಗಾಗ್ಗೆ ಕೊಂಚ ಹೆಚ್ಚುಕಡಿಮೆ ಹೋಗುತ್ತಿರುವುದನ್ನೂ ವಿವರಿಸಿದೆ. "ಇದಕ್ಕೆ 'ಓವರ್ ಆಲ್' ಆಗಿದೆಯೋ ?" ಎಂತ ಪ್ರಶ್ನೆ ಹಾಕಿದ. ಇಲ್ಲ ಎನ್ನುವ ರೀತಿಯಲ್ಲಿ ತಲೆ ಅಲುಗಾಡಿಸಿದೆ.

"ನಿಮ್ಮಂಥವರೆಲ್ಲಾ ಮಾಡುವುದು ಇದೇ ತಪ್ಪು" ಅಂತ ಅನುಕಂಪ ದೃಷ್ಟಿ ಬೀರುತ್ತ "ಸ್ವಲ್ಪ ರಿಪೇರಿ ತಿಳಿದುಕೊಂಡಿರಬೇಕಯ್ಯ. ಹಿಡಿದಿದ್ದಕ್ಕೆ ಮುಟ್ಟಿದ್ದಕ್ಕೆ ರಿಪೇರಿಯವನ ಹತ್ತಿರ ತೆಗೆದುಕೊಂಡು ಹೋದರೆ ಗಡಿಯಾರದ ಹತ್ತರಷ್ಟು ಬೆಲೆ ತೆರಬೇಕಾದೀತು. ನಾನು ಸ್ವಂತವಾಗಿ ಇವನ್ನೆಲ್ಲಾ ಮಾಡು

ತ್ತೇನೆ. ನೋಡು, ನನ್ನ ಗಡಿಯಾರ ೧/೧೦೦೦ ಸೆಕೆಂಡ್ ಸಹ ಹೆಚ್ಚುಕಡಿಮೆ ಹೋಗುವುದಿಲ್ಲ. ಅದಕ್ಕೆ ನನ್ನ ಸ್ವಂತ 'ಕರಾಮತಿ' ಮಾಡಿದ್ದೇನೆ." ಅವನು ಹೇಳುವ ಧಾಟಿಯಲ್ಲಿ ಗಡಿಯಾರ ರಿಪೇರಿ ತಿಳಿಯದಿದ್ದವರೆಲ್ಲ, ಈ ಭೂಮಿಯ ಮೇಲೆ ಜನ್ಮ ತಾಳಿದ್ದೇ ಅಪ್ರಯೋಜಕ ಎನ್ನುವಂತಿತ್ತು.

"ಇದೊಂದು ಕೈಲಿದ್ದರೆ ಸಾಕು" ಎಂದು ತನ್ನ ಒಳಜೇಬಿಗೆ ಕೈಹಾಕಿ ಒಂದು ಸ್ಕ್ರ್ಯೂ ಡ್ರೈವರ್ ಈಚೆಗೆ ತೆಗೆದು "ಗಡಿಯಾರ, ಪೆಟ್ರೊಮ್ಯಾಕ್ಸ್, ಕ್ಯಾಮರಾ, ರೇಡಿಯೋ ಏನು ಬೇಕಾದರೂ ಇರಲಿ, ನಿಮಿಷಾರ್ಧದಲ್ಲಿ ಸರಿಮಾಡ ಬಹುದು" ಎಂದು ಹೇಳುತ್ತ "ಎಲ್ಲಿ ನಿನ್ನ ಗಡಿಯಾರ ತಾ ಇಲ್ಲಿ" ಎಂತ ಕೇಳಿದ.

"ಇರ್ಲಿ ಬಿಡಪ್ಪಾ, ವಾಚ್ ರಿಪೇರರ್‌ಗೆ ಕೊಟ್ಟರೆ ಸರಿಮಾಡಿಕೊಡುತ್ತಾನೆ. ಯಾಕೆ ಸುಮ್ಮನೆ ಇಲ್ಲದ ಒದ್ದಾಟ" ಎಂದು ಹೇಳಿದೆ.

"ನಿಮಗೆಲ್ಲಾ ಕೈಯಲ್ಲಿ ದುಡ್ಡು ಕುಣಿಯುತ್ತೆ. ಅದಕ್ಕೆ ಐದು ರೂಪಾಯಿ ಕಕ್ಕದಿದ್ದರೆ ನಿನಗೆ ನಿದ್ದೆ ಬರೋಲ್ಲ. ಅನ್ನ ಸೇರೋಲ್ಲ. ಸಾಕು ತಾ ಇಲ್ಲಿ, ಎಲ್ಲಾ ಸರಿಮಾಡಿಬಿಡುತ್ತೇನೆ. ನಂಗೇನೂ ನೀನು ದುಡ್ಡು ಕೊಡಬೇಡ. ಒಂದು ಹುಲಿ ಬಣ್ಣದ ಮಸಾಲೆದೋಸೆ, ಸ್ಪೆಷಲ್ ಕಾಫಿ" ಎಂದು ತನ್ನ ಒಂದೂವರೆ ಕಣ್ಣಿನಲ್ಲಿ ಅರ್ಧ ಕಣ್ಣನ್ನು ಹೊಡೆದ.

ನನಗೂ ಬಾಯಲ್ಲಿ ನೀರೂರಿತು. ಈ ಗಡಿಯಾರ ರಿಪೇರಿಗೆ ಐದು ರೂಪಾಯಿ ಎಲ್ಲಿ ಜೊತೆಮಾಡಬೇಕು ಅಂತ ಯೋಚಿಸುತ್ತಿದ್ದೆ. ಅಲ್ಲದೆ ಎಂಟು ಆಣೆ ಅಥವಾ ಅಬ್ಬಬ್ಬಾ ಎಂದರೆ ಒಂದು ರೂಪಾಯಿಯಲ್ಲಿ ಈ ಪೀಡೆ ತೊಲಗಿ ಹೋಗುತ್ತದಲ್ಲಾ ಎಂದು ಆಲೋಚಿಸಿ ಗಡಿಯಾರ ಬಿಚ್ಚಿಕೊಟ್ಟೆ.

ವೆಂಕಟು ಒಳ್ಳೇ ಕಸಬುದಾರನಂತೆ ಗಡಿಯಾರದ ಮುಂಭಾಗ ಹಿಂಭಾಗ ಗಳನ್ನು ತಿರುಗಿಸಿ ನೋಡಿದ. ಅಕ್ಕಪಕ್ಕಗಳನ್ನೂ ನೋಡಿದ. ಶೆಟ್ಟಿ ಚಿನ್ನದ ತೂಕವನ್ನು ಅಂದಾಜು ಮಾಡುವಂತೆ ಕೈಯಲ್ಲಿಯೇ ಅದರ ತೂಕವನ್ನು ನೋಡಿದ. "ಎಲ್ಲಾ ಸರಿ, ಇದು ಹಳೆಯ ನಮೂನೆ ಗಡಿಯಾರ. ಈಚೆಗೆ...." ಅದೇನೋ ಪವಡೆ ಹಲ್ಲು ಮುರಿಯುವ ನಾಲಗೆ ತೊದಲಿಸುವ ಒಂದು ಹೆಸರು ಹೇಳಿ, "ಅದು ಬಹು ಚೆನ್ನಾಗಿದೆ. ಹೋಗಲಿ, ಇದಕ್ಕೇನು ಕೊಟ್ಟೆ?" ಅಂತ

ಕೇಳಿದ. "ನಮ್ಮ ಮಾವ ಕೊಟ್ಟಿದ್ದು, ಅವರು ನೂರರವತ್ತು ಕೊಟ್ಟರಂತೆ" ಎಂದೆ. "ಸರಿ ಹಾಗಾದರೆ, ಅವರು ಟೋಪಿ ಬಿದ್ದಿದ್ದಾರೆ" ಅಂದ ವೆಂಕಟು.

ನಾನು ಸುಮ್ಮನಾದೆ. ಟೋಪಿ ಬಿದ್ದವರು ನಮ್ಮ ಮಾವ ಅಲ್ಲ, ನಾನೇ! ಆದರೂ ಅಂತರಂಗ ವಿಚಾರವನ್ನು ಅವನಿಗೇಕೆ ಹೇಳಬೇಕೆಂದು ಸುಮ್ಮನಾದೆ.

'ಫಟ್' ಅಂತ ಗಡಿಯಾರದ ಮುಚ್ಚಳ ತೆಗೆದ. ತಕ್ಷಣವೇ ಅದರ ಗಾಜು ಸಹಸ್ರ ಗಾಜಾಯಿತು. ನಾನು ಕೆಟ್ಟಮುಖ ಮಾಡಿದೆ. "ಅದಕ್ಯಾಕೆ ಅಷ್ಟು ಯೋಚನೆ? ನನ್ನಲ್ಲಿ ೧೦-೧೨ ಗಾಜು ಇವೆ. ತೆಗೆದುಕೊಂಡು ಹೋಗು" ಅಂತ ಹೇಳಿದ.

"ನೋಡು ಕಿಟ್ಟೀ, ಗಡಿಯಾರದ ಪ್ರಾಣ ಇರುವುದೆಲ್ಲಾ ಇದೇ ಹೇರ್‌ಸ್ಪ್ರಿಂಗ್" ಎಂದು ಹೇಳುತ್ತಾ ಚಿಕ್ಕ ಗಾಲಿಗೆ ಅಂಟಿದ್ದ ಕೂದಲೆಳೆ ತಂತಿ ಸುತ್ತಿದ್ದ ಒಂದನ್ನು ಎತ್ತಿ ಹಿಡಿದು ಆಚೆ ಇಟ್ಟ. "ನೀರಡಿಕೆ ಆಗುತ್ತೆ, ಒಂದು ಲೋಟ ನೀರು ತಾ" ಅಂತ ಹೇಳಿದ. ನನಗೆ ಗೊತ್ತು, ನೀರಡಿಕೆ ಆಗಿಲ್ಲವೆಂದೂ ಕಾಫಿಡಿಕೆ ಆಗಿದೆ ಯೆಂದೂ! ಸರಿ, ಒಳಕ್ಕೆ ಹೋಗಿ ಹತ್ತು ನಿಮಿಷಗಳಲ್ಲಿ ಒಂದು ಲೋಟ ಕಾಫಿ ತಂದೆ. ನಾನು ಬರುವಷ್ಟರಲ್ಲಿ ಗಡಿಯಾರವನ್ನೆಲ್ಲಾ ಪೂರ್ತಿಯಾಗಿ ಬಿಚ್ಚಿಟ್ಟಿದ್ದ.

"ಈ ಪುಟ್ಟ ಗಡಿಯಾರದಲ್ಲಿ ಇಷ್ಟೊಂದು ಸಾಮಾನುಗಳಿರುತ್ತವೆಯೇ?" ಎಂದು ನಾನು ಅಚ್ಚರಿಯಿಂದ ಕೇಳಿದೆ. ನನ್ನ ಮೂರ್ಖತನವನ್ನು ನೋಡಿ ಅವನು ಹುಸಿನಗೆ ನಗುತ್ತಾ, "ನಿನಗೆ ಇದರ ವಿವರಗಳನ್ನೆಲ್ಲಾ ಹೇಳಿದರೆ ಅರ್ಥ ವಾಗುವುದಿಲ್ಲ, ನಾನೇನು ಮಾಡಲಿ?" ಎಂದು ಸುಮ್ಮನಾದ.

"ಈ ಗಡಿಯಾರಕ್ಕೆ ಏನಾಗಿದೆ?" ಎಂದು ಕುತೂಹಲದಿಂದ ಕೇಳಿದೆ. "ಅದನ್ನೇ ನೋಡುತ್ತಿದ್ದೇನೆ" ಅಂತ ಹೇಳಿ, "ಇದು ನೋಡು, ಬ್ಯಾಲೆನ್ಸ್ ವ್ಹೀಲ್. ಇದು ಹೆಚ್ಚುಕಡಿಮೆ ಆದರೇನೇ ಗಡಿಯಾರ ಹಿಂದು ಮುಂದು ಹೋಗು ವುದು." ವೆಂಕಟು ನನ್ನ ಪೂರ್ತಾ ಗಡಿಯಾರವನ್ನು ಅವಶೇಷಗಳನ್ನಾಗಿ ಪರಿವರ್ತಿಸಿದ್ದನ್ನು ನೋಡಿ ನನಗೆ ಏನೋ ಒಂದು ಬಗೆಯ ಅನಿರ್ವಚನೀಯ ಹೆದರಿಕೆ ಉಂಟಾಯಿತು.

"ಇದೇನು ಅಂಥ ನಷ್ಟವಲ್ಲ, ಈ ಗಾಲಿ ಬಿಚ್ಚುವಾಗ ಇದು ಮುರಿದು ಹೋಯಿತು" ಅಂತ ಎರಡು ಸಣ್ಣ ಹಿತ್ತಾಳೆ ಚೂರುಗಳನ್ನು ತೋರಿಸಿದ.

"ಎಲ್ಲಾ ಜೋಡಿಸಿಬಿಡಪ್ಪಾ ಹೇಗಾದರೂ ಆಗಲಿ" ಅಂತ ನಾನು ಹೇಳಿದೆ. "ಅದನ್ನೇ ಮಾಡುತ್ತಿದ್ದೇನೆ, ಆದರೆ ಸಾಧ್ಯವಾಗುತ್ತಿಲ್ಲ" ಎಂತ ಹೇಳುತ್ತಾ ಒಂದು ಕಾಗದದ ಚೂರಿನಲ್ಲಿ ಎಲ್ಲವನ್ನೂ ಕಟ್ಟಿಟ್ಟ.

"ನಾನು ಸಂಜೆ ಬರುತ್ತೇನೆ. ಆಗ ಐದು ನಿಮಿಷದಲ್ಲಿ ಎಲ್ಲಾ ಸರಿಮಾಡಿ ಬಿಡ್ತೇನೆ" ಎಂದು ಹೇಳುತ್ತ ಕಾಗದದ ಪೊಟ್ಟಣ ನನ್ನ ಕೈಗಿತ್ತು ಹೊರಟುಹೋದ.

ನಿಮ್ಮ ಊಹೆಯಂತೆ ಅವನು ಆ ಸಂಜೆ ಬರಲಿಲ್ಲ, ಯಾವ ಸಂಜೆಯೂ ಬರಲಿಲ್ಲ. ಗಡಿಯಾರ ರಿಪೇರಿ ಮಾಡುವವನ ಹತ್ತಿರ ಪೊಟ್ಟಣ ಕೊಟ್ಟೆ. ನನ್ನ ತಂದೆ ಸಹ ನನ್ನನ್ನು ಎಂದೂ ಹಾಗೆ ಬೈದಿರಲಿಲ್ಲ - ವಾಚ್ ರಿಪೇರರ್ ಬೈಗಳದ ವೈಖರಿ ಹಾಗಿತ್ತು.

ಎಂಟು ದಿನಗಳಮೇಲೆ ಗಡಿಯಾರ ವಾಪಸು ತಂದೆ—ಇಪ್ಪತ್ತುಮೂರು ರೂಪಾಯಿ ಎಂಟಾಣೆ ಜುಲ್ಮಾನೆ ತೆತ್ತು !

# ಕುದುರೆ ಜೂಜು

ನನಗೆ ಕುದುರೆ ಜೂಜು ತಿಳಿಯದು. ರೇಸ್‌ಕೋರ್ಸ್ ಕಡೆ ತಲೆ ಇಟ್ಟು ಮಲಗಿದವನಲ್ಲ. ಸಹವಾಸದೋಷ ಅಂತ ಹೇಳುತ್ತಾರಲ್ಲ, ಹಾಳಾದ್ದು ಅದರಿಂದ ನನಗೆ ಈ ಗೀಳು ಪ್ರಾರಂಭವಾಯಿತು. ಏನೋ ಒಂದು ಹತ್ತುಸಾವಿರ ಸಂಪಾದಿಸಿ ಅದನ್ನು ಬಿಟ್ಟುಬಿಡೋಣ ಅಂತ ಮಾಡಿದ್ದೇನೆ. ಆದರೆ ಹತ್ತುಸಾವಿರ ಸಂಪಾದನೆ ಆಗುವುದು ಇರಲಿ, ನನ್ನ ಅಲ್ಪ ಸ್ವಲ್ಪ ಹಣವೂ ಕೊಚ್ಚಿಕೊಂಡು ಹೋಗುತ್ತಾ ಇದೆ. ಸಾಮಾನ್ಯವಾಗಿ ಸ್ವವಿಷಯದ ಬಗ್ಗೆ ಹೇಳಿಕೊಳ್ಳಲು ನನಗೆ ಬಹಳ ಸಂಕೋಚ. ಆದರೆ ಮುಖ್ಯವಾಗಿ ಈ ಅಶ್ವಮೇಧದ ಗೀಳು ನನಗೆ ಹೇಗೆ ಅಂಟಿತೆಂಬುದನ್ನು ವಿವರಿಸದೇ ಇರಲು ಸಾಧ್ಯವಿಲ್ಲ.

ನನ್ನ ಸ್ನೇಹಿತ ಕುಂಟೂ ಇದ್ದಾನಲ್ಲ, ಬಹಳ ಚೂಟಿ ಮನುಷ್ಯ. ಅವನ ಹೆಸರು ವೆಂಕಟು. ಪ್ರೇಮದ ಕತ್ತರಿಗೆ ಸಿಕ್ಕಿ ಅದು ಹೀಗಾಗಿದೆ. ಅಲ್ಲದೆ ಅವನು ಸ್ವಲ್ಪ ಕುಂಟುತ್ತಾನೆನ್ನುವುದೂ ನಿಜ. ಚಿಕ್ಕಂದಿನಿಂದಲೂ ಅವನು ಮಹಾ ಜೂಜುಕೋರ. ನಾವು ಇನ್ನೂ ಚಿನ್ನಿ-ದಾಂಡು, ಗೋಲಿ-ಬಂಗರ ಅಂತ ಇದ್ದಾಗ, ಅವನು ರಾಜ, ರಾಣಿ, ಗುಲಾಮುಗಳ ಹೆಸರುಗಳನ್ನು ಹೇಳುತ್ತಿದ್ದ. ಮತ್ತು ವಿವಿಧ ಇಸ್ಪೀಟಿನ ಆಟಗಳನ್ನು ಹೇಗೆ ಆಡಬೇಕೆಂಬುದನ್ನು ನಮಗೆ ಅರ್ಥವಾಗದ ರೀತಿಯಲ್ಲಿ ತಿಳಿಯಪಡಿಸುತ್ತಿದ್ದ. ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಆಯಾಸವಾಗುವವರೆಗೂ ಡುಮ್ಕಿ ಹೊಡೆದು ಸ್ಕೂಲಿಗೂ, ಸರಸ್ವತಿಗೂ ಶರಣು ಹೊಡೆದ. ಯಾವಾಗ ದಾರಿಯಲ್ಲಿ ಸಿಕ್ಕಿದರೂ ಹೊಸದೊಂದು ವೃತ್ತಿಯನ್ನು ಕೈಕೊಂಡಿರುವುದಾಗಿ ಹೇಳುತ್ತಿದ್ದ. ಮತ್ತು ಈ ಹಿಂದೆ ಕೈಗೊಂಡಿದ್ದ ವೃತ್ತಿ ತನ್ನಂಥವನಿಗೆ ಏಕೆ ಸರಿಬೀಳಲಿಲ್ಲವೆಂದೂ, ಹೊಸದಾಗಿ ಕೈಕೊಂಡಿರುವ ವೃತ್ತಿಯ ಬಗ್ಗೆ ಗುಣಗಾನವನ್ನೂ ಯಥೇಷ್ಟವಾಗಿ ಮಾಡುತ್ತಿದ್ದ. ಇವನು ಎಷ್ಟೋ ವೃತ್ತಿಗಳನ್ನು ಇನ್ನುಮುಂದೆ ಕೈಗೊಳ್ಳುವುದಾಗಿ ಬೆದರಿಕೆ ಹಾಕಿದ್ದ.

ಅವೊತ್ತು ಎರಡನೆಯ ತಾರೀಖು ಭಾನುವಾರ. ಶನಿವಾರ ಸಂಬಳ ಬಂದಿತ್ತು. ಮಧ್ಯಾಹ್ನ ಊಟಮಾಡಿ ಒಂದು ಜೊಂಪು ತೆಗೆಯೋಣವೆಂದು ಮಲಗಿದ್ದೆ. ಮಕ್ಕಳಿಗೆಲ್ಲ ಮೂರು ಮೂರುಕಾಸು ಲಂಚ ಕೊಟ್ಟು ಪಕ್ಕದ ಮನೆಯಲ್ಲಿ ಮಧ್ಯಾಹ್ನ ಮೂರು ಗಂಟೆಯವರೆಗೂ ಆಡಿಕೊಂಡಿರಬೇಕೆಂದು ಸುಗ್ರೀವಾಜ್ಞೆ ಕೊಟ್ಟಿದ್ದೆ.

"ಕಿಟ್ಟೀ, ಕಿಟ್ಟೀ!" ಯಾರೋ ನೂರಡಿ ಬಾವಿಯಲ್ಲಿ ಕೀರಲಿದಂತೆ ಭಾಸ ವಾಯಿತು. ಕೀರಲು ಶಬ್ದ ಗಟ್ಟಿಯಾಗಿ ಬಡಿದುಕೊಳ್ಳಲಾರಂಭಿಸಿತು. ನಿದ್ರೆ ಗೆಡಿಸಿದ ಪಾಪಿಯನ್ನು ಮನಸ್ಸಿನಲ್ಲಿಯೇ ಬಯ್ಯುತ್ತ, ಕಣ್ಣುಜ್ಜಿಕೊಳ್ಳುತ್ತ ಹೊರಗಿನ ಬಾಗಿಲು ತೆರೆದೆ. "ಅಯೋಗ್ಯ, ಮುಟ್ಠಾಳ" ಮುಂತಾದ ಬಯ್ಗಳಿಂದ ಕುಂಟು ನನ್ನನ್ನು ಸ್ವಾಗತಿಸಿ, ಮಧ್ಯಾಹ್ನದ ನಿದ್ರೆಯಿಂದಾಗುವ ಅನರ್ಥಗಳ ಬಗ್ಗೆ ಒಂದು ಪುಟ್ಟ ಭಾಷಣ ಮಾಡಿದ.

"ಏಳು, ಬಟ್ಟೆ ಹಾಕಿಕೋ" ಎಳೆಯ ಮಕ್ಕಳಿಗೆ ಹೇಳುವ ಹಾಗೆ ಹೇಳಿದ.

"ಎಲ್ಲಿಗೆ ?"

"ನೋಡು, ಈ ಅಪಶಕುನ ಬೇಡ. ಒಳ್ಳೆಯ ಕೆಲಸಕ್ಕೆ ಹೊರಟಿದ್ದೇವೆ. ಎಲ್ಲಿಗೆ ಅಂತ ಕೇಳಬಾರದು." ಕುಂಟೂಗೆ ಎಲ್ಲ ಶಕುನಗಳಲ್ಲಿಯೂ ತುಂಬಾ ನಂಬಿಕೆ. 'ಭಾರತೀಯ ಶಕುನಗಳು' ಎಂಬ ಉದ್ಗ್ರಂಥವನ್ನು ಎಂದಾದರೂ ಒಂದು ದಿನ ಬರೆಯುವದಾಗಿಯೂ, ಅದಕ್ಕೆ ನೋಬೆಲ್ ಪಾರಿತೋಷಕ ಸಿಕ್ಕರೂ ಸಿಕ್ಕಬಹುದೆಂದೂ ಹೇಳಿದ.

"ಕಾಫಿ ಕುಡಿದುಹೋಗಿ."

ಅಡಿಗೆಯ ಮನೆಯಿಂದ ಅಶರೀರವಾಕ್ಕು ಕೇಳಿಬಂದಿತು. ನನ್ನ ಹೆಂಡತಿ ಕೂಗಿದಳೆಂದು ನಾನು ಪ್ರತ್ಯೇಕ ಹೇಳಬೇಕಾಗಿಲ್ಲ. ಸರಿ ಒಳಕ್ಕೆ ಹೋದೆ.

"ಏನು, ವೆಂಕಟು ಬಂದಿದ್ದಾರೆ! ಮತ್ಯಾವ ಮಖಮಲ್ ಟೋಪಿ ತಂದಿದ್ದಾರೆ ? ಎಲ್ಲಿಗೂ ಈಗ ಹೋಗಬೇಡಿ. ಸ್ವಸ್ಥವಾಗಿ ಮನೆಯಲ್ಲಿ ಮಲಗಿ ಸಾಕು." ದೊಡ್ಡದನಿಯಲ್ಲಿ ಹಾಗೆಲ್ಲ ಮಾತನಾಡಕೂಡದೆಂದು ಅಂಗಲಾಚಿದೆ. "ಏನೋ ಪಾಪ ಹಳೆಯ ಸ್ನೇಹಿತ, ಯಾವುದೋ ಕೆಲಸವಿದೆಯಂತೆ, ಅರ್ಧ ಗಂಟೆ ಯಲ್ಲಿ ಬಂದುಬಿಡುತ್ತೇನೆ" ಎಂದು ಹೇಳಿ ಲಗುಬಗೆಯಿಂದ ಕುಂಟೂನ ಹೆಗಲ ಮೇಲೆ ಕೈಹಾಕಿ ಹೊರಟೆ.

"ಏನಯ್ಯ ಸಮಾಚಾರ ?" ಎಂದು ಕೇಳಿದೆ.

"ಕಿಟ್ಟಿ, ನನಗೆಷ್ಟು ಜನ ಸ್ನೇಹಿತರು ಈ ಬೆಂಗಳೂರಿನಲ್ಲಿದ್ದಾರೆಂದು ನಿನಗೆ ಗೊತ್ತು. ಎಲ್ಲರನ್ನೂ ಬಿಟ್ಟು ನಿನ್ನಲ್ಲಿಗೆ ಬಂದೆ. ಯಾಕೆ ಹೇಳು ? ನಿನ್ನ ಮೇಲೆ ನನಗೆ ಅಷ್ಟು ಅಭಿಮಾನ. ಇವೊತ್ತು ಬೆಳಿಗ್ಗೆ ಸರ್ದಾರ್ ಖಾನ್ ಕಡೆಯ ಜಮಾದಾರ್ ಸಿಕ್ಕಿದ್ದ. ನಾಲ್ಕು ಒಳ್ಳೆಯ ಇನ್‌ಫರ್ಮೇಷನ್ ಕೊಟ್ಟ...."

"ಯಾವ ಸರ್ದಾರ್ ಖಾನ್, ಏನು ಇನ್‌ಫರ್ಮೇಷನ್ ? ನನಗೊಂದೂ ಅರ್ಥವಾಗೋದಿಲ್ಲ. ತಿಳಿಯುವ ಹಾಗೆ ಹೇಳು."

"ಥೂ ನೀನೆಂಥ ಮಂಕು. ಸರ್ದಾರ್ ಖಾನ್ ಎಂದರೆ ರೇಸ್ ಕುದುರೆಗಳ ಮಾಲೀಕ. ಜಮಾದಾರ್ ಅಂದರೆ ಆ ಕುದುರೆಗಳ ಮೇಲ್ವಿಚಾರಣೆಯಲ್ಲಿರುವವನು ಎಂದು. ಇನ್‌ಫರ್ಮೇಷನ್ ಅಂದರೆ ಈದಿನ ಯಾವ ಕುದುರೆಗಳು ಗೆಲ್ಲುತ್ತವೆ ಎಂಬ ಸಮಾಚಾರ."

"ಏನೋಪ್ಪ ! ಇವೊಂದೂ ನನಗರ್ಥವಾಗೋದಿಲ್ಲ."

"ನಾನಿದ್ದೀನಲ್ಲ, ಈದಿನ ಬುಕ್ಕೀಗಳನ್ನ ಪಾಪರ್ ಮಾಡೋಕೆ ಹೊರಟಿದ್ದೇನೆ. ಒಳ್ಳೆಯ ಅದೃಷ್ಟ ಬಂದಿದೆ. ಅದರಲ್ಲಿ ನಿನಗೂ ಪಾಲು ಇರಲಿ ಅಂತ ನಿನ್ನಲ್ಲಿಗೆ ಬಂದೆ. ನಾನೇನು ಹೆಚ್ಚು ಹಣ ತಂದಿಲ್ಲ, ಒಂದು ನೂರು ರೂಪಾಯಿ ತಂದಿದ್ದೇನೆ ಅಷ್ಟೆ. ಒಂದೊಂದು ಕುದುರೆ ವಿನ್ ಆದಂತೆ ಆ ಹಣವನ್ನೆಲ್ಲಾ ಇನ್ನೊಂದು ಕುದುರೆಯ ಮೇಲೆ ಕಟ್ಟುತ್ತಾ ಹೋಗುತ್ತೇನೆ. ಈ ಇನ್‌ಫರ್ಮೇಷನ್ ಕೊಟ್ಟ ಜಮಾದಾರನಿಗೆ ಹತ್ತು ರೂಪಾಯಿ ಕೊಟ್ಟಿದ್ದೇನೆ."

ಭಾನುವಾರ ಅಂಗಡಿಗಳಿಗೆ ರಜ ಆದದ್ದರಿಂದ ಬಾಕಿಸಾಕಿಗಳಾವನ್ನೂ ಪಾವತಿಮಾಡಿರಲಿಲ್ಲ. ಮನೆ ಮಾಲೀಕರು ಮೈಸೂರಿನಲ್ಲಿರುವುದರಿಂದ ಅವರಿಗೆ ಮನಿ ಆರ್ಡರ್ ಮೂಲಕ ಬಾಡಿಗೆ ಹಣ ಕಳುಹಿಸಬೇಕಾಗಿತ್ತು. ಆ ಹಣವೆಲ್ಲಾ ಇನ್ನೂ ಜೇಬಿನಲ್ಲಿಯೇ ಇತ್ತು. ಈ ಹಿಂದೆ ಕುಂಟೂನ ಸಹವಾಸದಿಂದ ಹಣ ಕಳೆದುಕೊಂಡ ಕಹಿನೆನಪುಗಳು ಸ್ಮೃತಿಪಟಲದ ಮೇಲೆ ಸುಳಿದವು. ತಾಯಿಯು ತನ್ನ ಮುದ್ದು ಕಂದನ ಮೈ ನೇವರಿಸುವಂತೆ ನೋಟುಗಳ ಕಂತೆಯನ್ನು (ಹತ್ತು ರೂಪಾಯಿಗಳ ಹದಿನೈದು ನೋಟುಗಳು) ಒಂದು ಬಾರಿ ಮುಟ್ಟಿದೆ.

ಗಾಂಧೀ ಬಜಾರಿಗೆ ಬರುವ ಹೊತ್ತಿಗೆ ಯಾವನೋ ಒಬ್ಬ ಕೆಟ್ಟ ದನಿಯಲ್ಲಿ ಅರಚಿದ, "ಯಾರ್ರೀ ಒಬ್ಬರ್ ರೈಸ್‌ಕೋರ್ಸ್" ಅಂತ ಕೂಗಿದ. ಇಬ್ಬರು

ಆಗಲೇ ಜಟಕಾದಲ್ಲಿ ಕುಳಿತುಕೊಂಡು ಯಾವುದೋ ಪುಸ್ತಕಗಳನ್ನು ತದೇಕಚಿತ್ತ ದಿಂದ ನೋಡುತ್ತಿದ್ದರು. "ಏನು, ಭಗವದ್ಗೀತೆ ಕೈಯಲ್ಲಿ ಹಿಡಿದಿದ್ದೀರಿ ?" ಕುಂಟು ಹುಳುಕು ಹಲ್ಲುಗಳನ್ನು ಪ್ರದರ್ಶಿಸುತ್ತ ಗಾಡಿಯಲ್ಲಿ ಕುಳಿತವರನ್ನು ಕೇಳಿದ. "ಇದೆಯಲ್ಲಾ ಸ್ವಾಮೀ ಮಹಾಭಾರತ" ಅಂತ ಇವನ ಪ್ರಶ್ನೆಗೆ ಉತ್ತರ ಕೊಡುತ್ತಾ "ರಾಯರ ಫ್ಯಾನ್ಸಿ ಏನೋ ?" ಅಂತ ಒಬ್ಬರು ಕೇಳಿದರು. "ಮೈ ಡಾರ್ಲಿಂಗ್ ಇವೊತ್ತು ಹೊಡೆಯಲೇಬೇಕು." ಇದೇ ರೀತಿ ಅಶ್ವಸಂಬಂಧ ವಿಷಯಗಳನ್ನೇ ಮಾತನಾಡುತ್ತಿದ್ದರು. ಆ ಭಾಷೆ ನನಗೆ ಕೊಂಚವೂ ಅರ್ಥ ವಾಗುತ್ತಿರಲಿಲ್ಲ. ನನ್ನ ಮೌಢ್ಯವನ್ನು ಅವರೆದುರು ಪ್ರದರ್ಶಿಸಬಾರದೆಂದು ಅವರು ನಕ್ಕಾಗ ನಾನೂ ನಗುವುದು, ಅವರು ಹಲ್ಲುಗಿಂಜಿದಾಗ ನಾನೂ ಹಲ್ಲು ಗಿಂಜುವುದು, ಅವರು ಗಂಭೀರವಾಗಿದ್ದಾಗ ನಾನೂ ಗಂಭೀರವಾಗಿರುವುದು ಮುಂತಾದವನ್ನು ಮಾಡುತ್ತಿದ್ದೆ.

ರೇಸ್‌ಕೋರ್ಸ್ ತಲುಪಿದೆವು, ಆರು ರೂಪಾಯಿ ತೆತ್ತು ಒಳಕ್ಕೆ ಹೋದೆವು. ರೇಸ್‌ನಲ್ಲಿ ಹೆಚ್ಚು ಹಣ ಬಂದರೆ ಅದನ್ನು ಹೇಗೆ ವಿನಿಯೋಗಿಸಬೇಕೆಂದು ಲೆಕ್ಕ ಹಾಕುತ್ತಿದ್ದೆ. ಆ ವಾರದ ಭವಿಷ್ಯದಲ್ಲಿ ನನಗೆ ಅಕಸ್ಮಾತ್ ಧನಪ್ರಾಪ್ತಿಯೆಂದು ಸಹ ಬರೆದಿತ್ತು. ಕುಂಟೂ ದೇವರ ಹಾಗೆ, ನನ್ನ ಭಾಗ್ಯದೇವತೆಯ ಹಾಗೆ ಬಂದಿದ್ದಾನೆಂದು ಅವನನ್ನು ಮನಸ್ಸಿನಲ್ಲಿಯೇ ಸ್ಮರಿಸಿಕೊಂಡೆ. ಅಲ್ಲದೆ ಈ ಹಿಂದೆ ಕುಂಟೂ ನನಗೆ ಎಷ್ಟೋ ಸಾರಿ ಹೇಳಿದ್ದ. ತಾನು ಕೇವಲ ಐದು ರೂಪಾಯಿ ಗಳನ್ನು ತೆಗೆದುಕೊಂಡು ಹೋಗಿ ಎಂಟು ನೂರು ರೂಪಾಯಿಗಳನ್ನು ಹೊಡೆ ದದ್ದನ್ನೂ ಹೇಳಿದ್ದ.

ಮೊದಲನೆಯ ರೇಸ್ ಆರಂಭವಾಯಿತು. "ನನಗೆ ಈ ರೇಸ್‌ನಲ್ಲಿ ಇನ್‌ಫರ್ಮೇಷನ್ ಇಲ್ಲ. ಒಂದು ಒಳ್ಳೆಯ ಫ್ಲೂಕ್ ಕುದುರೆ ಕೊಡುತ್ತೇನೆ. ಬರೀ ಪ್ಲೇಸಿಗೆ ೫೦-೬೦ ರೂಪಾಯಿ ಕಡಿಮೆ ಕೊಡುವುದಿಲ್ಲ. ೧೬ನೆಯ ನಂಬರ್ ಕುದುರೆಗೆ ಒಂದು ಪ್ಲೇಸ್ ತೆಗೆದುಕೋ" ಅಂತ ಹೇಳಿ ಆ ಕುದುರೆ ಕಲ್ಕತ್ತ, ಬೊಂಬಾಯಿಗಳಲ್ಲಿ ಮಾಡಿದ ಸಾಹಸಗಳನ್ನೆಲ್ಲಾ ಅಂಕಿ ಅಂಶಗಳಿಂದ ವಿವರಿಸಿದ. ಆ ಕುದುರೆಯ ತಂದೆತಾಯಿಗಳು, ಅಣ್ಣತಮ್ಮಂದಿರು, ಅಕ್ಕತಂಗಿಯರು, ಸೋದರಮಾವ ಸೋದರತ್ತೆಯರು, ಮುಂತಾದ ಅನುಬಂಧಿಗಳ ಪಟ್ಟಿ ಯನ್ನೆಲ್ಲಾ ನನಗೆ ವಿವರಿಸಿದ. ನನಗೆ ಅದೊಂದೂ ಅರ್ಥವಾಗದ್ದರಿಂದ ಕೌಲೇ

ಬಸವನಂತೆ ತಲೆಹಾಕಿದೆ. ರೇಸ್ ಆರಂಭವಾಯಿತು. "ಕಿಟ್ಟೀ, ನಿನ್ನ ಕುದುರೆ ಮುಂದಿದೆ" ಕುಂಟೂ ಅರಚಿದ. "ನಾನು ಹಾಗೆಲ್ಲಾ ಟಿಪ್ ಕೊಡಲ್ಲಾಮ್ಮಾ! ಲೆಕ್ಕಾಚಾರದ ಪ್ರಕಾರ ಇವತ್ತು ಇದೇ ವಿನ್ ಆಗಬೇಕು" ಅಂತ ಹೇಳಿದ. ಬೆಂಡ್ ಹತ್ತಿರ ಬಂದಾಗ ನನ್ನ ಕುದುರೆ (ಇಲ್ಲ ನಮ್ಮ ತಾತನದೇ ಇರಬೇಕು) ನಾಲ್ಕನೆಯ ಸ್ಥಾನಕ್ಕೆ ಹೋಯಿತು. "ಇದೇನೋ ಕುಂಟು, ಹಿಂದೆ ಬಿತ್ತು!" ಎಂದೆ. "ಹೋಗೋ ಮಂಕೇ, ರೇಲಿಂಗ್ಸ್ ಹಿಡೀತಿದ್ದಾನೆ" ಅಂತ ಹೇಳಿದ.

ಕಣ್ಣುಮುಚ್ಚಿ ಕಣ್ಣು ತೆಗೆಯುವುದರಲ್ಲಿ ಕುದುರೆಗಳು ಧಡ ಧಡ ಬಂದವು. ಆ ಗುಂಪಿನಲ್ಲಿ ಆ ಅವಾಂತರದಲ್ಲಿ ಯಾವುಯಾವುವೋ ನುಗ್ಗಿದವು. ಹದಿನಾರನೆಯ ನಂಬರ್ ಕುದುರೆ ಹದಿನಾರನೆಯದಾಗೇ ಉಳಿಯಿತು. "ಜಾಕೀ ಹಿಡಿದ ಕಣೋ, ಇಲ್ಲದಿದ್ದರೆ ಅದೇ ವಿನ್" ಎಂದು ಹೇಳುತ್ತಾ ಆ ಜಾಕಿಯ ತಾಯಿ, ಅಕ್ಕತಂಗಿಯವರು ಮುಂತಾದ ಸ್ತ್ರೀ ಸಂಬಂಧೀಕರುಗಳನ್ನೆಲ್ಲಾ ಅವಾಚ್ಯ ಶಬ್ದಗಳಿಂದ ಬೈದ. ಏನು ಬೈದರೇನು, ಹತ್ತು ರೂಪಾಯಿ ನಮ್ಮಪ್ಪನ ದಾರಿ ಹಿಡಿಯಿತು.

ಎರಡನೆಯ ರೇಸಿನಲ್ಲಿ ಕುಂಟೂಗೆ ಇನ್‌ಫರ್ಮೇಷನ್ ಇತ್ತು. "ಈ ಕುದುರೆ ಬರದಿದ್ದರೆ ಮೂಗು ಮೂರು ತುಂಡು ಮಾಡಿಸಿಕೊಳ್ಳುತ್ತೇನೆ" ಅಂತ ಹೇಳಿ ಒಂಭತ್ತನೇ ನಂಬರ್ ಕುದುರೆಯಮೇಲೆ ವಿನ್ ತೆಗೆದುಕೊಳ್ಳಲು ಹೇಳಿದ. ಅದು ಸಹ ಮೊದಲನೆಯದರ ದಾರಿ ಹಿಡಿಯಿತು. ಅವನ ಮೂಗು ಮೂರು ತುಂಡು ಮಾಡಲು ಚಾಕು, ಕತ್ತರಿ, ಬ್ಲೇಡ್ ಯಾವುದೂ ನನ್ನ ಜೇಬಿನಲ್ಲಿ ಇಲ್ಲದ್ದರಿಂದ ಸುಮ್ಮನಾದೆ.

ಕುದುರೆಗಳು ಸುತ್ತುವ ಕಡೆ ಕುಂಟು ಹೋದ. ಯಾರನ್ನೋ ವಿಚಾರಿಸಿದ. ಅವರೇನೋ ಇವನ ಕಿವಿಯಲ್ಲಿ ಪಿಸುಗುಟ್ಟಿದರು. "ಬುಕ್ಕೀ ಹತ್ತಿರ ಒಂದಕ್ಕೆ ಎಂಟರಂತೆ ಆರನೇ ನಂಬರ್ ಕುದುರೆಯಮೇಲೆ ಆಡು" ಅಂತ ಹೇಳಿದ. ಸರಿ, ಮೂವತ್ತು ರೂಪಾಯಿ ಅದಕ್ಕೆ ಕಟ್ಟಬೇಕಾದ ಟ್ಯಾಕ್ಸ್ ಕೊಟ್ಟಿದ್ದಾಯಿತು. "ಇದು ವಿನ್ ಆದರೆ ನಿನಗೆ ೨೪೦ ರೂಪಾಯಿ ಬರುತ್ತೆ" ಅಂತ ಹೇಳಿದ. ಪಾಪ, ಅದೇಕೆ ಬರಬಾರದು!

ಕುಂಟೂನ ಇನ್‌ಫರ್ಮೇಷನ್ ಪ್ರಕಾರ ನಾಲ್ಕು ಕುದುರೆಗಳಿಗೆ ಮೂವತ್ತರಂತೆ ಕಟ್ಟಿದ್ದಾಯಿತು. ಅವೊಂದೂ ಬರಲಿಲ್ಲ! ಚಿಲ್ಲರೇಪಲ್ಲರೇ, ಕುಂಟೂನ

ಹತ್ತಿರ ಉಳಿದಿದ್ದ ಒಂದೂ ಎರಡೂ ಸೇರಿಸಿ ಐದಕ್ಕೆ ಭರ್ತಿಮಾಡಿ, ಯಾರೊಂದಿಗೋ ಭಾಗಕ್ಕೆ ಸೇರಿ ಒಂದು ವಿನ್ ತೆಗೆದಿದ್ದಾಯಿತು. ಹಾಳಾದ್ದು ಅದು ಎರಡನೆಯದಾಗಬೇಕೆ ?

"ಏನೋ ಇದು ಕುಂಟು, ಹೀಗಾಯ್ತು !" ಅಂದೆ. ಕುಂಟು ಅಲ್ಲಿರಲಿಲ್ಲ. ಎಲ್ಲೆಲ್ಲಿ ಹುಡುಕಿದರೂ ಸಿಕ್ಕಲಿಲ್ಲ. ಸರಿ, ಮನೆಯ ಕಡೆ ಹೊರಟೆ. ಮಳೆ ಬರಲಾರಂಭವಾಯಿತು. ಜಟಕಾದಲ್ಲಿ ಹೋಗುವುದಕ್ಕೆ ದುಡ್ಡಿಲ್ಲ. ಆತ್ಮಹತ್ಯ ಮಾಡಿಕೊಳ್ಳಲು ವಿಷ ತೆಗೆದುಕೊಳ್ಳಲು ಸಹ ಸಾಲಮಾಡಿಯೇ ವಿಷ ಕೊಂಡು ಕೊಳ್ಳಬೇಕಾಗಿತ್ತು.

ತಲೆಯಲ್ಲಿ ಒಂದು ನೂರಾ ಐವತ್ತು ಆಲೋಚನೆಗಳು ಸುಳಿದವು. ಒಂದು ರೂಪಾಯಿಗೆ ಒಂದು ಯೋಚನೆಯಂತೆ. ಮಳೆಯಲ್ಲಿಯೇ ನೆನೆಯುತ್ತಾ ನೇರವಾಗಿ ಗುರುತಿನ ಮಾರ್ವಾಡಿ ಬಳಿ ಹೋದೆ. ಒಂದು ನೂರಾ ಐವತ್ತು ರೂಪಾಯಿಗಳನ್ನು ಶೇಕಡಾ ಹದಿನೆಂಟು ರೂಪಾಯಿನಂತೆ ಸಾಲವಾಗಿ ತೆಗೆದು ಕೊಂಡು, ಪ್ರಾಮಿಸರಿ ನೋಟು ಬರೆದುಕೊಟ್ಟು ಮನೆಗೆ ಬಂದಮೇಲೆ ನನ್ನ ಹೆಂಡತಿ ಕೇಳಿದಳು : "ಏನು ! ಇಬ್ಬರೂ ಎಲ್ಲಿಗೆ ಹೋಗಿದ್ದಿರಿ ?"

"ಪಿಕ್ಚರ್‌ಗೆ ಹೋಗಿದ್ದೆವು ಕಣೇ, 'ಮೀಠಾಜಹರ್ (ಸಿಹಿವಿಷ)' ಅಂತ. ಹಿಂದೀ ಪಿಕ್ಚರ್ ಬಹಳ ಚೆನ್ನಾಗಿತ್ತು."

* * * *

ಮಾರ್ವಾಡಿಯ ಸಾಲದಲ್ಲಿ ಒಂದು ಕಾಸೂ ತೀರಿಲ್ಲ. ತಿಂಗಳು ತಿಂಗಳಿಗೆ ಬಡ್ಡೀ ಪಾವತಿ ಮಾಡುತ್ತಿದ್ದೇನೆ. ಅದಿರಲಿ, ಆವೊತ್ತಿನಿಂದ ಇವೊತ್ತಿನವರೆಗೂ ಕುಂಟೂ ನನ್ನ ಕೈಗೆ ಸಿಕ್ಕಿಲ್ಲ. ನಿಮಗೇನಾದರೂ ಸಿಕ್ಕಿದರೆ ನನಗೆ ಕೊಂಚ ವರ್ತಮಾನ ಕೊಡಿ.

# ಎಗ್ಜಿಬಿಷನ್ ಅನುಭವ

ಬೆಂಗಳೂರಿನಲ್ಲಿ ವರ್ಷಕ್ಕೊಂದು ಬಾರಿ ಕರಗ ನಡೆಯುವಂತೆ ಎಗ್ಜಿಬಿಷನ್ ಸಹ ನಡೆಯುತ್ತದೆ. "ಎಗ್ಜಿಬಿಷನ್ ಆರಂಭವಾಯ್ತಂತೆ, ನಾವೂ ಒಂದು ದಿನ ಹೋಗೋಣ." ಮನೆಯಲ್ಲಿ ಮಂದರದಲ್ಲಿ ಆರಂಭವಾದ ಕೂಗು ತಾರಕವನ್ನು ಮುಟ್ಟಿತು. ಶಾಸನ ಸಭೆಗಳಲ್ಲಿ ಮಂತ್ರಿಗಳು ಹಾರಿಕೆ ಉತ್ತರ ಕೊಡುವಂತೆ 'ಗಮನ ದಲ್ಲಿದೆ', 'ತಕ್ಕುದನ್ನು ಮಾಡುತ್ತೇವೆ' ಮುಂತಾದ ಯಾವ ಉತ್ತರವೂ ನನ್ನ ಹೆಂಡತಿಯ ಕಿವುಡು ಕಿವಿಯಮೇಲೆ ಬೀಳಲಿಲ್ಲ. ಏರಿಕೆ ಬೆಲೆ, ಹೆಚ್ಚಿನ ಸಿಬ್ಬಂದಿ (ಮೊನ್ನೆ ಹುಟ್ಟಿದ ಅವಳಿಜವಳಿ ಸೇರಿ), ಮಾರ್ಕೆಟ್ಟಿನಲ್ಲಿಯೇ ಸಿಗುವ ಸಾಮಾನು ಗಳೂ ಅಲ್ಲಿಯೇ ಸಿಕ್ಕುತ್ತವೆ ಮುಂತಾದ ನ್ಯಾಯಸಮ್ಮತ ಉತ್ತರಗಳೂ ಅದೇ ಗತಿಯನ್ನೇ ಕಂಡವು. ಕೊನೆಗೆ ಎಗ್ಜಿಬಿಷನ್‌ಗೆ ಹೋಗಲು ನಿರ್ಧರಿಸಿದೆವು.

ಭಾನುವಾರವೊಂದರ ವಿನಾ ಇನ್ನಾವ ವಾರವೂ 'ಆ ವಾರ'ವೂ ಸಹ ಸೇರಿ ನನಗೆ ರಜ ದೊರೆಯುವುದಿಲ್ಲ. ಬಿ.ಟಿ.ಸಿ. ಬಸ್‌ಗಳು ತುಂಬುಗರ್ಭಿಣಿಯಾಗಿ (ಜನರನ್ನು ತನ್ನ ಗರ್ಭದಲ್ಲಿ ಅಡಗಿಸಿಕೊಂಡು) ಹೂಂಕಾರಮಾಡುತ್ತಾ ಹೋಗು ತ್ತಿದ್ದವು. ಮೂರು ಮೆಜಸ್ಟಿಕ್ ಬಸ್‌ಗಳನ್ನು ಕಳೆದುಕೊಂಡು ಜಟಕಾರೂಢ ರಾಗಿ ಹೋಗಲು ನಿಶ್ಚೈಸಿದ್ದಾಯಿತು. ಎಗ್ಜಿಬಿಷನ್‌ಗೆ ಹೋಗಬೇಕೆಂಬ ನನ್ನ ಹೆಂಡತಿಯ ಸಿಥಾರರದ ಕಮರುವಾಸನೆಯನ್ನು ಕಂಡುಹಿಡಿದ ಜಟಕಾ ಸಾರಥಿ "ಎಲ್ಡ್ ರೂಪಾಯಿ ಕೊಟ್ರೆ ಹೊಡೀತೀನಿ" ಅಂದ. ಹಾಗೂ ಹೀಗೂ ಅರ್ಧ ಗಂಟೆ ಚೌಕಾಸಿ ಮಾಡಿ ಒಂದೂ ಮುಕ್ಕಾಲು ರೂಪಾಯಿಗೆ ಎರಡು ಜಟಕಾ ಗಳನ್ನು ಗೊತ್ತುಮಾಡಿದ್ದಾಯಿತು. ಪದ್ದಿ, ಕಮಲು, ಶಾಮಲ (ಹೆಸರಿಗೆ ತಕ್ಕ ಹಾಗೆ ಇದ್ದಾಳೆ), ಮುದ್ದು ಗುಂಡು – ಇವರೆಲ್ಲರನ್ನೂ ಒಂದು ಜಟಕಾದಲ್ಲಿಯೂ, ನಾಲಿ (ಇವಳ ಮೂಲ ಹೆಸರೇನೆಂಬುದು ನನಗೇ ಮರೆತುಹೋಗಿದೆ), ನಾನು, ನನ್ನ ಹೆಂಡತಿ, ಕೈಗೂಸು, ಬಗಲ ಕೂಸು – ಇನ್ನೊಂದು ಗಾಡಿಯಲ್ಲಿಯೂ ಮೆರವಣಿಗೆ ಹೊರಟೆವು.

ಎಗ್ಸಿಬಿಷನ್ ತಲುಪಿದ ಕೂಡಲೇ ಜಿಜ್ಞಾಸಕ್ಕೆ ಆರಂಭವಾಯಿತು. ಅವಳು ಕಂಠಪಾಠ ಮಾಡಿದಂತೆ ತೋರುತ್ತಿತ್ತು. ಉದ್ದನೆಯ ಬಾಣಂತಿ ಖಾರದ (ಲೇಹ್ಯದ) ಪಟ್ಟಿಯನ್ನೇ ಹೇಳಿದಳು. ಅವುಗಳ ಒಟ್ಟು ಮೊತ್ತ ಎಷ್ಟಾಗ ಬಹುದೆಂಬುದನ್ನು ಲೆಕ್ಕ ಹಾಕುವ ಶ್ರಮವನ್ನು ನಾನು ತೆಗೆದುಕೊಳ್ಳಲಿಲ್ಲ. ಕಾರಣ ಏನೆಂದರೆ ನನ್ನಲ್ಲಿ ಕೇವಲ ಹತ್ತು ರೂಪಾಯಿಗಳಿದ್ದವು.

ವಾಹನಗಳ ಸಂಚಾರ ಬಹಳ ಹೆಚ್ಚಾಗಿರುವ ರಸ್ತೆಗಳಲ್ಲಿ ಕುರಿಗಳನ್ನು ಬಹಳ ಎಚ್ಚರಿಕೆಯಿಂದ ಹೊಡೆದುಕೊಂಡು ಹೋಗುವಂತೆ, ನಾನು ಮಕ್ಕಳನ್ನು ಬಹು ಎಚ್ಚರಿಕೆಯಿಂದ ಕರೆದುಕೊಂಡು ಮುಂದೆ ಸಾಗುತ್ತಿದ್ದೆ. "ಗರಂ ಗರಂ ಹುರಿಗಾಳು" ಹಾಳಾದ್ದು ಯಾವನೋ ಪಕ್ಕದ ಅಂಗಡಿಯ ಶನಿ ಕೆಟ್ಟ ದನಿಯಲ್ಲಿ ಕೂಗುತ್ತಿದ್ದ. "ನಂಗ್ಹುರಿಗಾಳೂ...." ನಾಟಕದ ಆರಂಭದಲ್ಲಿ ಮೂರು ಜನ ನಾಂದೀ ಪದ ಹೇಳುವಂತೆ ಮೂರು ಹುಡುಗರು ಅರಚಿದವು. ಹುರಿಗಾಳಿಗೆ ಎಂಜಲು ಹಾಕಿರುತ್ತಾರೆಂದೂ, ಕೋಳಿಮೊಟ್ಟೆ ಹಾಕಿರುತ್ತಾರೆಂದೂ ಹೆದರಿಸಿದೆ. ನನ್ನ ಹೆದರಿಕೆಗೆ ಹುಡುಗರು ಮಣಿಯಲಿಲ್ಲ. ಸರಿ, ಒಂದೂವರೆ ಆಣೆ ತೆತ್ತಿ ದ್ದಾಯಿತು. ಯಾವುದೋ ಯಂತ್ರಗಳ ಅಂಗಡಿಯ ಮುಂದೆ ನಿಂತೆವು. ಅಲ್ಲಿ ನೀನೇ ಅನ್ನುವವರು ದಿಕ್ಕಿರಲಿಲ್ಲ. ಎಲ್ಲ ಜನರೂ ಬಳೆ, ರಿಬ್ಬನ್ ಅಂಗಡಿಗಳಿಗೆ ದಾಳಿಮಾಡುತ್ತಿದ್ದರು. ಈ ಹೊತ್ತಿಗೆ ಸರಿಯಾಗಿ ಯಾವನೋ ಹಾಳಾದವನು "ಐಸ್ ಕೋಲಾ ಕ್ಯಾಂಡೀ" ಅಂತ ಗೊಗ್ಗರ ದನಿಯಲ್ಲಿ ಅರಚಿದ. "ನನಗೆ ಐಸ್ ಕುಂಡೀ ಬೇಕೂ" ಅಂತ ಶಾಮುಲ ಹಟ ಹಿಡಿದಳು. ಆರೋಗ್ಯಶಾಸ್ತ್ರದ ಮೊದಲನೇ ಪಾಠ ಒಪ್ಪಿಸಿದೆ. ಅವಳು ಕೇಳಲಿಲ್ಲ. ಸರಿ, ಅವಳಿಗೆ ಆರಂಭ ವಾದ ರೋಗ ಸಾಂಕ್ರಾಮಿಕವಾಗಿ ಪರಿಣಮಿಸಿತು. ಎಲ್ಲರಿಗೂ ಅದನ್ನು ಒಂದೊಂದರಂತೆ ಕೊಡಿಸಿದ್ದಾಯಿತು. ಹುಡುಗರು ಭರತನಾಟ್ಯ, ಕಥಕ್ ಕಥಕಳಿ, ಮಣಿಪುರಿ, ರಂಬಾ, ಫಾಕ್ಸ್ ಟ್ರಾಟ್ ನೃತ್ಯಗಳನ್ನು ಮಾಡುತ್ತಾ ಐಸ್ ಕ್ಯಾಂಡಿಗಳನ್ನು ತಿನ್ನುತ್ತಾ ಸಾಗಿದವು. "ಪಾಪೂಗೆ ಏನಾದ್ರೂ ತಗೋಬೇಕು ಅಂದ್ರೆ" ನನ್ನ ಅರ್ಧಾಂಗಿ ಹೇಳಿದಳು. "ಒಂದು ಒಳ್ಳೆ ದೊಣ್ಣೆ ತಗೊಳ್ಳೋಣ" ಅಂದೆ ನಾನು. "ಥೂ, ನಿಮ್ಮ ಹಣೆಬರಹವೇ ಹೀಗೆ. ಇವನಿ ಗೊಂದು ಚನ್ನಪಟ್ಟಣದ ಗಿಲಕಿ ತಗೊಳ್ಳೋಣ." ಪಾಪೂನ ಕಡೆ ತಿರುಗಿ "ಏನೋ ಪಾಪು, ನಿಂಗೆ ಗಿಲಕಿ ಬೇಕೇನೋ, ಛೀ ಕಳ್ಳ!" ಅಂತ ಅವನನ್ನು

ಕೇಳಿದಳು. ಅವನು ಯಾವ ಉತ್ತರವನ್ನೂ ಕೊಡದೆ ಮಂಗನ ಹಾಗೆ ಎತ್ತಲೋ ಶೂನ್ಯದೃಷ್ಟಿಯಿಂದ ನೋಡುತ್ತಿದ್ದ. ಸರಿ, ಅವನಿಗೆ ಐದಾಣೆ ತೆತ್ತು ಒಂದು ಗಿಲಕಿ ಕೊಂಡಿದ್ದಾಯಿತು. ಅಂಗಡಿಯಿಂದ ಹೊರಬರುವುದರೊಳಗೆ ಕೊಂಡಿದ್ದ ಒಂದು ಗಿಲಗಿ ಐದಾರಾಗಿದ್ದಿತು. ಅದಕ್ಕೆ ಕಾರಣಭೂತರಾದ (ಭೂತವೋ, ದೆವ್ವವೋ) ಇಬ್ಬರಿಗೆ ಥಪ್, ಥಪ್ ಅಂತ ಏಟುಗಳು ಬಿದ್ದವು. ಇವರಿಬ್ಬರೂ ಕಮಲಿ, ಪದ್ದಿ—ಹೋ ಎಂದು ಅರಚುತ್ತ ನಾಗಿದರು.

ಬಣ್ಣದ ನೀರು ಹೇಗೆ ಬರುತ್ತೆ, ಎಗ್ಸಿಬಿಷನ್‌ನಲ್ಲಿರುವ ಅಂಗಡಿಯವರು ಯಾವಾಗ ಊಟಮಾಡುತ್ತಾರೆ, ಅವರಿಗೆ ಸಂಸಾರ ಗಿಂಸಾರ ಏನಾದರೂ ಇದೆಯೆ, ಗನ್‌ಬೋಟ್ ಜಾಕ್ ಹೊಟ್ಟೆಗೆ ಏನು ತಿನ್ನುತ್ತಾನೆ—ಮುಂತಾದ ಅನೇಕ ಮಹತ್ವದ ಪ್ರಶ್ನೆಗಳನ್ನು ನನ್ನ ಹೆಂಡತಿ ನನಗೆ ಹಾಕುತ್ತಿದ್ದಳು. ಅವೆಲ್ಲಕ್ಕೂ ಸರಿಯಾದ ಉತ್ತರಗಳನ್ನು ಕೊಟ್ಟೆ.

ಕೊನೆಗೆ ರಿಬ್ಬನ್ ಅಂಗಡಿಯೊಂದಕ್ಕೆ ದಾಳಿಮಾಡಿದೆವು. ನಮ್ಮ ಹುಡುಗಿಯರು ಗೇಣುದ್ದ ಜಡೆಯನ್ನು ಮೊಳ ಉದ್ದಮಾಡಿಕೊಳ್ಳಲು ಒಂದೂವರೆ ಮೊಳ ಉದ್ದದ ಕಾಮನಬಿಲ್ಲಿನ ರಿಬ್ಬನ್‌ಗಳನ್ನು ಕೊಂಡುಕೊಂಡರು. ಪ್ಲಾಸ್ಟಿಕ್, ರಬ್ಬರ್, ಗಾಜು ಮುಂತಾದ ಬಳೆಗಳನ್ನು ಕೊಂಡರು. ನನ್ನ ಹೆಂಡತಿ ಇನ್ನೂ ಸುವಾಸಿನಿಯಾಗಿದ್ದುದರಿಂದ ಅವಳೂ ನಾಲ್ಕು ನಾಲ್ಕರಂತೆ ಎಂಟು ಬಳೆಗಳನ್ನು ತೊಟ್ಟಳು. ಮೂರೂವರೆ ರೂಪಾಯಿ ಕೊಟ್ಟದ್ದಾಯಿತು.

ಅವೊತ್ತು ಲಲಿತಾ, ಪದ್ಮಿನಿಯರ ನೃತ್ಯ (ಮೃತ್ಯ ?) ಬೇರೆ ಇತ್ತು. ನಮ್ಮಹಾಗೇ ಸಹಸ್ರಾರು ಕುರಿಗಳು ಬಂದಿದ್ದವು. ನೃತ್ಯ ಕಣ್ಣಿಗೆ ಬೀಳುವುದು ಸಾಧ್ಯವೇ ಇರಲಿಲ್ಲ. ಅಷ್ಟು ಜನರ ನೂಕುನುಗ್ಗಲು. ಸುಮಾರು ನಾಲ್ಕು ಫರ್ಲಾಂಗಿನ ಆಚೆ ಏನೋ ಎರಡು ಚುಕ್ಕೆಗಳು ಕಾಣಿಸುತ್ತಿದ್ದವು. ಅವರೇ ಲಲಿತಾ, ಪದ್ಮಿನಿಯರೆಂದು ಪಕ್ಕದಲ್ಲಿದ್ದವರಾರೋ ಹೇಳಿದರು. ಪಾಪ, ವಿಷಯ ತಿಳಿದವರಾರೋ ಹೇಳಿರಬೇಕೆಂದು ನಾವೂ ಒಪ್ಪಿಕೊಂಡು ತೆಪ್ಪಗೆ ತಲೆಹಾಕಿದೆವು.

ಈ ಅವಾಂತರದಲ್ಲಿ ನನ್ನ ಹೆಂಡತಿ ಎಲ್ಲಿಯೋ ತಪ್ಪಿಸಿಕೊಂಡಳು. ಆ ಜನಗಳ ಸಮುದ್ರದಲ್ಲಿ ಅವಳನ್ನು ಹುಡುಕಿದೆ. ನನ್ನ ಹೆಂಡತಿ ಉಟ್ಟಿದ್ದಂಥ ಸೀರೆ ಉಟ್ಟಿದ್ದ ಮೂರು ಜನರ ಸೆರಗು ಹಿಡಿದು ಎಳೆದೆ. ಅವರು ಪುಣ್ಯಕ್ಕೆ ಏನೂ

ಮಾಡದೆ ನನ್ನನ್ನು ದುರುದುರನೆ ನೋಡಿದರು, ಅಷ್ಟೆ. ಅಷ್ಟುಹೊತ್ತಿಗೆ ಎಗ್ಸಿಬಿಷನ್ ಲೌಡ್ ಸ್ಪೀಕರಿನಿಂದ ನನ್ನ ಹೆಂಡತಿ ಹೆಸರು ಹೇಳುತ್ತಾ, ಯಾರಾದರೂ ಬಂದು ಕರೆದುಕೊಂಡು ಹೋಗಬೇಕೆಂದು ಹೇಳಿದರು. ಗಾಬರಿಯಾಗಿ ಮಕ್ಕಳುಮರಿಗಳನ್ನೆಲ್ಲ ಕಟ್ಟಿಕೊಂಡು ಹೋದೆ. ಏನೋ ಮಹಾ ಅನರ್ಥವಾದಂತೆ ಅಳುತ್ತಾ ನಿಂತಿದ್ದಳು.

ಎಗ್ಸಿಬಿಷನ್ ದಾಟಿದೆವು. ಬಸ್ ಸಿಕ್ಕಲಿಲ್ಲ. "ಮನೀಗೆ ಬರೀ ಒಂದೂ ಮುಕ್ಕಾಲ್ ಕೊಟ್ಬಿಡಿ, ಖಾವರ್ದ್ದೂ ಗಾಡಿ ಐತೆ, ಇಬ್ರೂ ಹೊಡೀತೀವಿ." ಸರಿ, ಅವೇ ಎರಡು ಗಾಡಿಗಳಲ್ಲಿ ಮನೆಗೆ ಹೊರಟದ್ದಾಯಿತು.

ದಾರಿಯಲ್ಲಿ ನನ್ನ ಹೆಂಡತಿ ಹೇಳಿದಳು: "ಥೂ ಹೋಗ್ಬಾರ್ದಾಗಿತ್ತು ಅಂದ್ರೆ, ನಾನು ನಿಮ್ಮ ಮಾತು ಕೇಳಲಿಲ್ಲ."

"ನನ್ನ ಮಾತು ಕೇಳಿದ್ದಿದ್ರೆ ಹೀಗೆಲ್ಲಾ ಯಾಕೆ ಆಗ್ತಿತ್ತು. ಉಂಡ ಹಾಗಲ್ಲ, ತಿಂದ ಹಾಗಲ್ಲ, ಹದಿನೈದು ರೂಪಾಯಿ ದಂಡ!" ಅಂತ ಹೇಳಿದೆ.

# ನಾಯಿ

ನಾಯಿಗಳನ್ನು ಕಂಡರೆ ನನಗೆ ತುಂಬಾ ಪ್ರೀತಿ. ಏಕೆಂದರೆ, ಎಷ್ಟೋ ಜನರು ಎಲ್ಲ ಪ್ರಾಣಿಗಳಿಗಿಂತಲೂ ಹೆಚ್ಚಾಗಿ ನಾಯಿಯನ್ನು ಹೋಲುತ್ತಾರೆ. ನಾಯಿಗಳಲ್ಲಿ ಮೂರು ವಿಧಗಳಿವೆ. ಕಚ್ಚುವುದು, ಬೊಗಳುವುದು ಮತ್ತು ಬಾಲ ಗುಂಡಾಡಿಸುವುದು. 'ಕಚ್ಚುವ ನಾಯಿ ಬೊಗಳುವುದಿಲ್ಲ, ಬೊಗಳುವ ನಾಯಿ ಕಚ್ಚುವುದಿಲ್ಲ' ಎಂಬ ಗಾದೆಯ ಮಾತನ್ನೇನೋ ಮನುಷ್ಯರು ತಮ್ಮ ಅನುಕೂಲಕ್ಕಾಗಿ ಮಾಡಿಕೊಂಡಿದ್ದಾರೆ. ಆದರೆ ನಾಯಿಗಳಿಗೆ ಈ ವಿಚಾರ ತಿಳಿದಿದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಈ ಬಗ್ಗೆ ಹೆಚ್ಚಿನ ಸಂಶೋಧನೆ ಆಗುವುದು ಅತ್ಯಗತ್ಯ.

ಮೊದಲನೆಯ ಜಾತಿ ಕಚ್ಚುವ ನಾಯಿ; ಗುಮ್ಮನಗುಸಗ ಇದ್ದ ಹಾಗೆ ಇರುತ್ತದೆ. ನಾವು ಅದರ ತಂಟೆಗೆ ಹೋಗದೆ ಇದ್ದರೂ ಅಕಾರಣವಾಗಿ ಅದು ನಮ್ಮನ್ನು ಕಚ್ಚುತ್ತದೆ. ಈ ರೀತಿಯ ಜನರನ್ನೂ ನಾವು ನೋಡಬಹುದು. ಇದರಂತೆ – ಮಾತೆತ್ತಿದರೆ ಭಾಷಣ, ಹೇಳಿಕೆ ಕೊಡುವ ಬೊಗಳುವ ಜಾತಿಯವರನ್ನೂ ನಾವು ನೋಡಬಹುದು. ಇನ್ನು ಮೂರನೆಯ ಜಾತಿಯಾದ ಬಾಲ ಗುಂಡಾಡಿಸುವವರು – ಯಾರು ಅಧಿಕಾರದಲ್ಲಿರುತ್ತಾರೋ ಅವರನ್ನು 'ನೀನೇ ಇಂದ್ರ ಚಂದ್ರ ದೇವೇಂದ್ರ' ಅಂತ ವಂದಿಮಾಗಧಿಗಳ ಕೆಲಸ ಮಾಡುವುದು, ಅವರೆದುರು ಮೂರುಹೊತ್ತೂ ಮುವ್ವತ್ತೆರಡು ಹಲ್ಲುಗಳನ್ನೂ ಪ್ರದರ್ಶಿಸಿ ಹಲ್ಲು ಗಿಂಜುವುದು – ಈ ಜಾತಿಯವರು ಯಾರನ್ನೂ ಬೈಯಲು ಹೋಗುವುದಿಲ್ಲ, ಯಾರ ದ್ವೇಷವನ್ನೂ ಕಟ್ಟಿಕೊಳ್ಳುವುದಿಲ್ಲ. ಮುಖ್ಯ ಯಾರಾದರೇನು, ಅವರಿಂದ ತಮ್ಮ ಕೆಲಸ ಆದರೆ ತೀರಿತು.

ಆಫೀಸುಗಳಲ್ಲಿರುವ ಮ್ಯಾನೇಜರ್, ಮತ್ತೆ ಕೆಲವು ಮಾಲೀಕರು ಬೊಗಳುವ ಜಾತಿಗೆ ಸೇರಿದವರೆಂದು ಹೇಳಿದರೆ ತಪ್ಪಾಗದು. ಅವಕಾಶ ಸಿಕ್ಕಾಗಲೆಲ್ಲ ಬೊಗಳುವುದೊಂದೇ ಅವರ ಕೆಲಸ. ಬೊಗಳುವುದಕ್ಕಾಗಿಯೇ ಅವರು ಜನ್ಮ

ತಾಳಿದ್ದಾರೆಂದರೆ ತಪ್ಪಾಗದು. ಅತ್ತೆ, ಮನೆ ತಪ್ಪಿದ ಮಗಳು ಈ ಜಾತಿಗೆ ಸೇರುತ್ತಾರೆ.

ಕೆಲವು ಮನೆಗಳ ಮುಂದೆ 'ನಾಯಿಗಳಿವೆ ಎಚ್ಚರಿಕೆ' ಅಂತ ಬೋರ್ಡ್ ಗಳನ್ನು ಹಾಕಿರುತ್ತಾರೆ. ಇಂಥ ಒಂದು ಬೋರ್ಡನ್ನು ನಾನು ಸಹ ನಮ್ಮ ಮನೆಯ ಮುಂದೆ ಹಾಕಿದೆ. ಮೂರುಹೊತ್ತೂ ನಾಯಿಗಳಂತೆ ಕಚ್ಚಾಡುವ ನನ್ನ ಎರಡು ಮಕ್ಕಳನ್ನು ನೋಡಿ ಆ ರೀತಿ ಬೋರ್ಡು ಹಾಕಿದ್ದೆ. ಇದರಿಂದ ನನಗೇನೋ ತುಂಬಾ ಅನುಕೂಲವಾಯಿತು. ನನಗೆ ಸಾಲ ಕೊಟ್ಟವರು ನಮ್ಮ ಮನೇಗೆ ನೇರವಾಗಿ ಬಂದುಬಿಡುತ್ತಿರಲಿಲ್ಲ. ನಮ್ಮ ಮನೆಯಲ್ಲಿ 'ಇರಬಹುದಾದ' ನಾಯಿಗಳಿಗೆ ಹೆದರಿ ದೂರದಿಂದಲೇ "ನಾಡಿಗೇರ್" ಅಂತ ಕೂಗುತ್ತಿದ್ದರು. ಕೂಗಿದವರಾರು ಎಂಬುದನ್ನು ಕಿಟಕಿಯ ಸಂದಿಯಿಂದ ನೋಡಿ "ಅವರಿಲ್ಲ" ಅಂತ ಕೀರಲು ದನಿಯಲ್ಲಿ, ಬಾಗಿಲು ಹಿಂದೆ ನಿಂತು ನಾನೇ ಹೇಳಿಬಿಡುತ್ತಿದ್ದೆ.

ನನ್ನ ಸ್ನೇಹಿತ ರಾಮು ಸಹ ತನ್ನ ಮನೆಯ ಮುಂದೆ 'ನಾಯಿಗಳಿವೆ ಎಚ್ಚರಿಕೆ' ಎಂತ ಬೋರ್ಡ್ ಹಾಕಿದ್ದ. ಅವನಿಗೇ ತಿನ್ನಲು ಕೂಳಿಲ್ಲದಿರುವಾಗ ನಾಯಿಗಳನ್ನೇಕೆ ಸಾಕುತ್ತಿದ್ದಾನೆಂದು ಅವನ ಮೇಲೆ ರೇಗಿದೆ. ಅವನೇ ಹೇಳಿದ "ನಮ್ಮ ಮನೆಯಲ್ಲಿ ಹಲವು ಜಾತಿಯ ನಾಯಿಗಳಿವೆ. ತಮ್ಮ ಊರಿನಲ್ಲಿ ಇಂಟರ್‌ಮೀಡಿಯೆಟ್‌ನಲ್ಲಿ ಏಳು ಸಾರಿ ಗೋತಾ ಹೊಡೆದ ನನ್ನ ಭಾವಮೈದುನ, ಏರ್‌ಕ್ರಾಫ್ಟ್‌ನಲ್ಲಿ ಕೆಲಸ ಹುಡುಕುತ್ತಿರುವ ನನ್ನ ತಮ್ಮ, ಮೊನ್ನೆ ಸಂಕ್ರಾಂತಿಗೆ ಇಪ್ಪತ್ತೆಂಟು ವರ್ಷ ತುಂಬಿದ ಕನ್ಯೆಗೆ (?) ವರ ಹುಡುಕುತ್ತಿರುವ ನನ್ನ ಚಿಕ್ಕಮ್ಮ– ಇವರೆಲ್ಲಾ ಒಂದೊಂದು ಜಾತಿಯ ನಾಯಿಗಳು; ಇವಿರುವಾಗ ಮತ್ತೆ ಬೇರೆ ,ಯಾವ ಜಾತಿಯವಾದರೂ ಬಂದೀತೆಂದು ಬೋರ್ಡ್ ಹಾಕಿದ್ದೇನೆ!" ಅಂತ ವಿವರಣೆ ಕೊಟ್ಟ.

'ನಾಯಿ ಇದೆ ಎಚ್ಚರಿಕೆ' ಅಂತ ನನ್ನೊಬ್ಬ ಸ್ನೇಹಿತ – ಅವನ ಹೆಸರು ವೆಂಕಟು – ಬೋರ್ಡ್ ಹಾಕಿದ್ದ. ಅವನ ಮನೇಗೆ ಅಕಸ್ಮಾತ್ ಹೋದಾಗ ಆ ಬೋರ್ಡು ನೋಡಿ ಎದೆ ಝುಲ್ಲೆಂದಿತು. ನಾಯಿ ಎಲ್ಲಿದೆಯೋ, ಎಲ್ಲಿ ಕಾಲು ಕಚ್ಚುತ್ತದೆಯೋ, ಎಂಬ ದಿಗಿಲು ಬಾಧಿಸತೊಡಗಿತು. ಆದರೆ ವೆಂಕಟು ತಕ್ಷಣ ಒಳಗಿನಿಂದ ಬಂದು "ಹಲ್ಲೊ" ಅಂತ ಕೂಗಿದ. ಪ್ರತಿಯಾಗಿ 'ಹಲ್ಲೋ' ಹೇಳು ವುದಕ್ಕೆ ನನ್ನ ನಾಲಗೆ ಒಣಗಿಹೋಗಿದ್ದಿತು. ಸುಮ್ಮನೇ ಹಲ್ಲು ಕಿರಿದೆ. ಕೊಂಚ

ಸುಧಾರಿಸಿಕೊಂಡು "ನಿನ್ನ ಆ ಭಯಂಕರ ನಾಯಿ ಎಲ್ಲಿದೆ ?" ಅಂತ ಕೇಳಿದೆ. "ಬಾ, ತೋರಿಸ್ತೀನಿ" ಅಂತ ಹೇಳುತ್ತ ಒಳಕ್ಕೆ ಕರೆದುಕೊಂಡು ಹೋದ. ನಾಯಿ ಎಲ್ಲಿಯೂ ಕಾಣಿಸಲಿಲ್ಲ. ಆರಾಮ ಕುರ್ಚಿಯ ಕೆಳಗೆ ಒಂದು ಪುಟ್ಟ ನಾಯಿ – ಸುಮಾರು ಮೂರುವರೆ ಅಂಗುಲ ಎತ್ತರವಿರುವುದು – ಮಲಗಿತ್ತು. ಅವನು ಅದನ್ನು ಕೈಯಲ್ಲಿ ತೆಗೆದುಕೊಂಡು "ಇದೇ !" ಅಂತ ಹೇಳಿದ. ನನಗಾಶ್ಚರ್ಯವಾಯಿತು. "ಈ ನಾಯಿಗಿಂತ ಆ ಬೋರ್ಡು ಅಷ್ಟು ದೊಡ್ಡ ದಾಗಿದೆ. ಅದಕ್ಕೆ ಬೋರ್ಡು ಒಂದು ದಂಡ" ಅಂತ ಹೇಳಿದೆ. "ಕಿಟ್ಟೀ, ಈ ವಿಚಾರ ನಿನಗೆ ತಿಳಿಯೋಲ್ಲ. ಬಂದ ಜನರು ಎಚ್ಚರಿಕೆ ಇಲ್ಲದೆ ಈ ನಾಯಿಯ ಮೇಲೆ ಕಾಲಿಟ್ಟರೆ ಅದು ಸತ್ತುಹೋಗುತ್ತೆ. ಆದ್ದರಿಂದ ಎಚ್ಚರಿಕೆ ಇರಲಿ ಅಂತ ಒಂದು ಎಚ್ಚರಿಕೆ" ಅಂತ ಹೇಳಿದ.

ಒಬ್ಬ ಒಂದು ನಾಯಿ ತಂದಿದ್ದ. ಅದರ ಗುಣಗಾನ ತುಂಬಾ ಮಾಡಿದ. "ಇದಕ್ಕೆ ಅದು ಹೇಗೆ ಗೊತ್ತಾಗುತ್ತೋ ಸ್ವಾಮೀ, ಕಳ್ಳ ಅಂತ ಹೋಗಿ ತಟಕ್ಕನೆ ಕಚ್ಚಿಬಿಡುತ್ತೆ" ಎಂದು ಹೇಳಿದ. "ಹಾಗಾದರೆ ಇಂಥ ಒಳ್ಳೆಯ ನಾಯಿಯನ್ನೇಕೆ ಮಾರೋದಕ್ಕೆ ಬಂದಿದ್ದೀಯೆ ?" ಅಂತ ಕೇಳಿದೆ. "ಅಯ್ಯೋ, ಮೊನ್ನೆ ನನ್ನ ಕಚ್ಚಿಬಿಟ್ಟಿತು ಸ್ವಾಮೀ, ಅದಕ್ಕೇ !" ಅಂತ ಹೇಳಿದ.

ಇನ್ನು ಕೆಲವರು ನಾಯಿಗಳನ್ನು ಕೇವಲ ಅಂದಕ್ಕಾಗಿ ಸಾಕುತ್ತಾರೆ. ಈ ಜಾತಿಯವು ಬೊಗಳುವುದೂ ಇಲ್ಲ, ಕಚ್ಚುವುದೂ ಇಲ್ಲ. ಬಾಲ ಗುಂಡಾಡಿಸುತ್ತ ವೆಯೋ ಇಲ್ಲವೋ ಎನ್ನುವುದೂ ನಮಗರ್ಥವಾಗುವುದಿಲ್ಲ – ಇವುಗಳ ಬಾಲವನ್ನು ಪೂರ್ತಿಯಾಗಿ ಕತ್ತರಿಸಿಹಾಕಿರುತ್ತಾರಾದ್ದರಿಂದ ಇವಕ್ಕೆ ತೊಡೆನಾಯಿ (Lap dog) ಎಂದು ಹೆಸರು. ಇನ್ನು ಒಂದು ಜಾತಿಯ ನಾಯಿ ಇದೆ. ಅದಕ್ಕೆ ಮೈತುಂಬಾ ಕೂದಲು. ಆ ಕೂದಲು ರಾಶಿಯಲ್ಲಿ ನಾಯಿಯನ್ನು ಹುಡುಕುವುದು ಬಹು ಕಷ್ಟಸಾಧ್ಯವಾದ ಮಾತು.

ನಾಯಿಗಳನ್ನು ಸಾಕಬಹುದು, ಬೆಕ್ಕುಗಳನ್ನು ಸಾಕಲು ಸಾಧ್ಯವಿಲ್ಲ. ನಾಯಿ ಅನ್ನ ಹಾಕಿದವನು ತನ್ನ ಯಜಮಾನ ಅಂತ ಒಪ್ಪಿಕೊಳ್ಳುತ್ತದೆ. ಆದರೆ ಬೆಕ್ಕು ಎಂದೂ ಆರೀತಿ ಒಪ್ಪಿಕೊಳ್ಳುವುದಿಲ್ಲ. ಯಾರು ಯಾರು ಆಹಾರ ಹಾಕುತ್ತಾರೋ ಅವರೆಲ್ಲರಿಂದಲೂ ಅದನ್ನು ಸ್ವೀಕರಿಸಿ, ಆಹಾರ ಹಾಕದಿದ್ದವರ ಮನೆಯ ಇಲಿಗಳನ್ನು ಹಿಡಿಯಲು ಹೋಗುತ್ತದೆ. ಇಂಥ ದುರ್ಗುಣ ಬೆಕ್ಕಿನಲ್ಲಿ

ದ್ದರೂ ಮಾನವನು ಅದಕ್ಕೆ ಹೆಚ್ಚು ಮಾನ್ಯತೆ ಕೊಟ್ಟು ನಾಯಿಯನ್ನು ತೆಗಳುವುದು ಅನ್ಯಾಯ.

ದೊಡ್ಡ ದೊಡ್ಡ ಶ್ರೀಮಂತರುಗಳ ಮನೆಯಲ್ಲಿರುವ ನಾಯಿಗೆ ರಾಜಭೋಗ ದೊರೆಯುತ್ತೆ. ಅದು ಬಯಸಿದ ಆಹಾರ, ತಿಂಡಿತಿನಸುಗಳು, ಸುಗಂಧದ್ರವ್ಯ ಹಾಕಿದ ನೀರಿನ ಸ್ನಾನ, ಅದರ ಉಸ್ತುವಾರಿಗೆ ಒಬ್ಬ ಜವಾನ; ಈ ನಾಯಿಗೆ ಕಾಹಿಲೆಯಾದರೆ ಇದಕ್ಕೆ ಔಷಧಿ, ಇಂಜಕ್ಷನ್, ಮೋಸಂಬಿ, ಕಿತ್ತಲೆ, ದ್ರಾಕ್ಷಿ ಹಣ್ಣುಗಳು ಮುಂತಾದ ಉಪಚಾರಗಳು. ನಾನು ಅಂಥದೊಂದು ಶ್ರೀಮಂತರ ಮನೆ ನಾಯಿ ಆಗಬೇಕೆಂದು ಬಯಸಿದ್ದೇನೆ.

ಮಾನವನ ಸ್ವಭಾವವನ್ನು ನೋಡಿ ಅವನನ್ನು ತೆಗಳುವುದಕ್ಕಾಗಿ, ನಾಯಿಯನ್ನು ಸಾಧನವಾಗಿ ತೆಗೆದುಕೊಂಡು ಕೆಲವು ಗಾದೆಗಳನ್ನು ಜೋಡಿಸಿದ್ದಾರೆ. ಉದಾಹರಣೆಗೆ: ಹುಟ್ಟು ಗುಣವನ್ನು ತಿದ್ದುವುದು ಕಷ್ಟವೆನ್ನುವುದಕ್ಕೆ "ನಾಯಿಯ ಬಾಲವನ್ನು ಲಳಿಗೆಯಲ್ಲಿ ಹಾಕಿದಂತೆ" ಎಂದು ಹೇಳುತ್ತಾರೆ. ನಾಯಿಯ ಬಾಲಕ್ಕೇಕೆ ಲಳಿಗೆ ಹಾಕಬೇಕು? ಮಾಡಲು ಬೇರೆ ಇನ್ನೇನೂ ಉದ್ಯೋಗವೇ ಇಲ್ಲವೆ? "ನೆಕ್ಕುವ ನಾಯಿಗೆ ಲಿಂಗವೇನು, ಪಾಣಿಬಟ್ಟಲೇನು?" ತಣ್ಣೀರಿನಲ್ಲಿ ಅಭಿಷೇಕ ಹೊಂದಿ ನುಣ್ಣಗಿರುವ ಆ ಲಿಂಗವನ್ನಾಗಲೀ, ಪಾಣಿಬಟ್ಟಲನ್ನಾಗಲೀ ನೆಕ್ಕಬಾರದೆಂದು ನಾಯಿಗೆ ಚೆನ್ನಾಗಿ ಗೊತ್ತಿದೆ, ಆದರೆ ಮನುಷ್ಯನಿಗೆ ಗೊತ್ತಿಲ್ಲ. "ಪಲ್ಲಕ್ಕಿಯಲ್ಲಿ ನಾಯಿಯನ್ನು ಕೂಡಿಸಿದರೆ ಹೊಲಸು ಕಂಡು ಹಾರಿಬೀಳುತ್ತೆ" ಅಂತಲೂ ಒಂದು ಗಾದೆ ಇದೆ. ಪಲ್ಲಕ್ಕಿಯಲ್ಲಿ ಯಾರಾದರೂ ನಾಯಿಯನ್ನು ಕೂಡಿಸುತ್ತಾರೆಯೇ? ಹಾಗೆ ಕೂಡಿಸಿದವರನ್ನು ಹುಚ್ಚಾಸ್ಪತ್ರೆಗೆ ಸೇರಿಸುವುದು ಖಂಡಿತ. ನಿಜಕ್ಕೂ ಮನುಷ್ಯ ನಾಯಿಗಿಂತ ಹೀನವಾದವನು ಎಂಬುದು ಈ ಗಾದೆಗಳಿಂದಲೇ ಗೊತ್ತಾಗುತ್ತದೆ.

ಈಗಾಗಲೇ ನಾಯಿಗಳ ವಿಚಾರ ಈ ಲೇಖನದಿಂದಾಗಿ ನಿಮಗೆ ಸಾಕಷ್ಟು ತಿಳಿದಿದೆ. ಆದರೂ ನಾಯಿಯ ಬಗ್ಗೆ ಒಬ್ಬರು ಹೇಳಿದ ಮಾತನ್ನು ಹೇಳಿ ಈ ಲೇಖನ ಮುಗಿಸುತ್ತೇನೆ. "ನಾಯಿಯ ಕೃತಜ್ಞತೆಯಲ್ಲಿನ ನೂರರಲ್ಲಿ ಒಂದು ಪಾಲು ಮನುಷ್ಯನಲ್ಲಿದ್ದರೆ ಈ ಭೂಮಿ ಸ್ವರ್ಗವಾದೀತು."

# ನಾಮಕರಣ

"ಒಂದು ವಿಷಯ ಹೇಳುತ್ತೇನೆ. ನೀವು ಕೋಪಿಸಿಕೊಳ್ಳಬಾರದು."

"ಲಕ್ಷ್ಮೀ, ನಿನ್ನಮೇಲೆ ನಾನೆಂದು ಕೋಪಿಸಿಕೊಂಡಿದ್ದೇನೆ ಹೇಳು! ಹೋಗಲಿ ಬಿಡು, ನೀನು ಈಗ ಅಂಥಾದ್ದೇನು ಮಾಡಿದ್ದೀಯ?"

"ಥೂ, ಅಂಥಾದ್ದೇನೂ ಮಾಡಿಲ್ಲ. ಆದ್ರೆ ಅದು ಈಗಲೇ ಆಗಬಾರದಾಗಿತ್ತು."

"ಯಾವುದು ಆಗಬಾರದಾಗಿತ್ತು?"

"ಥೂ, ನಿಮ್ಮ ಗಂಡಸರ ಹಣೇಬರಹವೇ ಹೀಗೆ. ಒಂದೂ ಅರ್ಥವಾಗೋಲ್ಲ."

"ನನ್ನ ಒಬ್ಬನನ್ನು ಮಾತ್ರ ಬಯ್ಯಲು ನಿನಗೆ ಅಧಿಕಾರವಿದೆ. ಎಲ್ಲ ಗಂಡಸರನ್ನೂ ಯಾಕೆ ಬಯ್ತೀಯ? ನೀವು ಹೆಂಗಸರೆಲ್ಲಾ ಹೀಗೆಯೇ, ಒಂದೂ ನೇರವಾಗಿ ಹೇಳೋಲ್ಲ, ಏನೋ ಒಂದು ತರಹ ಒಗಟಿನಲ್ಲಿ ಮಾತನಾಡುತ್ತೀರಿ?"

"ಎಲ್ಲ ಗಂಡಸರನ್ನೂ ಬಯ್ಯಬಾರದೆಂದು ಹೇಳುವವರು ಎಲ್ಲ ಹೆಂಗಸರನ್ನೂ ಯಾಕೆ ಬಯ್ತೀರಿ?"

"ಗಂಡಸರೆಂದೂ ನಿಮ್ಮ ಹಾಗೆ ದಾರಿ ತಪ್ಪಿ ಮಾತನಾಡುವುದಿಲ್ಲ. ನೋಡು, ಗಂಡಸರಂಥ ಉತ್ತಮ ಭಾಷಣಕಾರರು ಹೆಂಗಸರಲ್ಲಿ ಯಾರಿದ್ದಾರೆ? ಉದಾಹರಣೆಗೆ...."

"ಸರಿ, ಆಗಲೇ ನಿಮ್ಮ ರೇಡಿಯೋ ತಿರುಗಿಸಿಬಿಟ್ಟಿರಲ್ಲ. ಜಂಬ ಕೊಚ್ಚಿಕೊಳ್ಳುವುದರಲ್ಲಿ ನಿಮ್ಮ ಜಾತಿಯವರೇ ಹೀಗೆ. ಹೌದು, ನಾವೆಲ್ಲ ಕೆಲಸಕ್ಕೆ ಬಾರದವರು. ಥೂ, ನಿಮ್ಮ ಜೊತೆ ಮಾತಾಡಿದರೇ ಹೀಗೆ, ಬರೀ ಬೈಸಿಕೊಳ್ಳುವದೊಂದೇ....ಊ್ಹೂ....ಊ್ಹೂ....ಊ್ಹೂ."

"ಸರಿ, ಅಳೋದೇನು ಬಂತು, ಏನೋ ಮಾತಿಗೆ ಮಾತು ಬಂತು, ಎರಡು ಮಾತನಾಡಿದೆ. ನೀನೂ ಆಡಿದೆ. ಅಲ್ಲಿಗೆ ಅದು ಕತ್ತರಿಸಿಹೋಯಿತು.

ಹೋಗಲಿ, ಅದೇನೋ ಆಗಬಾರದ್ದು ಆಗಿದೆ ಅಂತ ಹೇಳಿದೆಯಲ್ಲ. ಆದದ್ದಾದರೂ ಏನು ?"

"ನೀವು ಕೋಪಿಸಿಕೊಳ್ಳುವುದಿಲ್ಲ ಅಂದರೆ ಹೇಳುತ್ತೇನೆ."

"ಆಗಲಿ."

"ನಗಬಾರದು, ಚೇಷ್ಟೆಮಾಡಬಾರದು."

"ಆಗಲಿ."

"ಇಲ್ಲ ನಾನು ಹೇಳೋಲ್ಲ, ನನಗೆ ನಾಚಿಕೆಯಾಗುತ್ತದೆ."

"ಯಾರೆದುರೂ ಹೇಳಬಾರದು ?"

"ಇಲ್ಲ, ಹೇಳೊಲ್ಲ."

"ನೀವು ಮಗುವಿನ ತಂದೆಯಾಗಲಿದ್ದೀರಿ !"

"ನನ್ನ ಚಿನ್ನಾ ! ಮೊದಲೇ ಹೇಳಬಾರದಾಗಿತ್ತೇನು ? ಕೊಂಕಣ ಸುತ್ತಿ ಮೈಲಾರಕ್ಕೆ ಹೋದರು ಅನ್ನೋ ಹಾಗೆ, ಆಗಲಿಂದ ಏನೇನೊ ಮಾತು ಬೆಳಸಿ ಬಿಟ್ಟೆಯಲ್ಲ !"

"ಈಗ ಇದು ಆಗಬಾರದಾಗಿತ್ತು ಅಂದ್ರೆ."

"ಏಕೆ ?"

"ನನ್ನ ಜೊತೆ ಹುಡುಗೀರೆಲ್ಲ ಸ್ಕೂಲು ಕಾಲೇಜುಗಳಲ್ಲಿ ಓದುತ್ತಿದ್ದಾರೆ. ನಾನು ತಲೆಗೆ ಬಟ್ಟೆ ಕಟ್ಟಿಕೊಂಡು, ಕಣ್ಣಿಗೆ ಕಾಡಿಗೆ ಹಚ್ಚಿಕೊಂಡು, ಕಂಕುಳಲ್ಲಿ ಮಗು ಎತ್ತಿಕೊಂಡು, ಬಾಣಂತಿ ಲೇಹ್ಯ ತಿನ್ನುತ್ತಾ ಇರೋದನ್ನ ನೋಡಿದ್ರೆ ಅವರೆಲ್ಲಾ ನಗ್ತಾರೆ."

"ಋಷಿಪಂಚಮಿ ಉದ್ಯಾಪನೆ ಆಗೋವರ್ಗೆ ಸ್ಕೂಲಿಗೆ ಹೋಗ್ತಾಯಿದ್ರೆ ಮಕ್ಕಳುಮರಿ ಕಾಣೋದು ಯಾವಾಗ ?"

"ನನ್ನ ತಲೇಮೇಲೆ ಅಕ್ಕೀಕಾಳು ಬೀಳದೆ ಹೋದ್ರೆ ನಮ್ಮಜ್ಜಿ ಸಾಯೋದಿಲ್ಲ ಅಂತ ಹೇಳಿದ್ಕು, ಲಂಗ ಹಾಕುತ್ತಿದ್ದ ನನಗೆ ಸೀರೆ ಉಡ್ಸಿ ಧಾರೆ ಎರೆದ್ರು."

"ಆದದ್ದು ಆಗಿಹೋಯಿತು. ಈಗೇಕೆ ಅದರ ಬಗ್ಗೆ ಗೋಳಾಟ ?"

"ನಂಗೇನೋ ಹೆಣ್ಣುಮಗು ಆಗುತ್ತೆ ಅಂತ ಅನ್ನಿಸುತ್ತೆ."

"ನಂಗೇನೋ ಗಂಡುಮಗು ಆಗುತ್ತೆ ಅಂತ ಅನ್ನಿಸುತ್ತೆ."

"ಹೆಣ್ಣುಮಗು ಆದರೆ ಒಳ್ಳೇದು. ಹೆಣ್ಣಿಗೆ ಇರುವ ಅಂತಃಕರುಣ, ಪ್ರೀತಿ ಗಂಡಿಗಿರೋಲ್ಲ. ತಾಯಿಗೆ ಏನಾದರೂ ನೆರವಾಗುವವಳು ಅಂದರೆ ಮಗಳೇ."

"ಹೌದು, ಕೊಟ್ಟ ಮನೆಗೆ ಹೋಗೋ ಹುಡುಗಿ ಎಷ್ಟು ದಿನ ನೆರ ವಾದಾಳು ?"

"ಇದ್ದಷ್ಟು ದಿನ ನೆರವಾಗ್ತಾಳೆ. ಅತ್ತೆ ಮನೆಗೆ ಹೋದರೂ ತಾಯಿಯ ನೆನಪು ಬಂದಾಗಲೆಲ್ಲ ಕಣ್ಣೀರು ಹಾಕ್ತಾಳೆ."

"ಗಂಡುಮಗು ಆದರೆ ನಮ್ಮ ತಂದೆ ಹೆಸರಿಡ್ತೇನೆ. ನಮ್ಮ ತಂದೆ ಹೆಸರೇ ನಮ್ಮ ಕುಲದೇವರ ಹೆಸರು. ಮೂಡಲಗಿರಿಯಪ್ಪ ಅಂತ."

"ಹೆಣ್ಣು ಆದ್ರೆ ಯಾವಳಾದ್ರು ಸಿನಿಮಾ ತಾರೆಯ ಹೆಸರಿಡೋಣ ಅಂತ ನನಗೆ ಆಸೆ. ಸುರಯ್ಯ ಅನ್ನೋ ಹೆಸರು ಎಷ್ಟು ಚೆನ್ನಾಗಿದೆ!"

"ಅಯ್ಯೋ ಮಂಕೇ! ಸುರಯ್ಯ ಅನ್ನೋದು ಮುಸ್ಲಿಮರ ಹೆಸರು. ಅದೂ ಅಲ್ಲದೆ ಆಗುವ ಮಗು ಗಂಡಲ್ಲವೇ ?"

"ಶುಕ್ರವಾರ ಸಂಜೆ ನಾನು ಅಳಬಾರ್ದು ಅಂತ ಮನಸ್ಸು ಮಾಡಿದ್ರೂ ನೀವು ಅಳಿಸ್ತೀರ. ನನ್ನ ಮನಸ್ಸಿನಲ್ಲಿ ಏನು ಬರುತ್ತೋ ಅದು ನಿಜವಾಗುತ್ತೆ ಅನ್ನೋದು ನಂಗೆ ಗೊತ್ತು. ನಮ್ಮ ಅತ್ತೆ ಉಳಿಯೋಲ್ಲ ಅಂತ ನಾನು ಹೇಳಿದೆ, ಮೂರು ದಿನಕ್ಕೆ ಛಟ್ ಆದರು."

"ಅದೇನು ಮಹಾ, ಅರವತ್ತು ವರ್ಷದ ಮುದುಕಿ ಆಕೆ. ಕಾಲರಾ ಬೇರೆ ಆಗಿತ್ತು! ಅದು ಸಾಯುತ್ತೇಂತ ಹೇಳಲು ನೀನೇ ಬೇಕಿತ್ತೇನು ?"

"ಬರುವ ತಿಂಗಳೇ ನಾನು ತವರಮನೇಗೆ ಹೋಗುತ್ತೇನೆ."

"ಈಗಿನಿಂದಲೇ ಹೋಗಿ ಅಲ್ಲೇನು ಮಾಡ್ತೀಯ? ಐದಾರು ತಿಂಗಳು ಆದಮೇಲೆ ಹೋದರಾಯಿತು. ಅಲ್ಲಿಯವರೆಗೆ ನಾನೇ ಕೈಬಾಯಿ ಸುಟ್ಟುಕೊಳ್ಳ ಬೇಕಾಗುತ್ತೆ. ನಿಮ್ಮ ತಾಯಿಗೆ ಹದಿಮೂರು ಜನ ಮಕ್ಕಳು. ಅವರ ಚಾಕರಿ ಮಾಡೋದ್ರಲ್ಲೇ ನೀನು ಸಣ್ಣಗಾಗ್ತೀಯ."

"ನನ್ನ ತವರುಮನೆ ಅಂದರೆ ನೀವು ಯಾವಾಗಲೂ ಕೊಳಕು ಮಾತ ನಾಡುತ್ತೀರಿ. ನನ್ನ ತಾಯಿ ಅಂಥ ಹೆಂಗಸರೇ ಈ ಭೂಮಿ ಮೇಲೆ ಇಲ್ಲ. ನಿಮ್ಮ ತಾಯಿಯವರಿದ್ದರಲ್ಲ, ಹೋಗಲಿ ಬಿಡಿ, ನಾನೇಕೆ ಕೆಟ್ಟ ಮಾತಾಡಲಿ, ಕಣ್ಣೀರಿಲ್ಲದೆ ಒಂದು ದಿನವೂ ನಾನು ಅನ್ನ ತಿನ್ನುತ್ತಿರಲಿಲ್ಲ."

"ಹೌದು, ಸಾಯೋ ಮುದುಕಿಯೊಂದಿಗೆ ನೀನೇಕೆ ಹಣಾಹಣಿ ಜಗಳ ಕಾಯಬೇಕಿತ್ತು. ಹಿರಿಯವಳೆಂಬ ವಿಷಯವನ್ನೂ ಲೆಕ್ಕಿಸದೆ ಅವಳಿಗೇಕೆ ಎದಿರು ವಾದಿಸುತ್ತಿದ್ದಿ ?"

"ಹೌದು, ನಾನು ಬದುಕಿರೋದೇ ತಪ್ಪು. ನಿಮ್ಮ ತಾಯಿಯ ಹಾಗೆ ನಾನೂ ಕಣ್ಣುಮುಚ್ಚಿಕೊಂಡರೆ ಎಲ್ಲಾ ಸರಿಹೋಗುತ್ತೆ. ಆಗ ನೀವೂ ಸುಖವಾಗಿರಬಹುದು."

"ಸರಿ, ಯಾವ ಮಾತಿಗೆ ಯಾವ ಮಾತು. ನೀನು ಹೀಗೆಲ್ಲಾ ಮನಸ್ಸು ಕೆಡಿಸಿಕೊಳ್ಳಬಾರದು. ಮೈಗೆ ಒಳ್ಳೇದಲ್ಲ. ಹೊಟ್ಟೆಯಲ್ಲಿರುವ ಮಗು ನಲುಗಿ ಹೋಗುತ್ತೆ."

"ನನಗೆ ಮಾವಿನಕಾಯಿ ತಿನ್ನಬೇಕು ಅಂತ ಆಸೆ ಆಗಿದೇಂದ್ರೆ."

"ಸರಿ, ಆಗಲೇ ಬಯಕೆಗೆ ಪ್ರಾರಂಭವಾಯಿತೇನೋ. ಈಗ ಶ್ರಾವಣ ಮಾಸ, ಮಾವಿನಕಾಯಿ ಎಲ್ಲಿ ಸಿಗುತ್ತೆ?"

"ನೋಡಿ, ನನ್ನ ಬಯಕೆ ತೀರಿಸಬೇಕು ಅನ್ನೋ ಹಾಗಿದ್ರೆ ತೆಗೆದು ಕೊಂಡು ಬನ್ನಿ."

"ನೋಡೋಣ."

"ನನ್ನ ಸೀಮಂತಕ್ಕೆ ಎಂಥ ಸೀರೆ ತರುತ್ತೀರ? ಮೊನ್ನೆ ಕಮಲಮ್ಮ ನವರು ಉಟ್ಟಿದ್ದರಲ್ಲ, ಅಂಥಾದ್ದು ತಂದುಕೊಡಿ."

"ಆಗಲಿ."

* * * *

ಮಾರನೆ ದಿನ ಕಚೇರಿ ಬಿಟ್ಟಕೂಡಲೇ ನೇರವಾಗಿ ಮಾರ್ಕೆಟ್ಟಿಗೆ ಹೋದೆ. ಹಾಳಾದ ಸಾಬಿ ಒಂದು ಮಾವಿನಕಾಯಿಗೆ ನಾಲ್ಕಾಣೆ ತೆಗೆದುಕೊಂಡ. ಒಂದು ರೂಪಾಯಿ ಕೊಟ್ಟು ನಾಲ್ಕು ತೆಗೆದುಕೊಂಡೆ. ಮೇಲೊಂದು ಕೊಸರು ಕೊಡು ಅಂದರೂ ಕೊಡಲಿಲ್ಲ ಪುಣ್ಯಾತ್ಮ.

ನೇರವಾಗಿ ಮನೆಗೆ ಹೋದೆ. 'ಲಕ್ಷ್ಮಿ' ಅಂತ ಕೂಗಿದೆ; ಉತ್ತರವಿಲ್ಲ. ಕೈಲಿದ್ದ ಛತ್ರಿಯನ್ನು ಬಾಗಿಲ ಸಂದಿಯ ಮೂಲೆಯಲ್ಲಿ ಇಡಲು ಹೋದೆ. ಹಾಳಾದ್ದು ಕಾಲಿಗೆ ಏನೋ ತಾಕಿತು. ತಂಬಿಗೆ. ತಲೆ ಎತ್ತಿ ನೋಡಿದೆ. ಲಕ್ಷ್ಮಿ ಮೂಲೆಯಲ್ಲಿ ನಿಂತಿದ್ದಳು.

"ಬಟ್ಟೆಗಳನ್ನೆಲ್ಲಾ ನೆನೆಸಿ ನೀರು ಹಾಕಿಕೊಳ್ಳಿ. ಮುಟ್ಟಾದವರನ್ನು ಮುಟ್ಟಬಾರದು ಅನ್ನುವಷ್ಟು ಸಹ ನಿಮಗೆ ಗೊತ್ತಿಲ್ಲ!"

"......................!!!"

# ಅಜ್ಜಿ ಊರಿಗೆ ಬಂದ ದಿನ

ನಮ್ಮಜ್ಜಿಯ ಕಾಗದ ಅದೇ ಟಪಾಲಿಗೆ ಬಂದಿತ್ತು. ಯಾವುದೋ ಯಾತ್ರಾ ಸ್ಪೆಷಲ್ ರೈಲಿನಲ್ಲಿ ಕಾಶೀಯಾತ್ರೆಗೆ ಹೋಗಿದ್ದಳು. ಸೋಮವಾರ ಕಾಶಿ, ಮಂಗಳವಾರ ಪ್ರಯಾಗ, ಬುಧವಾರ ಹರಿದ್ವಾರ, ಹೀಗೆ ಈ ಯಾತ್ರಾ ಸ್ಪೆಷಲ್ ರೈಲು ಚುಟಿಕೆ ಚಪ್ಪರದಲ್ಲಿ ಬಹು ಸುಲಭವಾಗಿ ಯಾತ್ರೆಗಳನ್ನು ಮಾಡಿಸುತ್ತೆ. ಅಜ್ಜಿಯ ಕಾಗದದ ಸಾರಾಂಶ ಇಷ್ಟೇ. ಆ ಸಂಜೆ ಏಳು ಗಂಟೆ ರೈಲಿಗೆ ತಾನು ಬರುವುದಾಗಿಯೂ, ನಾನು ತಪ್ಪದೆ ರೈಲ್ವೆ ಸ್ಟೇಷನ್ನಿಗೆ ಬಂದು ಆಕೆಯನ್ನು ಮನೆಗೆ ಕರೆದುಕೊಂಡು ಹೋಗಬೇಕೆಂದೂ ತಿಳಿಸಿದ್ದಳು. ನಾನು ಮಹಾ ಬೇಜವಾಬ್ದಾರಿ ಮನುಷ್ಯನೆಂದೂ, ಆ ಒಂದು ದಿನವಾದರೂ ಜವಾಬ್ದಾರಿ ಮನುಷ್ಯನಾಗಿ ಮುಪ್ಪಿನ ಮುದುಕಿಯನ್ನು ಸ್ಟೇಷನ್ನಿನಿಂದ ಮನೆಗೆ ಕರೆದು ಕೊಂಡು ಬರಬೇಕೆಂದೂ ತಿಳಿಸಿದ್ದಳು.

ರೈಲು ರಾತ್ರಿ ಏಳು ಗಂಟೆಗೆ ಬರುವುದಿದ್ದರೂ ಸಂಜೆ ಐದು ಗಂಟೆಗೇ ಮನೆಯಿಂದ ಹೊರಟೆ. ಮುಂಜಾಗ್ರತೆ ಕ್ರಮವನ್ನು ಅನುಸರಿಸಬೇಕೆಂಬುದೇ ನನ್ನ ಉದ್ದಿಶ್ಯವಾಗಿತ್ತು. ಅಷ್ಟುಹೊತ್ತಿಗೆ ನನ್ನ ಹಿಂದೆಯೇ ಹಾರನ್ ಶಬ್ದ ಕೇಳಿಸಿತು. ಮೋಟಾರು ಮೈಮೇಲೆ ಎಲ್ಲಿ ಹಾದುಹೋಗುವುದೋ ಎಂಬ ದಿಗಿಲಿನಿಂದ ಚರಂಡಿಯ ಪಕ್ಕಕ್ಕೆ ಒಂದೇ ಏಟಿಗೆ ನೆಗೆದೆ. "ಪ್ರಾಣದಮೇಲೆ ಎಷ್ಟಯ್ಯ ಆಸೆ ನಿನಗೆ!" ನನ್ನ ಸ್ನೇಹಿತ ಶೀನಿ ಮೋಟಾರ್ ಎಂಜಿನ್ ಶಬ್ದವನ್ನು ತೂರಿ ಕೂಗಿದ. ಶೀನಿಯ ವಿಚಾರ ಇಲ್ಲಿ ಕೊಂಚ ವಿವರಣೆ ಕೊಡು ವುದು ಅಗತ್ಯ. ಅವನಿಗೆ ಯಾವ ಕೆಲಸವೂ ಇಲ್ಲ. ಆದರೂ ಅವನಿಗೆ ಒಂದು ಗಳಿಗೆ ಸಹ ಪುರುಸೊತ್ತಿಲ್ಲ. ಹೇಳಿಕೊಳ್ಳುವಂಥ ಯಾವ ವರಮಾನ ಇಲ್ಲದಿದ್ದರೂ ಒಳ್ಳೊಳ್ಳೆಯ ಬಟ್ಟೆಬರೆ ಹಾಕಿಕೊಳ್ಳುತ್ತಾನೆ. ಬಾಯಲ್ಲಿ ಸಿಗರೇಟು ಸದಾ ಇದ್ದೇ ಇರುತ್ತದೆ. ಯಾವಾಗ ನೋಡಿದರೂ ಒಂದು ಕಾರ್ ಡ್ರೈವ್ ಮಾಡಿ ಕೊಂಡು ಬರುತ್ತಿರುತ್ತಾನೆ.

"ನಾಲ್ಕು ಗಾಲಿ, ಒಂದು ಚಕ್ರ ಇದ್ದರೆ ಸಾಕು, ಅದನ್ನು ನಡೆಸುತ್ತೇನೆ" ಅಂತ ಶೀನಿ ಒಂದು ಸಾರಿ ಹೇಳಿದ್ದ.

"ಎಲ್ಲಿಗಯ್ಯ ಹೊರಟೆ ?" ಶೀನಿ ಪ್ರಶ್ನೆ ಬಿಗಿದ.

"ನಮಜ್ಜಿ ಸಂಜೆ ಏಳರ ರೈಲಿಗೆ ಬರುತ್ತಾರೆ. ಕರೆದುಕೊಂಡು ಬರಲು ಹೊರಟಿದ್ದೇನೆ."

"ಬಾ ಕೂತುಗೊ, ನಾನು ಕ್ಯಾಂಟಿಗೆ ಹೋಗಬೇಕಾಗಿದೆ. ಹಾಗೇ ನಿನ್ನನ್ನು ಸ್ಟೇಷನ್‌ನಲ್ಲಿ ಡ್ರಾಪ್ ಮಾಡಿ ಹೋಗುತ್ತೇನೆ."

"ಬೇಡಯ್ಯಾ, ಸಿಟಿ ಬಸ್ ಸರ್ವೀಸಿನಲ್ಲಿ ಹೋಗುತ್ತೇನೆ. ನಿನಗೇಕೆ ತೊಂದರೆ ?"

"ಕೂತುಗೊಳ್ಳೊ, ಸಾಕು, ತೊಂದರೆಯಂತೆ ತೊಂದರೆ."

ನಾನು ಕಾರಿನಲ್ಲಿ ಕುಳಿತುಕೊಳ್ಳಲು ಧಾವಿಸಿದೆ. ಅವನು ಹಟಾತ್ತನೆ ಎಂಜಿನ್ ಆಫ್ ಮಾಡಿದ. "ತಡೆ, ಒಂದು ಲೋಟಾ ಕಾಫಿ ಹುಯ್ದುಕೊಳ್ಳೋಣ" ಅಂದ. ಎದುರಿಗಿದ್ದ ನಳಪಾಕ ರೆಸ್ಟೋರಾಕ್ಕೆ ಹೋದೆವು. ಬಿಲ್ಲಿನ ಮೂರಾಣೆ ನಾನೇ ಕೊಟ್ಟೆ—ಹೇಗೂ ಬಸ್ ಚಾರ್ಜ್ ಮೂರಾಣೆ ಉಳಿಯಿತೆಂಬ ಸಮಾಧಾನಮಾಡಿಕೊಂಡು. ಕಾರ್ ಸ್ಟಾರ್ಟ್ ಮಾಡಿದ. ಲೋಕಾಭಿರಾಮ ವಾಗಿ ಮಾತನಾಡುತ್ತ ಸಾಗಿದೆವು. ಮಧ್ಯ ದಾರಿಯಲ್ಲಿ ಕಾರು ಕೆಮ್ಮುತ್ತ, ಖ್ಯಾಕರಿಸುತ್ತ ಫಟ ಫಟ ಶಬ್ದಮಾಡುತ್ತಾ ನಿಂತಿತು. "ಏನಯ್ಯ, ನಿನ್ನ ಕಾರು ಪುಕಾರಾಗಿದೆಯಲ್ಲ" ಅಂತ ಅಂದೆ. "ಏನಿಲ್ಲ, ಒಂದು ನಿಮಿಷದಲ್ಲಿ ಸರಿಮಾಡಿ ಬಿಡ್ತೇನೆ. ಕಾರ್ಬೊರೇಟರಿನಿಂದ ಸರಿಯಾಗಿ ಪೆಟ್ರೋಲ್ ಬರುತ್ತಿಲ್ಲ, ಅಷ್ಟೆ. ಇವೆಲ್ಲಾ ನನಗೆ ನೀರು ಕುಡಿದಂತೆ" ಅಂತ ಹೇಳುತ್ತಾ ಕಾರಿನಿಂದ ಟಣ್ಣನೆ ಹಾರಿ ಬಾನೆಟ್ ತೆಗೆದ. ಯಾವುದನ್ನೋ ತಿರುಗಿಸಿದ, ಏನನ್ನೋ ಒತ್ತಿದ, ಮತ್ತಾವುದನ್ನೊ ಊದಿದ. ಬಾನೆಟ್ ಮುಚ್ಚಿ ತನ್ನ ಸೀಟಿಗೆ ಬಂದು ಕುಳಿತು ಕಾರ್ ಸ್ಟಾರ್ಟ್ ಮಾಡಿದ. ಕಾರು ಮೊಂಡ ಹೆಂಡತಿಯಂತೆ ಇವನ ಮಾತು ಕೇಳಲಿಲ್ಲ. ಆಸ್ತಮಾ ರೋಗಿಯಂತೆ ಸುದೀರ್ಘವಾಗಿ ಕೆಮ್ಮುತ್ತಿತ್ತು. "ಈ ಗಾಡಿಯ ಮರ್ಮ ನನಗೆ ಚೆನ್ನಾಗಿ ಗೊತ್ತು, ಒಂದು ನಿಮಿಷ ತಡೆ" ಎಂದು ಹೇಳುತ್ತಾ ಸ್ಕ್ರೂಡ್ರೈವರ್, ಸ್ಪ್ಯಾನರ್, ಮುಂತಾದ ಆಯುಧಗಳೊಂದಿಗೆ ಹೊರಟ.

ಹತ್ತು ನಿಮಿಷದ ನಂತರ ಮತ್ತೆ ಸೀಟಿನಮೇಲೆ ಬಂದು ಕಾರು ಸ್ಟಾರ್ಟ್ ಮಾಡಿದ. ಮತ್ತೆ ಮೊದಲಿನ ಆಸ್ತಮಾ ಕೆಮ್ಮು ಶುರು ಆಯಿತು.

"ಏನಾದರೂ ಮಾಡಿಕೊಳ್ಳಪ್ಪ ನಾನು ಹೋಗುತ್ತೇನೆ. ನಮ್ಮಜ್ಜೀ ಸಮಾಚಾರ ನಿಂಗೊತ್ತಿಲ್ಲ" ಎಂದು ಹೇಳುತ್ತ ಕಾರಿನಿಂದ ಇಳಿಯಲು ಉದ್ಯುಕ್ತನಾದೆ."

"ಹಳ್ಳಿಯವನೇನೋ ನೀನು! ಇನ್ನೂ ಆರು ಗಂಟೆ, ರೈಲು ಬರುವುದು ಏಳು ಗಂಟೆಗೆ. ಕಾರ್ ಸ್ಟಾರ್ಟ್ ಆದರೆ ಒಂದು ನಿಮಿಷದಲ್ಲಿ ಸ್ಟೇಷನ್‌ನಲ್ಲಿ ಇರ್ತೀಯ. ನೋಡು, ಕೆಳಗಿಳಿದು ಎದುರಿಗೆ ಕಾಣುವ 'ಅಪ್'ವರೆಗೂ ಕೊಂಚ ತಳ್ಳು. ಡೌನ್‌ನಲ್ಲಿ ಕಾರ್ ಸ್ಟಾರ್ಟ್ ಆಗುತ್ತೆ. ಪೆಟ್ರೋಲ್ ಸರಿಯಾಗಿ ಬರುತ್ತಿಲ್ಲ, ಅಷ್ಟೆ."

ಕೆಳಗಿಳಿದು ಕಾರು ದಬ್ಬಿದೆ. ನನ್ನ ಒಬ್ಬನ ತಳ್ಳುವಿಕೆಗೆ ಅದು ಜಪ್ಪೆನ್ನಲಿಲ್ಲ. ದೂರದ ಮರದಡಿಯಲ್ಲಿ ಕೆಲವು ಹುಡುಗರು ಗೋಲಿ ಆಡುತ್ತಿದ್ದರು. ಅವರೆಲ್ಲರೂ ಕಾರು ದಬ್ಬಬೇಕೆಂದೂ, ಅವರಿಗೆ ನಾಲ್ಕಾಣೆ ಬಕ್ಷೀಸು ಕೊಡುವುದಾಗಿಯೂ ಹೇಳಿ ಅವರೆಲ್ಲರನ್ನೂ ಕರೆದುಕೊಂಡು ಬಂದೆ.

ಸರಿ, ಎಲ್ಲರೂ ಸೇರಿ ತಳ್ಳಿದೆವು. ಅಪ್ ಹತ್ತಿಸುವ ವೇಳೆಗೆ ಸುಸ್ತಾಯಿತು. ಆ ಹುಡುಗರೆಲ್ಲರೂ ೮-೧೦ ವಯಸ್ಸಿನವರು. • ನಾನೊಬ್ಬನೇ ದೊಡ್ಡವನು. ಬೆವರು ಕೋಡಿಯಂತೆ ಹರಿಯಲಾರಂಭಿಸಿತು. ಅಪ್ ಹತ್ತಿಸಿ, ಡೌನಿನಲ್ಲಿ ಕಾರಿನ ಹಿಂದೆ ಎಲ್ಲರೂ ಓಡಲಾರಂಭಿಸಿದೆವು. ಶೀನಿ ನಾಲ್ಕೈದು ಸಾರಿ ಕಾರ್ ಸ್ಟಾರ್ಟ್ ಮಾಡಿದ. ಕಾರ್ ಎಲ್ಲವನ್ನೂ ಮಾಡಿತು. ಸ್ಟಾರ್ಟ್ ಮಾತ್ರ ಆಗಲಿಲ್ಲ. ಶೀನಿ ಹೇಳಿದ "ಈಗ ಎಲ್ಲಾ ಸರಿಹೋಯಿತು. ಎದುರಿಗೆ ಕಾಣುವ ಆ ದೊಡ್ಡ ಅಪ್ ಹತ್ತಿಸಿಬಿಡಿ. ನೀವು ಬೇಡವೆಂದರೂ ಕಾರ್ ಸ್ಟಾರ್ಟ್ ಆಗುತ್ತೆ."

ಹುಡುಗರೆಲ್ಲರಿಗೂ ಹುರಿದುಂಬಿಸಿದೆ. ನಾಲ್ಕಾಣೆಯಿಂದ ಬಕ್ಷೀಸ್ ದರ ಎಂಟಾಣೆಗೆ ಏರಿತು. ಅಪ್ ಬಹಳ ಕಡಿದಾಗಿದ್ದರಿಂದ ನಾವು ಎಷ್ಟು ತಳ್ಳಿದರೂ ಕಾರು ಬಹು ಮಂದವಾಗಿ ಸಾಗುತ್ತಿತ್ತು. ಕಾರನ್ನು ತಳ್ಳಿ ತಳ್ಳಿ ಸೆಕೆ ಹತ್ತಿತು. ಶಕ್ತಿ ಮೀರಿ ತಳ್ಳಲಾರಂಭಿಸಿದೆವು. ಹಾಗೂ ಹೀಗೂ ಅಪ್ ತುದಿಗೆ ಕಾರ್

ಬಂದಿತು. "ಬಾರೋ" ಶೀನಿ ಕೂಗಿದ. ಸರ್ರನೆ ಓಡಿಹೋಗಿ ಒಳಗೆ ಕುಳಿತೆ. ಡೌನಿನಲ್ಲಿ ಕಾರು ವೇಗವಾಗಿ ಹೋಯಿತು. ಶೀನಿ ಕಾರ್ ಸ್ಟಾರ್ಟ್ ಮಾಡಿದ. ಕಾರ್ ಸ್ಟಾರ್ಟ್ ಆಯಿತು.

ರೈಲ್ವೆ ಸ್ಟೇಷನ್ನಿನಲ್ಲಿ ನನ್ನನ್ನು ಇಳಿಸಿ ಶೀನಿ ಹೊರಟುಹೋದ.

"ರೈಲು ಬರುವುದು ಎಷ್ಟು ಹೊತ್ತಾಗುತ್ತೆ ?" ಅಂತ ಯಾರನ್ನೋ ವಿಚಾರಿಸಿದೆ. "ಸರಿ, ಬಂದು ಅರ್ಧಗಂಟೆ ಆಯ್ತು" ಅಂತ ಒಬ್ಬ ಕೆಟ್ಟ ಸುದ್ದಿ ತಿಳಿಸಿದ. ಅಜ್ಜಿ ಈ ವೇಳೆಗೆ ಮನೆ ಮುಟ್ಟಿರಬಹುದು, ಎಂಬುದು ಅರಿವಾದಮೇಲೆ ಮೈ ಮತ್ತೆ ಬೆವರತೊಡಗಿತು.

ಸಿಗರೇಟ್ ಸೇದೋಣವೆಂದು ಪ್ಯಾಕಿಗೆ ಕೈಹಾಕಿದೆ.

ಹಾಳಾದ್ದು ಕಾರು ತಳ್ಳುವಾಗ ಒಬ್ಬ ಹುಡುಗನ ಕೈಲಿ ಕೋಟು ಕೊಟ್ಟಿದ್ದೆ !

# ಇದೇನು ಮಹಾ!

ಅವೊತ್ತು ಆಫೀಸಿನಲ್ಲಿ ಯಾವುದೋ ಸಣ್ಣ ತಪ್ಪಿಗೆ ಬಹಳ ಬೈಸಿಕೊಂಡು ಆಫೀಸರನ್ನು ಮನಸ್ಸಿನಲ್ಲಿಯೇ ಬೈದುಕೊಳ್ಳುತ್ತಾ 'ಉಶ್ಶಪ್ಪಾ' ಎನ್ನುತ್ತಾ ಮನೆಗೆ ಬಂದೆ. ನಡುಮನೆಯಲ್ಲಿ ಕಾಲಿಡುವುದರೊಳಗೆ ಕಿವಿ ಒಡೆದುಹೋಗುವ ಶಬ್ದ ಅಡಿಗೆ ಮನೆಯಿಂದ ಕೇಳಬಂದಿತು. ಹುಡುಗರೆಲ್ಲರೂ ಆರೋಗ್ಯವಾಗಿದ್ದರು, ಹೆಂಡತಿ ಕಲ್ಲುಗುಂಡಾಗಿದ್ದಳು, ಆದರೂ ಮನೆಯಲ್ಲಿ ಏಕೆ ಹೀಗೆ ಬಡಿದುಕೊಳ್ಳುತ್ತಿದ್ದಾರೆಂದು ಆಶ್ಚರ್ಯವಾಯಿತು. ನೇರವಾಗಿ ಅಡಿಗೆಯ ಮನೆಗೆ ಹೋದೆ. ನನ್ನ ಹಿರಿಯ ಮಗಳು ಪದ್ದಿ ಒಲೆಯಮುಂದೆ ಕೂತಿದ್ದಳು. ಅವಳಿಗೆ ಏಳು ವರ್ಷ. ಕಮಲಿ ಮತ್ತು ಸುಬ್ಬು ತಟ್ಟೆಗಳ ಮುಂದೆ ಕುಳಿತಿದ್ದರು. ಕಮಲಿಗೆ ಐದು ವರ್ಷ, ಸುಬ್ಬೂಗೆ ಮೂರು ವರ್ಷ. "ಏನೆ ಇದು ಪದ್ದಿ!" ಅಂದೆ. "ಅಮ್ಮಂಗೆ ಮೈಯಲ್ಲಿ ಚೆನ್ನಾಗಿಲ್ಲ. ಹುಡುಗರಿಗೆ ಊಟಕ್ಕೆ ಹಾಕ್ತಾ ಇದ್ದೇನೆ" ಅಂತ ಹೇಳಿದಳು. ನನಗೆ ಎದೆ ಧಸ್ ಎಂದಿತು. 'ಅಲ್ಲ, ಬೆಳಿಗ್ಗೆ ಒಳ್ಳೆ ಕೋಣ ಇದ್ದಹಾಗೆ ಇದ್ದಳು, ಈಗೇನು ಬಂತು!' ಅಂತ ಆಶ್ಚರ್ಯಪಟ್ಟೆ. ಕೋಣೆಗೆ ಹೋದೆ. ಬೆಟ್ಟನ್ನ ಬೇಸಿಗೆ ಆಗಿದ್ದರೂ ಬಿಸ್ಕಿ ರಗ್ಗು ಹೊದೆದು ಮಲಗಿದ್ದಳು. ದೇವರಮುಂದಿನ ನಂದಾದೀಪವಂಥ ಸಣ್ಣದೊಂದು ದೀಪ ಕೋಣೆಯಲ್ಲಿ ಉರಿಯುತ್ತಿತ್ತು. "ಏನೆ ಇದು?" ಎಂತ ಕೇಳಿದೆ. "ಬೆಳಿಗ್ಗೆ ತಲೆ ಒಂದೇಸಮನೆ ಬುಗುರಿಹಾಗೆ ಗಿರ್ರನೆ ಸುತ್ತುತ್ತಿತ್ತು. ಡಾಕ್ಟ್ರ ಹತ್ತಿರ ಹೋಗಿದ್ದೆ. ಅನೀಮಿಯಾ ಅಂದ್ರು, ರೆಸ್ಟು ತಗೊಳ್ದೇ ಹೋದ್ರೆ ಸತ್ತುಹೋಗ್ತೀಯಾ ಅಂದ್ರು."

ಈ ಅನೀಮಿಯಾ ಇದೆಯೆಲ್ಲಾ ಬಹು ವಿಚಿತ್ರ ಕಾಹಿಲೆ. ಇನ್ನೂರು ಪೌಂಡು ತೂಗುವ ನನ್ನ ಹೆಂಡತಿಗೆ ಅನೀಮಿಯಾ ಅಂಬರೆ ಏನು ಹೇಳಬೇಕು. ಇದಕ್ಕೇನು ನಗಬೇಕೋ ಅಳಬೇಕೋ ನನಗೆ ತಿಳಿಯದು. ಎಂತೆಂಥ ನರಪೇತಲ ನಾರಾಯಣಗಳಿರುತ್ತಾರೆ, ಕಡ್ಡಿ ಖಂಡೇರಾಯರುಗಳಿರುತ್ತಾರೆ – ಅವರಿಗೆಲ್ಲ ಅನೀಮಿಯಾ ಇಲ್ಲವಂತೆ. ಕುಂಬಳಕಾಯಿ ಹಾಗೆ ಗುಂಡು ಗುಂಡಗೆ ಇರುತ್ತಾರೆ,

ಅವರಿಗೆ ಅನೀಮಿಯಾ ಅಂತೆ. ಏನೋ ಹಾಳಾದ್ದು ಒಂದೂ ಅರ್ಥವಾಗುವುದಿಲ್ಲ. "ಸರಿ, ಅದಕ್ಕೇನಂತೆ. ಇಂಜಕ್ಷನ್, ಔಷಧಿ ತೆಗೆದುಕೋ, ರೆಸ್ಟು ತೆಗೆದುಕೋ. ನಿನಗ್ಯಾರು ಬೇಡವೆಂದಿದ್ದಾರೆ?" ನಾನು ನಿಧಾನವಾಗಿ ಹೇಳಿದೆ.

"ಔಷಧಿ ಇಂಜಕ್ಷನ್ ತೆಗೆದುಕೊಳ್ಳಬಹುದು. ರೆಸ್ಟು ಅಂಗಡೀಲಿ ಸಿಕ್ಕೋ ದಿಲ್ಲವಲ್ಲ?" ಸುಂದರಿ ಹೇಳಿದಳು. ಸುಂದರಿ ಎಂಬುದು ನನ್ನ ಹೆಂಡತಿಯ ಹೆಸರೆಂಬುದು ನಿಮಗೂ ಅರ್ಥವಾಗಿರಬಹುದು. ಹೆಸರಿಗೂ ವ್ಯಕ್ತಿಯ ರೂಪಕ್ಕೂ ಏನೂ ಸಂಬಂಧವಿಲ್ಲ ಎಂಬುದು ಇವಳನ್ನು ನೋಡಿದರೆ ಗೊತ್ತಾಗುತ್ತೆ.

"ಅದಕ್ಯಾಕೆ ಇಷ್ಟು ಯೋಚನೆ? ತವರುಮನೆಗೆ ಹೋಗಿ ತಿಂಗಳೊಪ್ಪತ್ತು ಇದ್ದು ಬಾ, ಔಷಧಿಗೆ ಇಂಜಕ್ಷನ್ನಿಗೆ ದುಡ್ಡು ಕೊಡುತ್ತೇನೆ. ನೀನು ಅಲ್ಲಿಗೆ ಹೋಗಿ ಬಹಳ ದಿನಗಳಾಯ್ತು ಅಂತ ಮಾವನವರು ಎರಡು ಕಾಗದ ಬರೆದಿದ್ದರು."

"ಅದೇನೋ ಸರಿ, ಈ ಹುಡುಗರನ್ನ ಕಟ್ಟಿಕೊಂಡು ಹೋದರೆ ನನಗೆ ರೆಸ್ಟ್ ಹೇಗೆ ಸಿಗಬೇಕು?"

"ಹೋಗೇ, ಇದೇನು ಮಹಾ ಸಮಸ್ಯೆ! ಹುಡುಗರನ್ನ ಬಿಟ್ಟುಹೋಗು, ನಾನೆಲ್ಲಾ ನೋಡಿಕೊಳ್ತೀನೆ. ಹ್ಯಾಗೂ ನನಗೆ ಫರ್ಲೋ ರಜ ಕೊಳೆಯುತ್ತ ಬಿದ್ದಿದೆ. ಒಂದು ತಿಂಗಳು ತೆಗೆದುಕೊಳ್ಳುತ್ತೇನೆ. ಹುಡುಗರದೇನು ಮಹಾ, ಅನ್ನ ಹಾಕಿ ತಿಂಡಿ ಕೊಟ್ಟರೆ ರಾಮು ಅಂತ ಆಡಿಕೊಂಡಿರುತ್ತವೆ. ನೀವು ಹೆಂಗಸರ ಹಣೆಬರಹವೆಲ್ಲಾ ಇಷ್ಟೇ. ಮನೆಕೆಲಸ, ಅಡಿಗೆ ಅಂತ ಮೂರುಹೊತ್ತೂ ಬಡಿದು ಕೊಳ್ಳುತ್ತಿರುವುದು. ಅದೆಲ್ಲಾ ಪುರಾಣ ಬೇಡ. ನಿನ್ನಪಾಡಿಗೆ ನೀನು ಹುಡುಗ ರನ್ನು ಬಿಟ್ಟು ಹೊರಡು. ನಾನೆಲ್ಲಾ ನೋಡಿಕೊಳ್ಳುತ್ತೇನೆ" ಎಂತ ಹೇಳಿದೆ.

"ಹಾಗೆ ಆಗಲಿ" ಅಂತ ಸುದೀರ್ಘವಾದ ನಿಟ್ಟುಸಿರುಬಿಟ್ಟಳು.

ಬೆಳಿಗ್ಗೆ ಸುಂದರಿಯನ್ನು ಪ್ಯಾಕ್ ಮಾಡಿದ್ದಾಯಿತು. ಹಿಂದಿನ ರಾತ್ರಿ ಯಿಂದ ಒಂದೇಸಮ ಮುಂಗಾರಿನ ಕಪ್ಪೆಯ ಹಾಗೆ ಒಟಗುಟ್ಟುತ್ತಿದ್ದಳು.

"ಉಪ್ಪಿನಕಾಯಿ ಕೈ ಆಡ್ತಾ ಇರಬೇಕು, ಇಲ್ಲದಿದ್ದರೆ ಹುಳು ಬೀಳುತ್ತೆ. ಸುಬ್ಬೂಗೆ ರಾತ್ರಿ ಮಲಗಿಸುವಾಗ ಉಚ್ಚೆ ಹುಯ್ಯಿಸಿ ಮಲಗಿಸಿ. ಒಕ್ಕಲಗಿತ್ತಿ ಕೆಂಪಿ ಕೈ ಶುದ್ಧವಿಲ್ಲ, ಕೊಂಚ ನೋಡುತ್ತಿರಿ. ಪಕ್ಕದ ಮನೆ ರತ್ನಮ್ಮನವರಿಗೆ ತಲೆಹೊಡೆದು ಒಂದು ಪಾವು ತೊಗರಿಬೇಳೆ ಕೊಡಬೇಕು. ಅಂದಹಾಗೆ ವೆಂಕಮ್ಮ ಅವರ ಮನೆ ಸಾಟಸಿಂದ ಒಳ್ಳೆಣ್ಣೆ ಕಡ ಒಯ್ದಿದ್ದಾರೆ, ಪದ್ದೀನ ಕಳಿಸಿ ಅದನ್ನ

ತರಿಸಿಬಿಡಿ. ಹಪ್ಪಳ ಸಂಡಿಗೆ ಜೋಕೆ, ನಾನು ವಾಪಸು ಬರೋದರೊಳಗೆ ಎಲ್ಲಾ ತೀರಿಸಿಬಿಡಬೇಡಿ...." ಹಾಕಾದ್ದು ಇನ್ನೂ ಏನು ಏನು ಹೇಳುತ್ತಿದ್ದಳೋ ಅಷ್ಟುಹೊತ್ತಿಗೆ ಪುಣ್ಯಕ್ಕೆ ಬಸ್ಸು ಹೊರಟಿತು.

ಯಾವ ಕೆಲಸ ಮಾಡಿದರೂ ಅದಕ್ಕೊಂದು ಕ್ರಮ ಇರಬೇಕು, ಶಿಸ್ತು ಇರಬೇಕು. ಈ ಹೆಂಗಸರಿಗೆ ಇವೆರಡೂ ಗೊತ್ತಿಲ್ಲ. ಆಯಾಸವಾಗುವವರೆಗೆ ಮಾತನಾಡುತ್ತಾರೆ ಅಷ್ಟೆ. ಬಸ್‌ಸ್ಟ್ಯಾಂಡಿನಿಂದ ಮನೆಗೆ ಬಂದವನೇ ಒಂದು ಕಾರ್ಯಕ್ರಮ ಪಟ್ಟಿ ತಯಾರಿಸಿದೆ. ಅದರಂತೆ ದಿನವೂ ಕೆಲಸ ಮಾಡಿದರೆ ಅದ್ಯಾಕೆ ಹೆಚ್ಚುಕಡಿಮೆ ಆಗುತ್ತೆ. ನಾನು ತಯಾರಿಸಿದ ಕಾರ್ಯಕ್ರಮ ಪಟ್ಟಿ ಹೀಗಿತ್ತು :

ಬೆಳಿಗ್ಗೆ 6 ಗಂಟೆಗೆ ಏಳುವುದು, ಕಾಫಿ. 7 ರಿಂದ 8 ಗಂಟೆವರೆಗೆ ಹುಡುಗರನ್ನು ಶಾಲೆಗೆ ಕಳಿಸುವುದು. 8 ರಿಂದ 9ರವರೆಗೆ ಮಾರ್ಕೆಟ್. 9 ರಿಂದ ಅಡಿಗೆ ಕೆಲಸ ಪ್ರಾರಂಭ. 10-30ಕ್ಕೆ ಊಟ. 11 ರಿಂದ 12ರವರೆಗೆ ಅಡಿಗೆ ಮನೆ ಶುದ್ಧಮಾಡುವುದು. 12 ರಿಂದ 1-30 ರವರೆಗೆ ನಿದ್ರೆ. 1-30 ರಿಂದ 2ರವರೆಗೆ ಹುಡುಗರಿಗೆ ಮಧ್ಯಾಹ್ನದ ಊಟ ಹಾಕುವುದು. 2 ರಿಂದ 4ರವರೆಗೆ ವಿರಾಮ. 4 ರಿಂದ 5ರವರೆಗೆ,ಮನೆಗೆಲಸ. 5 ರಿಂದ 7 ರವರೆಗೆ ವಾಕಿಂಗ್. 7 ರಿಂದ 8ರವರೆಗೆ ಅಡಿಗೆ. 8 ರಿಂದ 9ರವರೆಗೆ ಅಡಿಗೆಮನೆ ಶುದ್ಧಮಾಡುವುದು. 9 ರಿಂದ 10ರವರೆಗೆ ಓದುವುದು. 10 ಗಂಟೆಗೆ ಮಲಗಿಕೊಳ್ಳುವುದು.

ನಿಜಕ್ಕೂ ಈ ಕಾರ್ಯಕ್ರಮ ಪಟ್ಟಿ ನೋಡಿ ನನಗೇ ಆಶ್ಚರ್ಯವಾಯಿತು. ಎಷ್ಟು ಅಚ್ಚುಕಟ್ಟಾಗಿದೆ! ಆ ಮಧ್ಯಾಹ್ನ ತುಂಬ ಅಡಿಗೆ ಉಳಿದಿದ್ದುದರಿಂದ ರಾತ್ರಿ ಅಡಿಗೆ ಮಾಡುವ ಗೋಜಿಗೆ ಹೋಗಲಿಲ್ಲ. ಸುಂದರಿ ಹುಡುಗರೆಲ್ಲರಿಗೂ ತಲಾ 4 ಆಣೆ ಕೊಟ್ಟಿದ್ದಳು. ಅದನ್ನು ಖರ್ಚುಮಾಡುವ ಅವಾಂತರದಲ್ಲಿ ಅವರೆಲ್ಲ ತಲ್ಲೀನರಾಗಿದ್ದರು.

*　　*　　*　　*

ಮನೆಗೆಲಸ ಇಷ್ಟು ಸುಲಭವಾಗಿದ್ದರೂ ಸುಂದರಿ ಮಾತ್ರ ದಿನವೂ ನಾನು ಆಫೀಸಿನಿಂದ ಬಂದಮೇಲೆ ತಾನು ಕಡಿದು ಕಟ್ಟಿಹಾಕಿದ್ದನ್ನೆಲ್ಲಾ ಚಾಚೂ ತಪ್ಪದೆ ಹೇಳುತ್ತಿದ್ದಳು. ಅಲ್ಲ, ಏನು ಮಹಾ ಇವೆಲ್ಲಾ! ಒಂದಿಷ್ಟು ಅಡಿಗೆ ಕಾಫಿ ಮಾಡುವುದು, ಪಾತ್ರೆ ತೊಳೆಯುವುದು, ಮನೆಕಸ ಹೊಡೆಯುವುದು,

ಮಕ್ಕಳನ್ನಿಷ್ಟು ನೋಡಿಕೊಳ್ಳುವುದು. ನಮ್ಮಹಾಗೆ ಸಂಪಾದಿಸಬೇಕಾಗಿದೆಯೆ? ಅಥವಾ ಆಲೋಚಿಸಬೇಕಾಗಿದೆಯೆ? ಏನೂ ಇಲ್ಲ, ಆದರೂ ಮನೆಗೆಲಸದ ಮೇಲೆ ಇವರ ಉಪನ್ಯಾಸ ಕೇಳಬೇಕು. ಮಂತ್ರಿಗಳು ನಾಚಿಕೊಳ್ಳುವಂತೆ ಮಾತ ನಾಡುತ್ತಾರೆ!

ಇನ್ನೊಂದು ವಿಷಯ ಏನೆಂದರೆ, ಇವರಿಗೆ ಮಾಡಲು ಸಾಕಷ್ಟು ಕೆಲಸವಿಲ್ಲ. ಸ್ವಲ್ಪದ್ದನ್ನೇ ದೊಡ್ಡದಾಗಿ ಮಾಡಿ ಹೇಳುತ್ತಾರೆ, ಅಷ್ಟೆ. ಹೋಗಲಿ, ನಾನು ಆಫೀಸಿನಲ್ಲಿ ಮಾಡಿದ್ದನ್ನೆಲ್ಲಾ ಅವಳೆದುರು ದಿನವೂ ಅರಚಿದರೆ ಹೇಗಿರುತ್ತೆ? ನೀವೇ ಯೋಚಿಸಿ. ಅವಳ ಇನ್ನೊಂದು ತಪ್ಪು ಕಲ್ಪನೆ ಎಂದರೆ, ನಾನು ಆಫೀಸಿನಲ್ಲಿ ಮಜಾ ಉಡಾಯಿಸುತ್ತಿರುತ್ತೇನೆ, ಮೂರುಹೊತ್ತೂ ಸ್ನೇಹಿತ ರೊಂದಿಗೆ ಸರಸ ಸಂಭಾಷಣೆ, ಕ್ಲಬ್‌ನಲ್ಲಿ ಇಸ್ಪೀಟು ಬಡಿಯುವುದು, ಆಗಾಗ್ಗೆ ಸಿನಿಮಾಕ್ಕೆ ಹೋಗುವುದು ಅಂತ ತಿಳಿದಿದ್ದಾಳೆ. ನಾವು ದಿನವೂ ಎಂತೆಂಥ ಕೊರಿಯಾ ಕಾಶ್ಮೀರಗಳನ್ನು ಎದುರಿಸಬೇಕೆಂಬುದು ಅವಳಿಗೇನು ಗೊತ್ತು?

ಅವಳು ತನ್ನ ಮನೆಗೆಲಸ ವಿಚಾರ ಹೇಳುತ್ತಿದ್ದಾಗಲೆಲ್ಲ "ಇದೆಲ್ಲಾ ಏನು ಮಹಾ, ಯಾರಾದರೂ ಮನೆಗೆಲಸ ನೋಡಿಕೊಳ್ಳಬಹುದು, ನೀನೇನು ಮಹಾ ಕಡಿದು ಕಟ್ಟಿಹಾಕಿರೋದು?" ಎಂದು ನಾನು ಕೇಳಬಹುದು. ಆದರೆ ನಾನು ಹಾಗೆ ಅಲ್ಪ ವಿಚಾರಕ್ಕೆ ಅವಳ ಮನಸ್ಸನ್ನು ನೋಯಿಸಲು ಇಷ್ಟಪಟ್ಟಿಲ್ಲ. ಅದಕ್ಕೆ ಬದಲಾಗಿ ಬಹಳ ಉತ್ಸುಕನಾಗಿರುವಂತೆ ನಟಿಸುತ್ತಾ "ಓಹೋ ಹಾಗೇನು! ಆಮೇಲೆ? ನೀನಲ್ಲದೆ ಇನ್ನಾರಾದರೂ ಆಗಿದ್ದರೆ ಖಂಡಿತ ಅದನ್ನು ಮಾಡಲು ಸಾಧ್ಯವಿಲ್ಲ" ಅಂತ ಹೇಳುತ್ತಿದ್ದೆ.

ಬೆಳಿಗ್ಗೆ ಆರು ಗಂಟೆಗೆ ಎದ್ದೆ. ಹಾಳಾದ್ದು ಬೆಂಕಿಪೊಟ್ಟಣ ಸಿಕ್ಕುವ ಹೊತ್ತಿಗೆ ಮುಕ್ಕಾಲು ಗಂಟೆ ಹಿಡಿಯಿತು. ನಾನು ಮನೆಯನ್ನೆಲ್ಲಾ ಮುತ್ತು ಮಾಡಿ ಹುಡುಕಿದೆ. ಕೊನೇಗೆ ಸಿಕ್ಕಿತು. ಒಲೆ ಹಿಂದೆಯೇ ಇರಬೇಕೆ? ಯಾವ ಪದಾರ್ಥವನ್ನು ಎಲ್ಲಿಡಬೇಕೆಂದು ಈ ಹೆಂಗಸರಿಗೆ ಖಂಡಿತವಾಗಿಯೂ ತಿಳಿಯು ವುದಿಲ್ಲ. ಒಲೆಯಮೇಲೆ ಕಾಫಿಗೆ ನೀರಿಟ್ಟು ಹುಡುಗರನ್ನು ಎಬ್ಬಿಸಲು ಹೋದೆ. "ಏಳು ಗಂಟೆ ಆಯಿತು, ಏಳುವುದಕ್ಕೇನು ನಿಮಗೆ ಧಾಡಿ" ತಂದೆಯ ದರ್ಪ ದಿಂದಲೇ ಗುಡುಗಿದೆ. "ಅಮ್ಮ ಕಾಫೀಮಾಡಿ ನಮ್ಮನ್ನೆಲ್ಲಾ ಎಬ್ಬಿಸ್ತಿದ್ಳು" ಪದ್ಮ ಹೇಳಿದಳು. ಎಲ್ಲಾ ಅಧಿಕ ಪ್ರಸಂಗತನ. ಹೇಳಿದಷ್ಟು ಕೇಳಲು ಈಗಿನ

ಕಾಲದ ಹುಡುಗರಿಗೆ ತಿಳಿದಿದೆಯೇನು ? ನಾವು ಚಿಕ್ಕವರಾಗಿದ್ದಾಗ....ಹೋಗಲಿ, ಆ ಮಾತೇಕೆ ಈಗ.

ಕಿಟಾರನೆ ಕಿರುಚಿದ ಶಬ್ದ ನಡುಮನೆಯಿಂದ ಕೇಳಬಂದಿತು. ಹಾಳಾದ್ದು ಅವಳೇ ಕಮಲಿ!

"ಯಾಕೆ, ಇಷ್ಟೊತ್ತು ಚೆನ್ನಾಗಿದ್ಲು ಈಗೇನ್ಬಂತು ಕೇಡು?" ಪದ್ದೀನ ವಿಚಾರಿಸಿದೆ.

ಸುಬ್ಬು ಚೆಂಡು ಎಸೆದನಂತೆ, ಅದು ಕಮಲೀ ಗಾಜಿನ ಗೊಂಬೆಮೇಲೆ ಬಿತ್ತಂತೆ, ಬೊಂಬೆ ನೂರು ಬೊಂಬೆಗಳಾದುವಂತೆ. "ಕಳಿಸು ಆ ಸುಬ್ಬನ್ನ, ಬಲೀಹಾಕ್ತೇನೆ."

ಸುಬ್ಬು ಕೆಟ್ಟಮುಖ ಮಾಡಿಕೊಂಡು ಬಂದ. "ಯಾಕೋ ಅವಳ ಗಾಜಿನ ಬೊಂಬೆ ಒಡೆದದ್ದು?"

"ನಾನು ಒಡೀಲಿಲ್ಲಣ್ಣ. ಆ ಚೆಂಡು ಭಾಳ ದೊಡ್ಡು. ಕೈಲಿ ಹಿಡೀ ಲಿಕ್ಕಾಗಲಿಲ್ಲ, ಉರುಳಿಹೋಗಿ ಕಮಲಿ ಬೊಂಬೇಗೆ ತಾಕ್ತು."

ಸರಿ, ಈ ಹುಡುಗರ್ನ ಸಮಾಧಾನ ಮಾಡೋಕೆ ಯಾರಿಂದಾಗುತ್ತೆ ಹೇಳಿ. ಬೇರೆ ಬೊಂಬೆ ತರೋಕೆ ಕಮಲಿಗೆ ನಾಲ್ಕಾಣೆ ತೆತ್ತದ್ದಾಯಿತು. ತನಗೂ ನಾಲ್ಕಾಣೆ ಬೇಕು ಅಂತ ಸುಬ್ಬು ಹಟ ಮಾಡಿದ. ಕಮಲಿ ಬೊಂಬೆ ಒಡೆದದ್ದ ರಿಂದ ಅವಳಿಗೆ ದುಡ್ಡು ಕೊಟ್ಟದ್ದು ಅಂತ ಅವನಿಗೆ ವಿವರಣೆ ಕೊಟ್ಟರೆ ಅವನಿಗೆ ಅರ್ಥವಾಗಬೇಕಲ್ಲ! ಕೊನೆಗೆ ಅವನೂ ನಾಲ್ಕಾಣೆ ವಸೂಲುಮಾಡಿದ.

ಅಲ್ಲ, ಪದ್ದಿ ಅಷ್ಟು ದೊಡ್ಡವಳಾದರೂ ಅವಳೂ ನಾಲ್ಕಾಣೆ ಬೇಕು ಅನ್ನುವ ಮುಖಮುದ್ರೆ ಮಾಡೋದೆ? ಎಲ್ಲೋ ಶನಿಗಳು. ಅವಳಿಗೂ ನಾಲ್ಕಾಣೆ ತೆತ್ತಿದ್ದಾಯಿತು.

ಭಾಷಣ ಮಾಡಬಹುದು, ಪುಸ್ತಕ ಬರೆಯಬಹುದು. ಚಿಕ್ಕ ಮಕ್ಕಳಿಗೆ ಚಡ್ಡಿ ಹಾಕುವುದು ಕಷ್ಟ. ಸುಂದರಿ ಊರಿಗೆ ಹೋಗುವಾಗ ಅಷ್ಟು ಹೇಳಿದ್ದಳು, ಸುಬ್ಬೂನ್ನ ರಾತ್ರಿ ಮಲಗೋವಾಗ ಹೊರಗೆ ಕರೆದುಕೊಂಡು ಹೋಗಬೇಕು ಅಂತ. ನನಗೆ ಮರೆತುಹೋಯ್ತು. ಹಾಸಿಗೆ ಹೊದ್ದಿಕೆ ಎಲ್ಲಾ ಒದ್ದೆ. ಸುಬ್ಬೂ ಹತ್ತಿರ ಬಂದರೆ ಉಪ್ಪಿನ ಗಣಿಯೇ ಹತ್ತಿರ ಬಂದಂತಾಗುತ್ತಿತ್ತು. ಒದ್ದೆ ಚಡ್ಡಿ

ಯನ್ನು ಬಿಚ್ಚಿ ಒಣಗಿದ ಚಡ್ಡಿ ಹಾಕಬೇಕಾಗುತ್ತಿತ್ತು. ಒಂದೊಂದು ಸಾರಿ ಎರಡು ಕಾಲನ್ನೂ ಒಂದೇ ತೋಳಿನಲ್ಲಿ ಹಾಕುತ್ತಿದ್ದ. ಮತ್ತೆ ಸರಿಮಾಡಿದರೆ ಅದು ·ಹೇಗೋ ತಿರುಗಮುರುಗ ಆಗುತ್ತಿತ್ತು. "ನಂಗೆ ಬರೋಲ್ಲ ಬಿಡಣ್ಣ, ಪದ್ದಿ ಹಾಕ್ತಾಳೆ." ಸುಬ್ಬೂಗು ಬೇಸರ ಬಂದಿರಬೇಕು.

"ಆಸ್ಪತ್ರೆ ಔಷಧಿ ಇದ್ದಹಾಗೆ ಇದೆ ಕಾಫಿ" ಕಮಲಿ ಒಟಗುಟ್ಟಿದಳು. ಈ ಅವಾಂತರದಲ್ಲಿ ಕಾಫಿಗೆ ಸಕ್ಕರೆ ಹಾಕೋದು ಮರೆತುಹೋಗಿತ್ತು. ಅದಕ್ಕೇ ನಂತೆ, ಸಕ್ಕರೆ ಹಾಕಿಕೊಂಡು ಕುಡಿದರಾಗದೆ !

"ಅಯ್ಯೋ ಪಾನಕ ಆಯಿತು" ಪದ್ದಿ ಹೇಳಿದಳು. "ಯಾಕೆ ಹುಚ್ಚು ಮೂಳಿ, ನೀನೇ ಅಷ್ಟೊತ್ತಿಗೇ ಎದ್ದು ಕಾಫೀ ಮಾಡಬಾರದು ? ಒಬ್ಬಳು ಔಷಧ ಅಂತಾಳೆ, ಒಬ್ಬಳು ಪಾನಕ ಅಂತಾಳೆ, ಎಲ್ಲಾ ಹೆಚ್ಚಿಹೋದಿರಿ. ನಾನು ಚಿಕ್ಕವನಿದ್ದಾಗ....

ಕಮಲಿ ಬೆಳಿಗ್ಗೆ ಸ್ಕೂಲಿಗೆ ಹೋದಳು. ಇನ್ನು ಪದ್ದಿಗೆ ಊಟ ಹಾಕಿ ಹತ್ತು ಗಂಟೆಗೆ ಕಳಿಸಬೇಕು. ಸರಿ, ಕಾಫಿ ಒಲೆ ಮೇಲೆ ಬೇಳೆ ಎಸರಿಗೆ ಇಟ್ಟೆ.

ಪದ್ದಿ ಆವೊತ್ತು ಸ್ಕೂಲಿಗೆ ಹೋಗಲಾಗಲಿಲ್ಲ. ಈ ಹೆಂಗಸರಿಗೆ ಬುದ್ಧಿ ಇದೆಯೋ ಇಲ್ಲವೊ ನನಗರ್ಥವಾಗುವುದಿಲ್ಲ. ಒಂದೇರೀತಿಯ ಐವತ್ತು ಡಬ್ಬಗಳು. ಸಾಸುವೆ ಹುಡುಕಬೇಕಾದಾಗ ಐವತ್ತು ಡಬ್ಬಗಳನ್ನೂ ಕೆಳಕ್ಕಿಳಿಸಿ ಮುಚ್ಚಳ ಗಳನ್ನು ತೆಗೆದು, ಎಲ್ಲವನ್ನೂ ಅಂಗಡಿ ಹರವಬೇಕು. ಪ್ರತಿ ಡಬ್ಬದ ಮೇಲೂ ಚೀಟಿ ಬರೆದಿಡು ಅಂತ ಹಿಂದೆಯೇ ಬಡಿದುಕೊಂಡಿದ್ದೆ. ಅದರಂತೆ ಚೀಟಿ ಅಂಟಿಸಿದ್ದಳು. ಕಾಫೀಪುಡಿ ಡಬ್ಬದಲ್ಲಿ ಖಾರದಪುಡಿ ಇತ್ತು. ಅರಿಶಿನಪುಡಿ ಡಬ್ಬದಲ್ಲಿ ಸೀಗೇಪುಡಿ ಇತ್ತು. ಹತ್ತು ಗಂಟೆಗೆ ಸ್ಕೂಲಿನಿಂದ ಬಂದ ಕಮಲಿ ದೊಡ್ಡ ರಾದ್ಧಾಂತ ಹಾಕಿದಳು. ಸುಬ್ಬು ಕಂಕುಳಲ್ಲಿ ತಟ್ಟೆ ಇಟ್ಟುಕೊಂಡು ಮನೆಯೆಲ್ಲಾ ಸುತ್ತುತ್ತಿದ್ದ.

ಮಧ್ಯಾಹ್ನ ಒಂದೂವರೆ ಗಂಟೆಗೆ ಕಮಲಿ, ಪದ್ದಿ ಸ್ಕೂಲಿಗೆ ಹೋದರು. ಸುಬ್ಬು ಮಲಗಿದ. ಎರಡು ಗಂಟೆಯಿಂದ ಅಡಿಗೆಮನೆ ಶುಚಿಮಾಡುವ ಕೆಲಸಕ್ಕೆ ಆರಂಭಿಸಿದೆ. ಅದು ಮುಗಿಯುವ ಹೊತ್ತಿಗೆ ಕಮಲಿ, ಪದ್ದಿ ಸ್ಕೂಲಿನಿಂದ ಬಂದಿದ್ದರು. ಕಾಫಿ ಬೇಕು, ತಿಂಡಿ ಬೇಕು ಅಂತ ಹಟ ಮಾಡಿದರು. ಜನಾರ್ಧನಯ್ಯನ ಹೋಟಲಿನಿಂದ ಇಷ್ಟು ಖಾರಾಸೇವು ಕಾಫಿ ತರಿಸಿದ್ದಾಯಿತು.

ರಾತ್ರಿ ಅಡಿಗೆಗೆ ಆಗಲೇ ಪ್ರಾರಂಭ ಮಾಡಿದ್ದೂ ಆಯಿತು. ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಊಟ ಮುಗಿಯಿತು. ಸರಿ, ರಾತ್ರಿ ಹನ್ನೆರಡು ಗಂಟೆ ಆಗಿದ್ದರೂ ಅಡಿಗೆಮನೆ ಕೆಲಸ ಇನ್ನೂ ಮುಗಿದಿರಲಿಲ್ಲ. ಮಾರನೆ ದಿನ ಎದ್ದಾಗ ಎಂಟೂ ಮೂವತ್ತು ತೋರಿಸುತ್ತಿತ್ತು ನಮ್ಮ ಮನೆ ಗಡಿಯಾರ.

* * * *

ಸುಂದರಿ ಅದು ಹೇಗೋ ನಾನು ಕೊಟ್ಟ ದುಡ್ಡಿನಲ್ಲಿಯೇ ಸಂಸಾರ ತೂಗಿಸಿ, ನನಗೆ ಯಾವೊತ್ತಾದರೂ ಆತ್ಮಹತ್ಯ ಮಾಡಿಕೊಳ್ಳಬೇಕಾದ ಸಂದರ್ಭ ಒದಗಿದಾಗ ಕುಂಕುಮದ ಭರಣಿಯಿಂದಲೋ, ಸಾಸುವೆ ಡಬ್ಬದಿಂದಲೋ ದುಡ್ಡು ತೆಗೆದು ಕೊಡುತ್ತಿದ್ದಳು. ಅವಳು ಊರಿಗೆ ಹೋಗಿ ಹದಿನೈದು ದಿನಗಳಾಗಿಲ್ಲ ಐವತ್ತು ರೂಪಾಯಿ ಹೆಚ್ಚಿಗೆ ಖರ್ಚಾಗಿದೆ.

* * * *

ತಲೆಕೆಟ್ಟು ಸುಂದರಿಗೆ ಟೆಲಿಗ್ರಾಂ ಕೊಟ್ಟಿದ್ದೆ. ಹೇಗಿದ್ದರೆ ಹಾಗೆ ಹೊರಟು ಬರಬೇಕೆಂದು ತಿಳಿಸಿದ್ದೆ. ಮಾರನೆ ಸಂಜೆ ಐದರ ಬಸ್ಸಿಗೆ ಬರುವುದಾಗಿ ಮಾವ ನವರು ಟೆಲಿಗ್ರಾಂ ಕಳುಹಿಸಿದ್ದರು.

ನಾನು, ಪದ್ದಿ, ಕಮಲಿ, ಸುಬ್ಬು, ಬಸ್‌ಸ್ಟಾಂಡ್ ಬಳಿಗೆ ಹೋಗಿದ್ದೆವು. ಬಸ್ ಅಪರೂಪಕ್ಕೆ ಆ ದಿನ ಸಕಾಲಕ್ಕೆ ಬಂದಿತು. "ಅಮ್ಮ ಬಂದ್ಲೂ" ಮೂರು ಹುಡುಗರೂ ಒಟ್ಟಿಗೆ ಅರಚಿದರು.

ಮೇಘವರ್ಣದ ಜರತಾರೀ ಸೀರೆಯನ್ನು ಸುಂದರಿ ಉಟ್ಟಿದ್ದಳು. ಅವಳ ಮುಖದ ಮೇಲೆ ತಿಳಿನಗೆಯೊಂದು ನರ್ತಿಸುತ್ತಿತ್ತು.

"ಹಾಸಿಗೆ, ಟ್ರಂಕು, ತಿಂಡಿ ಬುಟ್ಟಿ ಎಲ್ಲಾ ಇಳಿಸಿಕೊಳ್ಳಿ." ಸರಿ ಅವನ್ನೆಲ್ಲಾ ಇಳಿಸಿ, ಹಾಸಿಗೆ ಟ್ರಂಕುಗಳನ್ನು ಕೂಲಿ ಹುಡುಗನ ತಲೆಯ ಮೇಲೆ ಹೇರಿದ್ದಾ ಯಿತು, ತಿಂಡಿ ಬುಟ್ಟಿಯನ್ನು ಪದ್ದಿ ತೆಗೆದುಕೊಂಡಳು.

"ಹೇಗಿದೆ ನಿನ್ನ ಆರೋಗ್ಯ?"

"ಸುಮಾರಾಗಿದೆ."

"ಏನು! ನಮ್ಮ ಮಾವನವರು ಸ್ಕೂಲು ಮೇಷ್ಟರಾದರೂ ಒಳ್ಳೆಯ ಜರತಾರಿ ಸೀರೆಯನ್ನೇ ಉಡಿಸಿದ್ದಾರೆ."

"ಪಾಪ ಅವರೇನು ಉಡಿಸಿಯಾರು, ಇದು ನೀವು ಉಡಿಸಿದ್ದು!"

"ಹೋಗೇ, ನಾನೆಲ್ಲಿ ಇದನ್ನು ನಿನಗೆ ಕೊಂಡುಕೊಟ್ಟಿದ್ದೇನೆ. ನಿನ್ನಲ್ಲಿ ಯಾವ ಯಾವ ಸೀರೆಗಳು ಇವೆ ಎನ್ನುವುದು ನನಗೇನು ಲೆಕ್ಕವಿಲ್ಲವೇ ?"

"ನಾನು ಊರಿಗೆ ಹೋಗುವಾಗ ನೀವೆಷ್ಟು ದುಡ್ಡು ಕೊಟ್ಟಿದ್ದಿರಿ ?"

"ನೂರು ರೂಪಾಯಿ."

"ಆ ನೂರು ರೂಪಾಯಿಗೇ ಈ ಸೀರೆ ಕೊಂಡೆ."

"ಔಷಧಿ ಇಂಜಕ್ಷನ್ ?"

"ಹೇಳ್ತೇನೆ, ಮನೆ ಕೆಲಸ ಏನು ಮಹಾ ಅಂತ ನೀವು ಜಂಬ ಕೊಚ್ಚುತ್ತಿದ್ದಿರಿ. ಅದನ್ನು ಹೇಗೆ ನಿಭಾಯಿಸ್ತೀರಿ ನೋಡೋಣ ಅಂತ ಹಾಗೆ ಹೇಳಿದೆ. ಪಾಪ, ನೀವು ಬಹಳ ಒಳ್ಳೆಯವರು. ತಕ್ಷಣ ನೂರು ರೂಪಾಯಿ ಕೊಟ್ಟಿರಿ. ಆ ದುಡ್ಡಿನಿಂದಲೇ ಈ ಸೀರೆ ಕೊಂಡೆ. ಯಾಕೆ, ಈ ಕಲರ್ ಚೆನ್ನಾಗಿಲ್ಲವೆ ?

# ಧ್ರುವಚರಿತ್ರೆ ನಾಟಕಕ್ಕೆ ಹೋದದ್ದು

ನಿಮಗೆ ಗೊತ್ತಿರುವಂತೆ ನನಗೆ ಇಬ್ಬರು ಮಕ್ಕಳು. ಎರಡೂ ಗಂಡು. ಒಬ್ಬನ ಹೆಸರು ಕಾಂತು, ಇನ್ನೊಬ್ಬನ ಹೆಸರು ಮೋಹನ. ಕಾಂತು ಆಚೆ ಬೀದೀಲಿ ಇರುವ ಗೋಕುಲ ನರ್ಸರಿ ಶಾಲೆಯಲ್ಲಿ ಓದುತ್ತಿದ್ದಾನೆ—ಓದುತ್ತಿದ್ದಾನೆ ಅನ್ನುವುದಕ್ಕಿಂತ ಅಲ್ಲಿಗೆ ದಿನವೂ ಹೋಗುತ್ತಾನೆ—(ಆ ಶಾಲೆಯ ಜವಾನಿ ತಪ್ಪದೆ ಬಂದು ಎಳೆದುಕೊಂಡು ಹೋಗುತ್ತಾಳಾದ್ದರಿಂದ). ಮೋಹನನಿಗೆ ಇನ್ನೂ ಶಾಲೆಯ ವಯಸ್ಸಿಲ್ಲವಾದ್ದರಿಂದ ಲಕ್ಷಣವಾಗಿ ಅವರಮ್ಮನನ್ನು ಕಾಡಿಕೊಂಡು ಮನೆಯಲ್ಲಿಯೇ ಇರುತ್ತಾನೆ.

ಒಂದು ದಿನ ಕಾಂತು ಹೇಳಿದ: "ಅಣ್ಣಾ, ನಮ್ಮ ಶಾಲೆಯಲ್ಲಿ 'ಧ್ರುವ ಚರಿತ್ರೆ' ನಾಟಕ ಆಡುತ್ತೇವೆ. ನೀನು ಅಮ್ಮ ಇಬ್ಬರೂ ಬರಬೇಕು ಅಂತ ನಮ್ಮ ಸ್ಕೂಲಿನ ಮೇಡಂ ಮತ್ತು ಹೆಡ್ಮೇಷ್ಟರು ಹೇಳಿದ್ದಾರೆ. ನನಗೂ ಆ ನಾಟಕದಲ್ಲಿ ಪಾರ್ಟು ಕೊಟ್ಟಿದ್ದಾರೆ" ಅಂತ ಹೇಳಿದ. ಅಡಿಗೆ ಮಾಡುತಿದ್ದ ನನ್ನ ಹೆಂಡತಿ ಸೌಟುಧಾರಿಯಾಗಿಯೇ ಬಂದು "ಹೋಗೋಣ ಅಂದ್ರೆ, ನಮ್ಮ ಕಾಂತು ಪಾರ್ಟು ಮಾಡುತ್ತಾನಂತೆ. ನಾನು ಅವೊತ್ತೇ ಹೇಳ್ಳಿಲ್ವೆ, ಮುಂದೆ ಅವನಿಗೆ ಏನೋ ಕಾದಿದೆ ಅಂತ" ಎಂತ ಹೇಳಿದಳು. ಇದು ನಿರ್ವಿವಾದ ವಿಷಯ ಎಂತ ನಾನೂ ತಲೆ ಅಲ್ಲಾಡಿಸಿದೆ. "ಹೋಗೋಣ ಅದಕ್ಕೇನು ಮುಟ್ಟಬೇಕು. ದುಡ್ಡಿಲ್ಲ ಕಾಸಿಲ್ಲ, ಯಾಕೆ ಹೋಗಬಾರದು" ಎಂತ ನನ್ನ ಸಮ್ಮತಿ ಸೂಚಿಸಿದೆ.

ಇದು ನಡೆದು ಒಂದು ವಾರವಾಗಿರಬಹುದು. ಇಸ್ಪೀಟಿನಲ್ಲಿ ಮಧ್ಯಾಹ್ನ ಕಳೆದುಕೊಂಡ ದುಡ್ಡನ್ನು ಮೇಕಪ್ ಮಾಡುವುದಕ್ಕಾಗಿ ಅನಿವಾರ್ಯವಾಗಿ ಕ್ಲಬ್ನಲ್ಲಿಯೇ ರಾತ್ರಿಯೆಲ್ಲ ಉಳಿಯಬೇಕಾಯಿತು. ಮನೆಗೆ ಬಂದಾಗ ಐದಾರು ಮುಂಗೋಳಿಗಳು ಕೂಗಿದ್ದವು. ಬೆಳಗಿನ ಜಾವ ಬಂದು ಕದ ತಟ್ಟಿದೆ. ಹತ್ತಾರು ಬಾರಿ ಕೂಗಿ, ಆಚೆ ಬೀದಿಯವರೆಲ್ಲ ವಿಷಯ ಏನೆಂದು ತಮ್ಮ ಮನೆಗಳಿಂದ ಎದ್ದು ಬರುವ ಹೊತ್ತಿಗೆ ನನ್ನ ಹೆಂಡತಿ ಬಂದು ಕಡೆಗೂ ಕದ ತೆಗೆದಳು. "ಹೊತ್ತು

ಗೊತ್ತು ನಿಮಗೇನೂ ತಿಳಿಯುವುದಿಲ್ಲ, ಮನೆಯಲ್ಲಿ ಏನಾದರೂ ಆದರೆ ನಮ್ಮ ಗತಿ ಏನು ಎನ್ನುವುದು ಸಹ ತಿಳಿಯುವುದಿಲ್ಲ" ಇತ್ಯಾದಿ ಯಾವಾಗಲೂ ಹೇಳುವಂತೆ ಉಸಿರು ಕಟ್ಟಿಕೊಂಡು ಹೇಳಿದಳು. "ಹೋಗಲಿ ಬಿಡೇ ಇದ್ದದ್ದೇ ನಿನ್ನ ಪುರಾಣ, ಈಗ ಆಗಿರುವುದಾದರೂ ಏನು!" ಎಂತ ಕೇಳಿದೆ.

"ಆಗೋದೇನು ಬಂತು, ನಿನ್ನೆ ರಾತ್ರಿ ನಾನು ಹೊರಗೆ. ಆ ಎರಡು ಕಂದಮ್ಮಗಳು ತಾವೇ ಅನ್ನ ಹಾಕಿಕೊಳ್ಳಬೇಕು, ಆ ಎಂಜಲು ಗೋಮದ ಅವಸ್ಥೆ ನಿಮಗೇನು ಗೊತ್ತು? ಅವೇ ಹಾಸಿಗೆ ಉರುಳಿಸಿಕೊಂಡು ಮಲಗಿದವು, ಪಾಪ. ನನಗಂತೂ ರಾತ್ರಿ ಊಟವಿಲ್ಲ........"

ನಾನು ಮನೆಯಲ್ಲಿ ಇಲ್ಲದಾಗ ನಿಜಕ್ಕೂ ಪ್ರಮಾದವೇ ಜರುಗಿದ್ದಿತು. ತಪ್ಪೆಲ್ಲವೂ ನೂರಕ್ಕೆ ನೂರು ನನ್ನ ಕಡೆಗೇ ಇದ್ದುದರಿಂದ ತೆಪ್ಪಗೆ ಹೋಗಿ ನಾನೂ ಸಹ ಹಾಸಿಗೆ ಉರುಳಿಸಿಕೊಂಡು ಮಲಗಿದೆ.

"ಏನೋ ಆಫೀಸಿನಲ್ಲಿ ತುಂಬಾ ಕೆಲಸವಿತ್ತು, ಆಫೀಸರು ಹೇಳಿ ಕಳುಹಿಸಿದ್ದರು ಕಣೇ" ಅಂತ ನನ್ನ ಡೈಮಂಡ್ ಗುಲಾಮನನ್ನು ಆಡಿದೆ. ಅದಕ್ಕೆ ಕೂಡಲೇ ಜೋಕರ್‌ನಿಂದ ಕಟ್ ಬಿತ್ತು. "ಸಾಕು ಬಿಡಿ, ಪಕ್ಕದ ಮನೆ ಪದ್ದಮ್ಮನ ಗಂಡ ಅವರ ಹೆಂಡತಿಗೆ ನೀವು ಇನ್ನೂ ಕ್ಲಬ್‌ನಲ್ಲಿ ಇಸ್ಪೀಟು ಆಡುತ್ತಿದ್ದೀರಿ" ಅಂತ ಅಂದರಂತೆ. ಅವರು ರಾತ್ರಿ ಕಾಫೀಪುಡಿ ಕಡಕ್ಕೆ ಬಂದಾಗ ಆಕೆ ಹೇಳಿದರು.

ನಿರಾಧಾರಿಯೂ, ನಿಶ್ಶಸ್ತ್ರನೂ ಆದ ನಾನು ವಾಗ್ವಾದಕ್ಕೆ ಶರಣು ಹೊಡೆದು ಪಲಾಯನಸೂಕ್ತ ಪಠಿಸಬೇಕಾಯಿತು. ಬೆಳಿಗ್ಗೆ ಕಾಫಿ, ಮಧ್ಯಾಹ್ನದ ಅಡಿಗೆ, ಮಧ್ಯಾಹ್ನದ ಕಾಫಿ ತಿಂಡಿ ಸಹ ಮಾಡಿ ಸುಸ್ತಾಗಿದ್ದೆ. ಬೆಳಕು ಹರಿಯುವ ವರೆಗೂ ಕಣ್ಣು ಮುಚ್ಚಿರಲಿಲ್ಲ. ಕಣ್ಣುಗಳು ತುಯ್ಯುತ್ತಿದ್ದವು. ಸ್ವಸ್ಥವಾಗಿ ಮಲಗಿದೆ.

ನಾಲ್ಕುವರೆ ಗಂಟೆಗೆ ಶಾಲೆಯಿಂದ ಕಾಂತು ಬಂದ. ನನ್ನ ಎಬ್ಬಿಸಿದ. ನಾನು ಏಳುವ ಸ್ಥಿತಿಯಲ್ಲಿರಲಿಲ್ಲ. ರಗ್ಗು ಎಳೆದ, ತಲೆದಿಂಬು ಆಚೆ ಬಿಸಾಕಿದ, ಕೊನೆಗೆ ಎದೆಯ ಮೇಲೆ ಕುಳಿತು ರಪರಪನೆ ಬಡಿದ. ಇಷ್ಟೆಲ್ಲ ಅವಾಂತರದಲ್ಲಿ ಮಲಗುವುದು ಸಾಧ್ಯವಿಲ್ಲವೆಂದು ಎದ್ದೆ. "ಏನೋ ನಿನ್ನ ತಂಟೆ, ಒಂದು ಗಳಿಗೆ ಮಲಗೋದಕ್ಕೂ ಬಿಡೋದಿಲ್ಲವಲ್ಲೋ?"

"ಅವೊತ್ತು ಹೇಳಿದ್ದೆ ನೋಡಣ್ಣಾ ನಾಟಕ ಅಂತ, ಇವೊತ್ತು ಆಡ್ತೇವೆ, ಬಾರಣ್ಣಾ" ಅಂದ.

"ನನಗಂತೂ ನಮ್ಮ ಹುಡುಗ ಪಾರ್ಟು ಮಾಡಿದ್ದನ್ನ ನೋಡೋಕೆ ಲಭ್ಯವಿಲ್ಲ, ನೀವಾದರೂ ಹೋಗಬಾರದೆ ?" ನನ್ನ ಹೆಂಡತಿ ಅಂಗಲಾಚಿದಳು. ಮೊದಲ ದಿನ ನಾಟಕ ನೋಡುವುದಕ್ಕೆ ನಾನು ಒಪ್ಪಿಕೊಂಡಾಗ ಇದ್ದ ಸ್ಫೂರ್ತಿಯ ಕಾರಂಜಿ ಈಗ ಬತ್ತಿಹೋಗಿದ್ದಿತು.

"ಹೋಗೋ ಹುಡುಗರ ನಾಟಕಕ್ಕೆ ನಾನ್ಯಾಕೆ ಬರಬೇಕು" ಅಂತ ಜಾರಿ ಕೊಳ್ಳಲು ಪ್ರಯತ್ನಿಸಿದೆ.

"ಹೋಗಿ ಅಂದ್ರೆ ಅಷ್ಟು ಕೇಳಿಕೊಳ್ಳುತ್ತೆ, ಪಾಪ ಅದಕ್ಕೇನೋ ಉತ್ಸಾಹ" ಅಂತ ಮತ್ತೆ ದನಿಗೂಡಿಸಿದಳು ನನ್ನಾಕೆ.

"ಸರಿ, ಎಷ್ಟು ಹೊತ್ತಿಗೋ ನಿಮ್ಮ ನಾಟಕ ?" ಅಂತ ಕಾಂತೂನ್ನ ಕೇಳಿದೆ.

"ಆರು ಗಂಟೇಗಂತೆ" ಅಂತ ಹೇಳುತ್ತ ಸೈಕಲ್ ಚಕ್ರವನ್ನು ಉರುಳಿಸುತ್ತ ರೊಯ್ಯನೆ ಸುಂಟರಗಾಳಿಯಂತೆ ಹೊರಟುಹೋದ. "ರಾತ್ರೀ ಅಡಿಗೆಯ ಹೆಚ್ಚು ಕಲಾಪ ಹಚ್ಚಿಕೊಳ್ಳಬೇಡಿ. ಏನೋ ಒಂದು ಅನ್ನ, ಸಾರಾದರೆ ಸಾಕು. ಅಂದ ಹಾಗೆ ಉಪ್ಪಿನ ಕಾಯಿ ತೆಗೆದು ಅದಕ್ಕಷ್ಟು ಮೊಸರು ಹಾಕಿ ವಗ್ಗರಣೆ ಕೊಟ್ಟುಬಿಡಿ."

ಸರಿ, ಅಡಿಗೆಯ ಕೆಲಸವನ್ನೆಲ್ಲಾ ಮುಗಿಸುವಷ್ಟು ಹೊತ್ತಿಗೆ ಐದೂವರೆ ಆಯಿತು. ಕೋಟು ರುಮಾಲು ಹಾಕಿಕೊಂಡು ಗೋಕುಲ ನರ್ಸರಿ ಬಳಿ ಹೋದೆ. ನಾನು ಅಲ್ಲಿಗೆ ಹೋಗುವ ಹೊತ್ತಿಗೆ ಶಾಲೆ ಆಗಲೇ ಗೀಜಗನ ಗೂಡಿನಂತೆ ಗಿಜಿ ಬಿಜಿಗುಟ್ಟುತ್ತಿತ್ತು.

ನಾಟಕ, ಸಿನಿಮಾ ಮತ್ತು ಸಭೆಗಳಲ್ಲಿ ಸ್ತ್ರೀಯರಿಗಾಗಿ ಪ್ರತ್ಯೇಕ ಸ್ಥಳ ಗಳನ್ನು ಏರ್ಪಡಿಸಿರುತ್ತಾರೆ. ಆದರೆ ಈ ಶಾಲೆಯ ಕಟ್ಟಡದ ತುಂಬಾ ಬರೀ ಮಹಿಳೆಯರು ಮತ್ತು ಮಕ್ಕಳು ತುಂಬಿದ್ದರು. ಸಂತೆಯಲ್ಲಿ ತಪ್ಪಿಸಿಕೊಂಡ ಮಗುವಿನಂತೆ ದಾರಿ ತೋರದೆ ಅಲ್ಲೇ ನಿಂತಿದ್ದೆ. ಪುರುಷರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದ್ದರೆ ಚೆನ್ನಾಗಿತ್ತಲ್ಲವೇ ? ಅಂತ ಅಂದುಕೊಂಡೆ. ಅಷ್ಟೊತ್ತಿಗೆ ನರ್ಸರಿ

ಶಾಲೆಯ ಹೆಡ್ಮಾಸ್ಟರು ಹಲ್ಲು ಗಿಂಜುತ್ತಾ "ದಯಮಾಡಿಸಿ, ದಯಮಾಡಿಸಿ" ಅಂತ ಹೇಳಿದರು. ದಯಮಾಡಿಸುವುದು ಒಳಕ್ಕೋ ಹೊರಕ್ಕೋ ಎಂಬ ಪ್ರಶ್ನೆ ತುದಿ ನಾಲಗೆಯ ಮೇಲೆ ನರ್ತಿಸುತ್ತಿತ್ತು.

ಒಂದು ಮುರಕಲು ಬೆಂಚನ್ನು ಮೂಲೆಯಲ್ಲಿ ಹಾಕಿದರು. ಅಲ್ಲಿ ಕುಳಿತು ಕೊಂಡೆ.

ಎರಡು ಬಿಳಿಯ ಬೆಡ್‌ಷೀಟ್‌ಗಳಿಗೆ ಗೋಣೀ ಚೀಲದ ದಾರ ಕಟ್ಟಿ 'ಪರದೆ' ಮಾಡಿದ್ದರು. ನಾಟಕರಂಗದ ಎದುರುಗಡೆ ಉದ್ದಕ್ಕೂ ಬೆಂಚಿನ ಸಾಲುಗಳು. ಅವುಗಳ ಮೇಲೆ ಬಿಡುವಿಲ್ಲದೆ ಮಾತನಾಡುವ ಹೆಂಗಸರೂ, ತೆರಪಿಲ್ಲದೆ ಅಳುವ ಹುಡುಗರೂ ಕುಳಿತಿದ್ದರು. ಎತ್ತಲೋ ಶೂನ್ಯದೃಷ್ಟಿಯಿಂದ ನೋಡುತ್ತ ಕುಳಿತಿದ್ದೆ. "ತಾವು ಯಾರೋ ?" ದಪ್ಪ ಕನ್ನಡಕದ ಮುದುಕ ನೊಬ್ಬ ಕೇಳಿದ. ನನ್ನ ಪ್ರವರ ಹೇಳಿಕೊಂಡೆ. "ನಿಮ್ಮ ಹುಡುಗ ಪಾರ್ಟು ಮಾಡುತ್ತಾನೇನೋ ?" ಅಂತ ಕೇಳಿದರು. "ಹೂ" ಎಂದೆ. "ಯಾವುದು ?" "ನಂಗೊತ್ತಿಲ್ಲ". "ನಮ್ಮ ಹುಡುಗ ಧ್ರುವನಪಾರ್ಟು ಮಾಡುತ್ತಾನೆ. ಪಾರ್ಟೇನು ಬಂತು, ಅವನು ಧ್ರುವನ ಹಾಗೆಯೇ ಇದ್ದಾನೆ" ಅಂತ ಅವರು ಹೇಳಿದರು. ನಮ್ಮ ಕಾಂತು ಯಾವ ಪಾರ್ಟು ಮಾಡುತ್ತಾನೆ ಅನ್ನುವುದು ನನಗೆ ಗೊತ್ತಿರಲಿಲ್ಲ. ಇನ್ನು ಅವನು ಯಾರ ಹಾಗಿದ್ದಾನೆಂದು ಹೇಳಲೂ ಸಾಧ್ಯವಿರಲಿಲ್ಲ.

"ನಿಮ್ಮ ಹುಡುಗನ ಹೆಸರೇನು ?" ಅಂತ ಅವರು ಕೇಳಿದರು. "ಕಾಂತು". "ನೋಡಿದ್ದೇನೆ ಕಪ್ಪನೆಯ ವಕ್ರ ಹುಡುಗ. ನಮ್ಮ ಮನೆಗೆ ಅವೊತ್ತು ಬಂದಿದ್ದ, ನಮ್ಮ ಹುಡುಗನ ಜೊತೆ ಆಡೋಕೆ. ಅವನ ವಯಸ್ಸೇನು, ಯಾವ ಕ್ಲಾಸಿನಲ್ಲಿ ಓದುತ್ತಾನೆ ?" "ಏಳು ವರ್ಷ, ಕನ್ನಡ ಥರ್ಡ್ ಇಯರ್‌ನಲ್ಲಿ ಓದುತ್ತಾನೆ."

"ನಮ್ಮವನಿಗೂ ಏಳು. ಆದರೆ ಅವನು ಇಂಗ್ಲೀಷ್ ಫಸ್ಟ್ ಇಯರ್‌ನಲ್ಲಿ ಓದುತ್ತಾನೆ. ಹೀಗೇ ಕೆಲವು ಹುಡುಗರು ಬುದ್ಧಿವಂತರಾಗಿರುತ್ತವೆ, ಕೆಲವು ಹಾಗೇ ಇರುತ್ತವೆ" ಎಂತ ಹೇಳಿ, ಅವರ ಹುಡುಗ ಹೇಗೆ ಬೆಳಿಗ್ಗೆ ಅಷ್ಟು ಹೊತ್ತಿಗೇ ಏಳುತ್ತಾನೆ, ಪಾಠಗಳನ್ನು ಗಟ್ಟಿಮಾಡುತ್ತಾನೆ, ವಿಧೇಯತೆಯಿಂದ ನಡೆದು ಕೊಳ್ಳುತ್ತಾನೆ ಅಂತ ವಿವರಿಸಿದರು. ಇದಕ್ಕೆ ಪ್ರತಿಯಾಗಿ ನಮ್ಮ ಹುಡುಗನ ಬಗ್ಗೆ ಏನನ್ನೂ ಹೇಳುವಹಾಗಿರಲಿಲ್ಲ. ಒಂದು ವೇಳೆ ಏನಾದರೂ ಹೇಳಿದ್ದರೆ, ಅದು ನನಗಾಗಲೀ ನಮ್ಮ ಹುಡುಗನಿಗಾಗಲೀ ಕೀರ್ತಿ ತರುವಂತಹುದಾಗಿರಲಿಲ್ಲ.

ಪುಣ್ಯಕ್ಕೆ ಗಂಟೆ ಬಾರಿಸಿತು. ತೆರೆಯನ್ನು ಸ್ಕೂಲು ಜವಾನಿ ಬಂದು ಎಳೆದಳು, ನಾಟಕ ಪ್ರಾರಂಭವಾಯಿತು. ಉತ್ಥಾನಪಾದರಾಯನ ಆಸ್ಥಾನ ದೃಶ್ಯ. ಇಲ್ಲಿ ನಮ್ಮ ಹುಡುಗ ಇರಲಿಲ್ಲ. ಸರಿ ಎರಡನೆಯ ದೃಶ್ಯ. ಶಾಲೆ. ಇಲ್ಲಿ ನಮ್ಮ ಹುಡುಗ ಇದ್ದ. ಭಿಕ್ಷಾನ್ನದ ಹುಡುಗನ ಹಾಗೆ ಒಂದು ದಟ್ಟಿ ಸುತ್ತಿಕೊಂಡು ಒಂದು ಅಂಗವಸ್ತ್ರವನ್ನು ಹೊದೆದಿದ್ದ. ಶಾಲೆಯ ಗೋಡೆಯ ಸುಣ್ಣವೆಲ್ಲಾ ವಿಭೂತಿಯ ನೆಪದಲ್ಲಿ ಅವನ ಹಣೆಯ ಮೇಲೆ ರಾರಾಜಿಸುತ್ತಿತ್ತು. ನನ್ನನ್ನು ನೋಡಿ ಒಂದು ಬಾರಿ ಹಲ್ಲು ಕಿರಿದ. ತಕ್ಷಣವೇ ಅದೇನು ಸ್ಫೂರ್ತಿ ಬಂದಿತೋ ಏನೋ, ಮೊಹರಂ ಹುಲಿ ಆಗಿ ಕೈ ಕಾಲು ಆಡಿಸುತ್ತ ಕುಣಿಯತೊಡಗಿದ. ವಿಂಗ್‌ನಿಂದ ಹೆಡ್ಮಾಸ್ಟರು ಬಂದು ಅವನ ರಟ್ಟೆ ಹಿಡಿದು ಒಳಕ್ಕೆ ಎಳೆದೊಯ್ದರು.

ಶಾಲೆ ದೃಶ್ಯ ಪ್ರಾರಂಭವಾಯಿತು. ಧೃವ ಬಂದ. ಎಲ್ಲ ಹುಡುಗರೂ ಅವನ ಬಳಿ ಸಾರಿದರು. ಯಾವ ಮಾಯದಲ್ಲೋ ನಮ್ಮ ಹುಡುಗ ರಂಗಕ್ಕೆ ಬಂದ. ಒಂದು ಸಾರಿ ನಾಯಿಯ ಹಾಗೆ ಬಗುಳಿದ, ಇನ್ನೊಂದು ಸಾರಿ ಬೆಕ್ಕಿನ ಹಾಗೆ ಮಿಯಾವ್ ಅಂದ. ಜನ ಘೊಳ್ಳೆಂದಿತು. ಹೆಡ್ಮಾಸ್ಟರು ನಡು ರಂಗಕ್ಕೇ ಬಂದು ಮತ್ತೆ ಅವನನ್ನು ಕರೆದುಕೊಂಡು ಹೋದರು. ನಾಟಕ ಮುಗಿಯುವ ವರೆಗೆ ಮತ್ತೆ ಅವನು ರಂಗದ ಮೇಲೆ ಕಾಣಿಸಲಿಲ್ಲ. ನಾಟಕ ಮುಗಿದು ಎಲ್ಲಾ ಪಾತ್ರಧಾರಿಗಳೂ ಕೈಮುಗಿದು ನಿಂತುಕೊಂಡು 'ಜನಗಣ' ಹೇಳುತ್ತಿದ್ದರು. ಕಾಂತು ಸಹ ನಿಂತಿದ್ದ. ಎಲ್ಲರದೂ ಒಂದು ದನಿಯಾದರೆ ಇವನದೇ ಒಂದು. ಎಲ್ಲರೂ ಯಾವುದೋ ಒಂದು ನುಡಿಯನ್ನೋ, ಚರಣವನ್ನೋ ಹೇಳುತ್ತಿದ್ದರೆ ಇವನು ಬೇರೆ ಹೇಳುತ್ತಿದ್ದ. ನಾನು ಹೊರಗೆ ಹೊರಟು ಅರ್ಧ ದಾರಿ ಬಂದಿದ್ದೆ. ಹಿಂದಿನಿಂದ ಏದುತ್ತಾ ಕಾಂತು ಬಂದ. ನಾನು ಯಾವ ಮಾತನ್ನೂ ಆಡಲಿಲ್ಲ.

ಮನೆಗೆ ಇಬ್ಬರೂ ಹೋದೆವು. "ನಾಟಕ ಹೇಗಿತ್ತು? ನಮ್ಮ ಕಾಂತು ಹೇಗೆ ಪಾರ್ಟು ಮಾಡಿದ! ನನ್ನ ಗ್ರಹಚಾರ ಇವೊತ್ತೇ ಹೊರಗಿರಬೇಕೇ?" ಅಂತ ನನ್ನ ಹೆಂಡತಿ ಹೇಳಿದಳು. "ನೀನು ಹೊರಗಿದ್ದದ್ದೇ ಒಳ್ಳೆಯದಾಯಿತು. ಒಳಗಿದ್ದು ಅವನ ಪಾರ್ಟು ನೋಡಿದ್ದರೆ ನಿನ್ನ ಹೊಟ್ಟೆ ತಣ್ಣಗಾಗುತ್ತಿತ್ತು" ಎಂತ ಹೇಳಿದೆ.

# ಸಂಸಾರ ಸುಖ

ನಮ್ಮದು ಈಗಿನ ಕಾಲದ 'ಮಿತಿ ಸಂತಾನ'ಕ್ಕೆ ಸೇರಿದ ಕುಟುಂಬವಲ್ಲ, ಹಳೆಯ ಕಾಲದ 'ಮಿತಿ ಮೀರಿದ' ಸಂತಾನ ನಮ್ಮದು. ನಮಗೆ ಈ ಹೊಸ 'ಮಿತಿ ಸಂತಾನ'ದ ರಹಸ್ಯ ಆಗ ತಿಳಿದಿದ್ದರೆ ಲಕ್ಷಣವಾಗಿ ಒಂದು ಗಂಡು, ಒಂದು ಹೆಣ್ಣು ಮಾಡಿಕೊಂಡು ರಾಮಾ ಅಂತಿರುತ್ತಿದ್ದೆವು. ಮಿಂಚಿಹೋದ ಘಟನೆಗಳಿಗೆ ಏಕೆ ಚಿಂತಿಸಬೇಕು ಅಂತ ನಮಗೆ ಗೊತ್ತಿರುವ ಗಾದೆಯ ಮಾತನ್ನು ನೀವು ನಮ್ಮ ಮುಖದ ಮೇಲೆ ಎಸೆಯುತ್ತೀರಿ ಎಂಬುದು ನನಗೆ ಗೊತ್ತು. ಆದರೆ ಮೂರು ಹೊತ್ತೂ ಆ ಚಿಂತೆಯೊಂದು ಬಿಟ್ಟು ಬೇರೆ ಗತಿಯೇ ಇಲ್ಲದಾಗಿದೆ. ಕುಟುಂಬ ನಿರ್ವಹಣೆ ಹೇಗಾದೀತು, ಉರುಳಲಾರದ ಈ ಸಂಸಾರ ರಥವನ್ನು ಹೇಗೆ ಉರುಳಿಸಬೇಕು – ಎಂಬುದೇ ನಮ್ಮ ನಿತ್ಯಗಾಯತ್ರಿ.

ನಾವು ಶ್ರೀಮಂತರಲ್ಲ, ಬಡವರೂ ಅಲ್ಲ, ಮಧ್ಯಮ ತರಗತಿಯವರೂ ಅಲ್ಲ. ಆರ್ಥಿಕ ಪ್ರವೀಣರು ನಮ್ಮ ಕುಲಕ್ಕೆ ಬೇರೊಂದು ನಾಮಕರಣವನ್ನೇ ಮಾಡಿದ್ದಾರೆ. ನಾವು ಕೆಳ-ಮಧ್ಯಮ (Lower-middle class) ತರಗತಿಗೆ ಸೇರಿದವರು. ಕೈಗಾರಿಕೆ ಯುಗದ ಶಾಪಗ್ರಸ್ತರು ನಾವು, ತ್ರಿಶಂಕುಸ್ವರ್ಗವಾಸಿಗಳು. ನಮಗೆ ಈ ಜನ್ಮದಲ್ಲಿಯೇ ಮೋಕ್ಷವಿಲ್ಲ, ಇನ್ನು ಮುಂದಿನ ಜನ್ಮದ ಮೋಕ್ಷ ಕಟ್ಟಿಕೊಂಡು ವ್ಯರ್ಥಾಲಾಪದಿಂದ ಸುಮ್ಮನೆ ಕಾಲಹರಣ ಆಗುತ್ತೆ ಅಷ್ಟೆ.

ಬಡಾವಣೆಯೊಂದರಲ್ಲಿ ಎರಡು ದೊಡ್ಡ ಮನೆಗಳ ಸಂದಿಯಲ್ಲಿ ಸಿಕ್ಕಿಕೊಂಡು ನರಳುತ್ತಿರುವ ಚಿಕ್ಕದೊಂದು ಔಟ್‌ಹೌಸ್ ಅಥವಾ – Dog-house – ನಾವಿರುವುದು. ಇದನ್ನು ಮನೆಯೆಂದು ಕರೆಯುವುದು ನಿಜಕ್ಕೂ 'ಮನೆ' ಶಬ್ದಕ್ಕೆ ಅಪಮಾನ. ಬೆಂಕಿಪೊಟ್ಟಣದ ಮಾದರಿಯ ಚಿಕ್ಕಚಿಕ್ಕ ಪೆಟ್ಟಿಗೆಯಂಥ ವಿಭಾಗಗಳು. ಈ ಮನೆಯಲ್ಲಿ ವಿಭಾಗಗಳಿಗಿಂತ ಹೆಚ್ಚಾಗಿ ಗೋಡೆಗಳಿವೆ. ಎಷ್ಟು ಕಷ್ಟಪಟ್ಟು, ಎಷ್ಟು ಬುದ್ಧಿ ಉಪಯೋಗಿಸಿ ಇಷ್ಟು ಪುಟ್ಟ ಮನೆಯನ್ನು ಕಟ್ಟಿದ್ದಾರೋ? ಇದೇ ಒಂದು ಆಧುನಿಕ ಕಾಲದ ಪವಾಡ ಎಂದು ಧಾರಾಳವಾಗಿ ಹೇಳಬಹುದು.

ನಮ್ಮದು ಬಹು ಅಚ್ಚುಕಟ್ಟಾದ ಸಂಸಾರ. ನಾಲ್ಕು ಗಂಡು, ನಾಲ್ಕು ಹೆಣ್ಣು ಅಷ್ಟೆ. ಮದುವೆಯ ಕಾಲಕ್ಕೆ ನನ್ನ ಹೆಂಡತಿ ಹಿರಿಯರಾದವರಿಗೆಲ್ಲ ನಮಸ್ಕಾರ ಮಾಡಿದ ಪಾಪಕ್ಕೆ ಅವರಿಂದ 'ಅಷ್ಟಪುತ್ರೀಭವ' ಎಂಬ ಆಶೀರ್ವಾದ ಪಡೆದಳು. ಆ ಆಶೀರ್ವಾದ ಹಾಳಾದ್ದು ನಿಜವಾಗಬೇಕೇ! ನನ್ನ ಹಿರಿಯ ಮಗಳಿಗೆ ಈಗ ಇಪ್ಪತ್ತೆರಡು ವರ್ಷ. ನನ್ನ ಹೆಂಡತಿಯ ಕೈಯಲ್ಲಿ ಒಂದು ವರ್ಷದ ಕೈಗೂಸಿದೆ. ಮೂರು ವರ್ಷದ ಅಂತರ ಇಟ್ಟು ಉಳಿದ ಮಕ್ಕಳ ವಯಸ್ಸನ್ನು ನೀವೇ ಲೆಕ್ಕಹಾಕಿ. ಈಗ ಹಿರಿಯ ಮಗಳು ಗಂಡನ ಮನೆಯಲ್ಲಿದ್ದಾಳೆ. ಅವಳ ಹಿಂದೆ ನಾಣಿ, ಶೀನು. ಒಬ್ಬ ಕಾಲೇಜಿನಲ್ಲಿಯೂ ಇನ್ನೊಬ್ಬ ಹೈಸ್ಕೂಲಿನಲ್ಲಿಯೂ ಇದ್ದಾರೆ. ಪದ್ಮಿ, ಕಮಲಿ ಮಿಡ್ಲ್ ಸ್ಕೂಲಿನ ಯಾವುದೋ ತರಗತಿಗಳಲ್ಲಿದ್ದಾರೆ – ನನಗೆ ಅದು ಅಷ್ಟು ಸರಿಯಾಗಿ ನೆನಪಿಲ್ಲ. ಕಿಟ್ಟಿ, ಮಾಲು ಪ್ರೈಮರಿ ಸ್ಕೂಲಿನಲ್ಲಿ ಓದುತ್ತಿದ್ದಾರೆ.

ಇಷ್ಟು ಜನ ಆ ಬೆಂಕಿಪೊಟ್ಟಣದ ಮನೆಯಲ್ಲಿ ಹೇಗೆ ಓದಬೇಕು? ಅದು ಹೇಗೆ ಮಲಗಬೇಕು? ಬಚ್ಚಲಮನೆಯಿಂದ ನಡುಮನೆ ದಾಟಿ ವರಾಂಡದಲ್ಲಿಯವರೆಗೂ ಆಸ್ಪತ್ರೆಯ ವಾರ್ಡಿನಂತೆ ಹಾಸಿಗೆಗಳನ್ನು ಹಾಸಿರುತ್ತಾರೆ. ಇರಲಿ.

ಪ್ರತಿ ದೇಶದ ಸರ್ಕಾರವೂ ತನ್ನ ಆಡಳಿತ ತೂಗಿಸಿಕೊಳ್ಳಲು ಆಯವ್ಯಯ ಪಟ್ಟಿಯನ್ನು ಪ್ರತಿ ವರ್ಷವೂ ತಯಾರಿಸಿಕೊಳ್ಳುತ್ತದೆ. ತಿಂಗಳಿನ (ತಂಗಳಿನ) ಸಂಬಳದವನಾದ ನಾನು ಪ್ರತಿ ತಿಂಗಳ ಮೊದಲನೆಯ ತಾರೀಖಿನ ದಿನ ಆಯವ್ಯಯ ಪಟ್ಟಿಯನ್ನು ತಯಾರಿಸಿಕೊಳ್ಳಬೇಕಾಗುತ್ತದೆ. ನಮ್ಮ ಸರ್ಕಾರದಂತೆ ನಮ್ಮ ಆಯವ್ಯಯ ಪಟ್ಟಿಯೂ ಪ್ರತಿ ತಿಂಗಳೂ ಖೋತಾ ಆಯವ್ಯಯ ಪಟ್ಟಿಯಾಗಿದೆ. ಹೊಟ್ಟೆಗಾದರೆ ಬಟ್ಟೆಗೆ ಸಾಲದು, ಬಟ್ಟೆಗಾದರೆ ಹೊಟ್ಟೆಗೆ ಸಾಲದು. ಈ ಆಯವ್ಯಯ ಪಟ್ಟಿ ತಯಾರಿಸಬೇಕಾದಾಗ ಪ್ರತಿ ತಿಂಗಳೂ ಒಂದು ಪುಟ್ಟ ಯುದ್ಧವೇ ಜರಗುತ್ತದೆಂದು ಹೇಳಬಹುದು. ನಾನು ಅರ್ಥಿಕಮಂತ್ರಿ ಎಂದಿಟ್ಟುಕೊಂಡರೆ ಮನೆಮಂದಿಯೆಲ್ಲ ವಿರೋಧಿಪಕ್ಷದ ಸದಸ್ಯರಂತೆ ವರ್ತಿಸುತ್ತಾರೆ. ನಾನು ಯಾವ ಸೂಚನೆ ಕೊಟ್ಟರೂ ಅದನ್ನು ವಿರೋಧಿಸಬೇಕೆಂಬ ಹಟದಿಂದಲೇ ಕೂಡಿದವರಾಗಿರುತ್ತಾರೆ. ನಾನು ಹೆಡ್ ಗುಮಾಸ್ತೆಯಾಗಿದ್ದು ಒಂದು ನೂರಾ ಐವತ್ತು ರೂಪಾಯಿ ಸಂಬಳ ತರುತ್ತಿದ್ದು, ಎಲ್ಲರಿಂದಲೂ ಬುದ್ಧಿವಂತ ನೆನೆಸಿಕೊಂಡಿದ್ದರೂ ಮನೆಯಲ್ಲಿ ಮಾತ್ರ ಶತದಡ್ಡನೆಂಬ ಪ್ರಶಸ್ತಿಯನ್ನು ಪಡೆ

ದಿದ್ದೇನೆ. ನನ್ನ ವಿನಃ ಪ್ರಪಂಚದಲ್ಲಿರುವ ಇತರ ಗಂಡಸರು ಒಳ್ಳೆಯವರು ಮತ್ತು ಬುದ್ಧಿವಂತರು ಎಂಬ ಭಾವನೆಯನ್ನು ನನ್ನ ಹೆಂಡತಿ ತಾಳಿದ್ದಾಳೆ. ಅಭಿಪ್ರಾಯ ಸ್ವಾತಂತ್ರ್ಯಕ್ಕೆ ನಮ್ಮ ರಾಜ್ಯಾಂಗದಲ್ಲಿ ಮನ್ನಣೆ ಕೊಡುವುದಕ್ಕೆ ಮುಂಚೆಯೇ ಅವಳು ಅದನ್ನು ಜಾರಿಯಲ್ಲಿ ತಂದುಕೊಂಡಿದ್ದು ನಿಜಕ್ಕೂ ಸೋಜಿಗದ ಸಮಾಚಾರವಾಗಿದೆ.

ನನಗೆ ತಿಂಗಳು ಒಂದಕ್ಕೆ ಬರುವ ನೂರೈವತ್ತು ತೇಪೆಗಳಿಂದ ಇನ್ನೂರು ತೂತುಗಳನ್ನು ಮುಚ್ಚಬೇಕು. ಸರ್ಕಾರ ಸಾಲ ಎತ್ತಿದರೆ ಜನ ನಾ ಮುಂದು, ತಾ ಮುಂದು ಅಂತ ಬರುತ್ತಾರೆ. ನಾವು ಸಾಲ ಕೇಳಲು ಹೋದರೆ ಇಲ್ಲದ ಸಬೂಬುಗಳನ್ನು ಕೊಡುತ್ತಾರೆ. ಅಲ್ಲದೆ ಈ ಹಿಂದೆ ಆಗಿರುವ ಋಣವನ್ನು ನಾನು ತೀರಿಸಲಾರದೆ ಎಲ್ಲರಿಗೂ ಚಿರಋಣಿಯಾಗಿಯೇ ಇದ್ದೇನೆ. ಈ ತಾಪ ತ್ರಯ ದೋಷದಿಂದಲೇ ನಾನೂ ನನ್ನ ಹೆಂಡತಿಯೂ ಎಷ್ಟೋ ಬಾರಿ ಮಾತು ಬಿಟ್ಟು ಶತ್ರುಗಳಂತೆ ವರ್ತಿಸಿರುವುದೂ ಉಂಟು. ತಪ್ಪು ನನ್ನದಲ್ಲವೆಂತಲೂ, ಪರಿಸ್ಥಿತಿಯ ಪ್ರವಾಹಕ್ಕೆ ನಾವು ಸಿಕ್ಕಿಬಿದ್ದಿದ್ದೇವೆಂದೂ, ಅದರ ಇದಿರಾಗಿ ನಾವು ಹೋಗಲು ಸಾಧ್ಯವಿಲ್ಲೆಂದೂ ನಾನು ಎಷ್ಟೋ ಬಾರಿ ವಿವರಣೆ ಕೊಟ್ಟಿದ್ದೇನೆ. ಆದರೆ ಆ ಕಿವುಡು ಕಿವಿಯಮೇಲೆ ಬಿದ್ದ ಮಾತುಗಳು ಯಾವ ಪರಿಣಾಮವನ್ನೂ ಉಂಟುಮಾಡಿಲ್ಲ.

ಮನೆ ಬಾಡಿಗೆ, ಲೈಟು, ನೀರು ಇತ್ಯಾದಿ ಸೇರಿ – ಹುಡುಗರ ಶಾಲೆ ಕಾಲೇಜುಗಳ ಫೀಸ್‌ಗಳು, ಸರ್ಕಾರದವರು ಒತ್ತಾಯವಾಗಿ ಕಸಿದುಕೊಳ್ಳುವ ಇನ್‌ಷ್ಯೂರೆನ್ಸ್, ಅಕ್ಕಿ, ಗೋಧಿ ಮುಂತಾದ ಹೊಟ್ಟೆಉರಿ ಪದಾರ್ಥಗಳೂ, ಸೌದೆ, ಇದ್ದಲು, ಬೆರಣಿ ಮುಂತಾದ ಕಾಷ್ಠಾವ್ಯಸನಗಳೂ, ಉಪ್ಪು, ಮೆಣಸಿನ ಕಾಯಿ ಮೊದಲಾಗಿ ಇತರ ಚಿಲ್ಲರೆ ಪದಾರ್ಥಗಳೂ – ಇವಕ್ಕೆ ಉಳಿದ ಒಂದು ನೂರು ರೂಪಾಯಿ ಸಾಕು ಸಾಲದು. ನಾನು ಆಫೀಸರ್ ಅಲ್ಲದಿದ್ದರೂ 'ಆಫೀಸರ್ ಸ್ನಫ್' ಹಾಕುತ್ತೇನೆ. ನಶ್ಯದಿಂದಾಗುವ ಕೆಡಕುಗಳು, ಅದರಿಂದ ಬಟ್ಟೆ ಮತ್ತು ಗೋಡೆಗಳು ಗಲೀಜಾಗುವುದು ಮುಂತಾದ ಮಹತ್ತರ ವಿಷಯಗಳ ಬಗ್ಗೆ ನಾನು ಸಾಮಾನ್ಯವಾಗಿ ದಿನವೂ ಹೆಂಡತಿ ಮಕ್ಕಳಿಂದ ಭಾಷಣಗಳನ್ನು ಕೇಳಿದ್ದೇನೆ. ನನ್ನ ಕೈಕೆಳಗಿನ ಗುಮಾಸ್ತೆಗಳು ಹೆಚ್ಚು ಬೆಲೆಯ ಸಿಗರೇಟ್‌ಗಳನ್ನು ಸೇದುತ್ತಿರುವರೆಂದೂ, ಆ ದೃಷ್ಟಿಯಿಂದ ಲೆಕ್ಕ ಹಾಕಿದರೆ ನನ್ನ ಬಾಬಿಗೆ

ಅಷ್ಟೇನೂ ಹಣ ಖರ್ಚಾಗುವದಿಲ್ಲವೆಂದೂ ಗಂಟಲು ಕೀಳುವತನಕ ವಾದಿಸಿದ್ದೇನೆ. ಏನೋ ಮನುಷ್ಯ ಅಂದಮೇಲೆ ಏನಾದರೂ ಒಂದು ಬಾಬು ಇರಬೇಕು ಅಂತ ಇಟ್ಟುಕೊಂಡಿದ್ದೇನೆ. ಆಫೀಸಿನ ಕೆಲಸ ಕಾರ್ಯಗಳನ್ನು ನಾನು ಸುಸೂತ್ರವಾಗಿ ಸಾಗಿಸುವುದಾದರೂ ಈ ಜ್ಞಾನಚೂರ್ಣದಿಂದಲೇ ಎಂದು ಧಾರಾಳವಾಗಿ ಹೇಳಬಲ್ಲೆ.

ಮನೆಯಲ್ಲಿ ಸಹ ಕಾಫಿ ಎಂಬ ದ್ರಾವಕವನ್ನು ಕಾಯಿಸುತ್ತಾರೆ. ಇದು ಮನಸ್ಸಿಗಾಗಲೀ, ದೇಹಕ್ಕಾಗಲೀ ಯಾವ ತೃಪ್ತಿಯನ್ನೂ ಉಂಟುಮಾಡುವುದಿಲ್ಲ. ಇದಕ್ಕಾಗಿ ಮಧ್ಯಾಹ್ನ ಜನಾರ್ಧನಯ್ಯನ ಹೋಟಲಿನಲ್ಲಿ ಒಂದು ಡೋಜ್ ತೆಗೆದುಕೊಳ್ಳುತ್ತೇನೆ. ನನಗೆ ಬೇಡವಾದರೂ ಇದನ್ನು ತೆಗೆದುಕೊಳ್ಳಲೇಬೇಕು. ಏಕೆಂದರೆ ನನ್ನ ಕೈಕೆಳಗೆ ಕೆಲಸ ಮಾಡುವ ಗುಮಾಸ್ತರುಗಳೆಲ್ಲ 'ಲಂಚ್ ಅವರ್' ನಲ್ಲಿ ತಿಂಡಿಗೆ ಹೋಗುತ್ತಾರೆ. ನಾನೊಬ್ಬನೇ ಕುರ್ಚಿಯ ಮೇಲೆ 'ಪಿಟ ಪಿಟ' ಅನ್ನುತ್ತಾ ಹೇಗೆ ಕುಳಿತಿರಲು ಸಾಧ್ಯ? ಅವರೆಲ್ಲರೂ ಆ ಭಾತು, ಈ ಭಾತು, ನೂರೆಂಟು ಮಾದರಿಯ ವಡೆಗಳನ್ನು ತಿನ್ನುತ್ತಿದ್ದರೆ, ನಾನು ಮಾತ್ರ ಒಂದು ಲೋಟ 'ಎಕ್‌ಸ್ಟ್ರಾ ಸ್ಟ್ರಾಂಗ್' ಕಾಫಿ ಮಟ್ಟಿಗೆ ತೆಗೆದುಕೊಳ್ಳುತ್ತೇನೆ. ಮತ್ತು ಇದನ್ನು ತೆಗೆದುಕೊಳ್ಳುವಾಗ ಹೋಟಲು ತಿಂಡಿಗಳಿಂದ ಆಗುವ ಅನರ್ಥ ಪರಂಪರೆಗಳನ್ನೂ ವಿವರಿಸುತ್ತೇನೆ. ಇಷ್ಟೆಲ್ಲ ತ್ಯಾಗಮಾಡಿದರೂ ಆ ಕಾಫಿಯನ್ನು ನಾನೇಕೆ ಬಿಡಬಾರದೆಂದೂ, ಅದರಿಂದ ತಿಂಗಳಿಗೆ ಇಂತಿಷ್ಟು ಹಣ ಮಿಗಿತಾಯವಾಗುವುದೆಂದೂ ನನ್ನ ಹೆಂಡತಿ ಹೇಳುತ್ತಾಳೆ. ನಿಜಕ್ಕೂ ನನಗೇನೂ ಕಾಫಿಯ ಮೇಲೆ ವ್ಯಾಮೋಹವಿಲ್ಲ. ಆದರೆ ಕೆಳಗುಮಾಸ್ತೆಗಳು ತಿಂಡಿ ತಿನ್ನುತ್ತಿರುವಾಗ ನಾನೊಂದಿಷ್ಟು ಕಾಫಿಯನ್ನಾದರೂ ಬಸಿಮುಕೊಳ್ಳಬಾರದೇ?

ನಾನು ಹೆಡ್ ಗುಮಾಸ್ತೆ ಆಗಿರುವುದು ಒಂದು ಒರಟು ಇಲಾಖೆಯಲ್ಲಿ. ಇಲ್ಲಿ ಸಂಬಳದ ವಿನಾ ಒಂದು ಕಿಲಬು ಕಾಸನ್ನು ಸಹ ಮೇಲೆ ಕಾಣಲು ಸಾಧ್ಯವಿಲ್ಲ. ಪಕ್ಕದ ಮನೆಯವರು ಬೇರೆ ಬೇರೆ ಇಲಾಖೆಗಳಲ್ಲಿದ್ದು, ನನಗಿಂತಲೂ ಕಡಿಮೆ ಸಂಬಳ ತೆಗೆದು ಅದ್ದೂರಿಯಿಂದ ಜೀವನ ನಡೆಸುತ್ತಾರೆ. ನಾನೇಕೆ ಹಾಗೆ ಮಾಡಬಾರದೆಂದೂ, ನಾನು ಅಪ್ರಯೋಜಕನಾದ್ದರಿಂದ ನಾನು ಹಾಗೆ ಮಾಡಲು ಸಾಧ್ಯವಾಗಿಲ್ಲವೆಂದೂ ನನ್ನ ಹೆಂಡತಿ ಮತ್ತು ಮಕ್ಕಳು ಮೂದಲಿಸುತ್ತಾರೆ. ನಾನು ಇಲಾಖೆಯಿಂದ ಇಲಾಖೆಗಿರುವ ವ್ಯತ್ಯಾಸ, ಒಳಮರ್ಮ

ಮುಂತಾದುವನ್ನು ವಿಶದವಾಗಿ ವಿವರಿಸಿದ್ದೇನೆ. ಆದರೆ ಆ ಮೊಂಡು ತಲೆಗಳಿಗೆ ತರ್ಕಬದ್ಧವಾದ ಮಾತುಗಳು ಹಿಡಿಸಬೇಕಲ್ಲ?

ಈ ಖೋತಾವ್ಯಯವಿದ್ದರೂ ನನ್ನ ತ್ಯಾಗದಿಂದಲೋ, ಹೆಂಡತಿಯ ಜಿಪುಣತನದಿಂದಲೋ ಕುಂಟುತ್ತ, ಎಡವುತ್ತ ಸಂಸಾರ ಅಶ್ವ ಸಾಗುತ್ತಿರುತ್ತದೆ. ಆದರೆ ಮನೆಗೆ ಯಾರಾದರೂ ಅತಿಥಿಗಳು ಬಂದರೆಂದರೆ ನಮ್ಮ ತಿಥಿಯೇ ಆಯಿತೆನ್ನಿ! ಏನೋ ತಂಗಳೋ ಮಂಗಳೋ ಇದ್ದದ್ದನ್ನು ಸವರಿಸಿಕೊಂಡು ಆಹಾರಕ್ಕಿಂತಲೂ ಹೆಚ್ಚಾಗಿ ನೀರು ಕುಡಿದು 'ಡುರ್' ಎಂತ ತೇಗಿ, ತಟ್ಟೆಗಳನ್ನು ಬಿಟ್ಟು ಕೈತೊಳೆಯಲು ಏಳುತ್ತೇವೆ. ಈ ಸಂದರ್ಭದಲ್ಲಿ ಒಂದು ರಹಸ್ಯ ನಿಮ್ಮ ನಿಮ್ಮಲ್ಲಿಯೇ ಇರಲಿ. 'ತುಪ್ಪ' ಎಂಬ ಆ ಜಿಡ್ಡು ಪದಾರ್ಥ ನಮ್ಮ ಮನೆಯ ತಲೆಬಾಗಿಲನ್ನು ದಾಟಿ ಅದೆಷ್ಟು ಕಾಲವಾಯಿತು ಎಂಬುದು ನನಗೆ ನೆನಪಿಲ್ಲ. ಕಿಟ್ಟಿ, ಮಾಲೂ ಅಂತೂ ಆ ಪದಾರ್ಥವನ್ನೇ ನೋಡಿಲ್ಲ. ಮೊನ್ನೆ ಮಾಲೂಗೆ ಒಂದು ಲೆಕ್ಕ ಕೊಟ್ಟಿದ್ದರಂತೆ. 'ಒಬ್ಬ ವರ್ತಕನು ಮಣ ಒಂದಕ್ಕೆ ೫೬ ರೂಪಾಯಿನಂತೆ ತುಪ್ಪವನ್ನು ಕೊಂಡರೆ ಅವನಿಗೆ ೧೦ ರೂಪಾಯಿ ಲಾಭ ಬರಬೇಕಾದರೆ ವೀಸೆ ಒಂದಕ್ಕೆ ಹೇಗೆ ಮಾರಬೇಕು?' ಮಾಲು ಕೇಳಿದಳು: 'ಅಣ್ಣಾ! ತುಪ್ಪ ಅಂದರೇನು' ಅಂತ. ನನ್ನ ಕಣ್ಣಿನಲ್ಲಿ ನೀರೂರಿತು. ಈ ಸಂದರ್ಭದಲ್ಲಿ ತುಪ್ಪದ ವಿಷಯ ಏಕೆ ಹೇಳಿದೆನೆಂದರೆ ಮನೆಗೆ ಅತಿಥಿಗಳು ಬಂದಾಗ ನಮ್ಮ ಘನತೆಯನ್ನು ಉಳಿಸಿಕೊಳ್ಳಲು ತುಪ್ಪವನ್ನು ತರಬೇಕಾಗುತ್ತದೆ. ಆ ದಿನ ಮನೆಯಲ್ಲಿ ಸಂಭ್ರಮವೇ ಸಂಭ್ರಮ.

ಮನುಷ್ಯ ಸಮಾಜಜೀವಿಯೆಂದು ಎಲ್ಲರೂ ಹೇಳುತ್ತಾರೆ. ಆದರೆ ನಮಗೂ ಸಮಾಜಕ್ಕೂ ಈಚೀಚೆಗೆ ಬಿಡುಗಡೆ ಆಗಲಾರಂಭವಾಗಿದೆ. ನಮ್ಮ ಆಪ್ತರ ಮನೆಗಳಲ್ಲಿ ಮದುವೆ, ಮುಂಜಿ ಮುಂತಾದ ಶುಭಕಾರ್ಯಗಳಾದರೆ ನಾವು ಹೋಗುವ ಹಾಗಿಲ್ಲ. ಸನ್ಯಾಸಿಯ ಮದುವೆಯಂತೆ ಜುಟ್ಟು ಜನಿವಾರದಿಂದ ಎಲ್ಲವನ್ನೂ ಒದಗಿಸಿಕೊಳ್ಳಬೇಕು. ಹುಡುಗರೆಲ್ಲರಿಗೂ ಲಾಂಗ್‌ಕ್ಲಾತಿನಲ್ಲಿ ಒಂದೊಂದು ಪಾಯಿಜಾಮು, ಎಂಥದೋ ಬಟ್ಟೆಯಲ್ಲಿ ಒಂದೊಂದು ಷರ್ಟ್, ಹುಡುಗಿಯರಿಗೆ ಒಂದೊಂದು ಲಂಗ, ಒಂದೊಂದು ಅಂಗಿ; ಹೆಂಡತಿಗೊಂದು ಸೀರೆ. ಈ ಅವಾಂತರದಲ್ಲಿ ನನ್ನನ್ನು ಕೇಳುವವರೇ ಇಲ್ಲ. ಇನ್ನು ಮದುವೆ ಮುಂಜಿಯೆಂದಮೇಲೆ ಏನಾದರೂ ಉಡುಗೊರೆ ಕೊಡಲೇಬೇಕು. ಹೀಗಾಗಿ ಇದು

ಸಾಧ್ಯವಿಲ್ಲದೆ, ಹೋಗಲೇಬೇಕಾದ ಮನೆಗಳಿಗೆ ಹೋಗಲಾರದೆ, ಬಹಿಷ್ಕಾರಕ್ಕೆ ಒಳಗಾಗಿದ್ದೇವೆ. ಮತ್ತು ಅಕಸ್ಮಾತ್ತಾಗಿ ಹೋದಾಗ, ಏರುಪೇರಾದ ಆಯ ವ್ಯಯ ಪಟ್ಟಿಯನ್ನು ಸರಿದೂಗಿಸಲು ಸುಮಾರು ಐದು ಅಥವಾ ಆರು ತಿಂಗಳುಗಳ ವರೆಗೂ ಕಷ್ಟಪಟ್ಟಿದ್ದೇವೆ.

ಕಳೆದ ವರ್ಷ ನನ್ನ ಹೆಂಡತಿಗೂ, ನನಗೂ ಒಂದು ವ್ಯಾಜ್ಯ ಬಿದ್ದಿತು. ನನಗೆ ಲೆಕ್ಕಾಚಾರ ಸರಿಯಾಗಿ ತಿಳಿಯದೆಂದೂ, ಖರ್ಚುಮಾಡಬಾರದವುಗಳಿಗೆ ನಾನು ವಿಪರೀತ ಖರ್ಚು ಮಾಡುತ್ತೇನೆಂದೂ ಆಕೆ ಸವಾಲು ಹಾಕಿದಳು. "ಸಂಬಳ ಬಂದ ಕೂಡಲೇ ಎಲ್ಲವನ್ನೂ ನಿನ್ನ ಕೈಗೆ ಹಾಕುತ್ತೇನೆ, ನೀನೇ ಎಲ್ಲವನ್ನೂ ನೋಡಿಕೊಳ್ಳಬೇಕು" ಅಂತ ಹೇಳಿದೆ. "ಓಹೋ, ಅದಕ್ಕೇನಂತೆ. ಮೂರು ಹೊತ್ತೂ ಆಫೀಸಿನಲ್ಲಿರುವ ನಿಮಗೆ ಮನೆ ಆಡಳಿತ ಹೇಗೆ ತಿಳಿಯಬೇಕು! ನಾವು ಪ್ರತಿ ನಿಮಿಷವೂ ಅದರಲ್ಲಿಯೇ ತೊಳಲುವವರು, ನಮಗೆಲ್ಲವೂ ಗೊತ್ತು" ಅಂತ ತಲೆಯನ್ನು ಕೊಂಕುಮಾಡಿದಳು. ಆದರಂತೆ ಮಾರನೆಯ ತಿಂಗಳು ಒಂದನೆಯ ತಾರೀಖಿನ ಸಂಜೆ ಸಂಬಳ ಕೊಟ್ಟೆ. ನನ್ನ ಖರ್ಚಿಗೆಂದು ಹತ್ತು ರೂಪಾಯಿಗಳನ್ನು ಮಾತ್ರ ಉಳಿಸಿಕೊಂಡಿದ್ದೆ. ನನ್ನ ಹೆಂಡತಿ ಒಂದು ಬಾರಿ ನನ್ನ ಕಡೆಗೆ ಕೆಟ್ಟ ಕಣ್ಣಿನಿಂದ ನೋಡಿದಳು. "ಹತ್ತು ರೂಪಾಯಿ ಯಾತಕ್ಕೆ? ಐದು ರೂಪಾಯಿ ಸಾಕು, ಇನ್ನೈದು ವಾಪಸುಕೊಡಿ" ಅಂತ ಕೇಳಿದಳು. ಇನ್ನು ಸುಮ್ಮನೇ ಮಾತಿನಿಂದ ಮಾತು ಬೆಳೆಯುತ್ತದೆಂದು ಐದು ರೂಪಾಯಿ ವಾಪಸುಕೊಟ್ಟೆ.

ಆ ತಿಂಗಳು ಆರಂಭದಿಂದ ತಿಳಿಸಾರು, ಅನ್ನ, ನೀರುಮಜ್ಜಿಗೆ ಇವಿಷ್ಟರ ಹೊರತು ಬೇರೆ ಅಡಿಗೆಯಿಲ್ಲ. ಅಪರೂಪಕ್ಕೆ ಒಂದೊಂದು ದಿನ ಸೊಪ್ಪಿನ ಹುಳಿ, ಆ ತಿಂಗಳು ಅಗ್ಗವಾಗಿದ್ದ ಮೂಲಂಗಿ ತಿಂದು ತಿಂದು ಬೇಸರ ಬಂದಿತ್ತು. ತಾನೆರಡು ರವಿಕೆಗಳನ್ನು ಹೊಲಿಸಿಕೊಂಡಿದ್ದಲ್ಲದೆ, ಮಾಲೂಗೆ ಒಂದು ಲಂಗ, ಕಿಟ್ಟಿಗೆ ಒಂದು ಚಡ್ಡಿಯನ್ನೂ ಹೊಲಿಸಿದ್ದಳು. ಯಾವು ಯಾವುದಕ್ಕೆ ಎಷ್ಟೆಷ್ಟು ಕೊಟ್ಟಿದ್ದೀಯೆ ಎಂದು ನಾನು ಕೇಳಲಿಲ್ಲ. ನನಗೆ ಕೊಂಚ ಅನಾನುಕೂಲವಾದರೂ ಮನೆಯಲ್ಲಿ ಶಾಂತಿ ಸ್ಥಾಪಿತವಾಯಿತಲ್ಲ ಎಂದು ಸುಮ್ಮನಾದೆ. ಚಂಡಮಾರುತ ಬರುವ ಮುನ್ನ ಭೀಕರ ಮೌನ ಆವರಿಸುವಂತೆ ಈ ಶಾಂತಿ, ಶಾಶ್ವತ ಶಾಂತಿಯಾಗಲಿಲ್ಲ. ಹದಿನೈದನೆಯ ತಾರೀಖಿನ ಹೊತ್ತಿಗೆ ಹಣವೆಲ್ಲ ಪೋಲಾಗಿದ್ದಿತು.

ಸಾಲದುದಕ್ಕೆ ಪಕ್ಕದ ಮನೆ ವೆಂಕಮ್ಮನವರಿಂದ ಐದು ರೂಪಾಯಿ ಸಾಲ ಬೇರೆ ತಂದಿದ್ದಳು. ನಾನು ಸಹ ಅಕೌಂಟೆಂಟ್ ನರಸಿಂಹಯ್ಯನಿಂದ ಐದು ರೂಪಾಯಿ ಸಾಲ ತೆಗೆದಿದ್ದೆ. ಸಂಸಾರಶಟಕ ತಟಸ್ಥವಾಗಿ ನಿಂತಿತು. ಮಧ್ಯಾಹ್ನಕ್ಕೆ ಗತಿ ಇಲ್ಲವಾಯಿತು. ಈ ಒಂದು ಹೊತ್ತಿಗಾಗಿ ಕಾಯುತ್ತಿದ್ದ ನಾನು ಪೂರಾ ರೇಗಾಡಿದೆ. ನನ್ನ ಯಜಮಾನತ್ವವನ್ನು ಉಳಿಸಿಕೊಂಡೆ. ನರಸಿಂಹಯ್ಯನಿಂದ ತಂದಿದ್ದ ಐದು ರೂಪಾಯಿಗಳಲ್ಲಿ ಮೂರು ರೂಪಾಯಿಗಳನ್ನು ಕೊಟ್ಟು ಒಂದಿಷ್ಟು ಸಾಮಾನು ತರಿಸಿದ್ದಾಯಿತು. ಮತ್ತೆ ಸಂಜೆ ನರಸಿಂಹಯ್ಯನಿಂದಲೇ ಇನ್ನು ಇಪ್ಪತ್ತು ರೂಪಾಯಿ ಸಾಲ ತಂದು ಆ ತಿಂಗಳನ್ನು ಹಾಗೂ ಹೀಗೂ ತಳ್ಳಿದ್ದಾಯಿತು. ಅದೇ ಮೊದಲು, ಅದೇ ಕೊನೆ. ಅಂದಿನಿಂದ ಅವಳು ಆಯವ್ಯಯ ಪಟ್ಟಿಯನ್ನು ಸರಿದೂಗಿಸುವ ಮಹತ್ತರ ಹೊಣೆಗಾರಿಕೆಯನ್ನು ಹೊರುತ್ತೇನೆಂದು ಹೇಳಿಲ್ಲ.

ಎಲ್ಲರಿಗೆ ಇರುವ ಹಾಗೆ ನನಗೆ ದೂರದ ಹಳ್ಳಿಗಳಲ್ಲಿ ನಂಟರಿದ್ದಾರೆ, ಅಣ್ಣ ತಮ್ಮಂದಿರೂ ಇದ್ದಾರೆ. ಜಮೀನು, ಶಾನುಭೋಗತನ ಮಾಡಿಕೊಂಡು ಸುಖವಾಗಿಯೂ ಇದ್ದಾರೆ ಅನ್ನಿ. ನನಗೆ ತಿಂಗಳಿಗೆ ಒಂದು ನೂರಾ ಐವತ್ತು ರೂಪಾಯಿನ ಸಂಬಳ ಬರುತ್ತದೆಂದೂ, ನಾನು ವೈಭವದಲ್ಲಿ ಲೋಲಾಪ್ತಿ ಪಡುತ್ತಿದ್ದೇನೆಂದೂ ಅವರು ಭಾವಿಸಿದ್ದಾರೆ. ಬೆಂಗಳೂರಿನ ಈ ನಮ್ಮ 'ಭವ್ಯ'ಜೀವನ ಅವರಿಗೆ ಅರ್ಥವಾಗಿಲ್ಲ. ಅವರಿವರು ಹೇಳುವ ಮಾತುಗಳು, ಪತ್ರಿಕೆಗಳಲ್ಲಿ ಬರುವ ವರದಿಗಳು ಇವನ್ನು ನೋಡಿ ಅವರು ಮೋಸ ಹೋಗಿದ್ದಾರೆ. ವಿದ್ಯೆ ಕಲಿತು, ದೊಡ್ಡ ನೌಕರಿ ಮಾಡಿ ಹೆಚ್ಚು ಸಂಬಳ ತರುವ ನಾನು, ಅವರಿಗೆ ಯಾವ ವಿಧದಲ್ಲಿಯೂ ನೆರವಾಗುತ್ತಿಲ್ಲವೆಂಬ ಒಂದು ಗೂಬೆಯನ್ನು ನನ್ನ ತಲೆಯ ಮೇಲೆ ಕೂಡಿಸಿದ್ದಾರೆ. ತಾವು ಒಂದು ವರ್ಷಕ್ಕೆ ಕಾಣುವಷ್ಟು ಹಣವನ್ನು ನಾನು ತಿಂಗಳು ತಿಂಗಳಿಗೂ ಕಾಣುತ್ತೇನೆಂದು ಹೇಳುತ್ತಾರೆ. ಅವರಿಗೆ ಬೇಕಾಬಿಟ್ಟಿಯಾಗಿ ಅದೆಷ್ಟೋ ಪದಾರ್ಥಗಳು ದೊರೆಯುತ್ತವೆ. ನಾವು ಪ್ರತಿಯೊಂದಕ್ಕೂ ಹಣವನ್ನು ತೆರಬೇಕೆಂಬುದನ್ನು ಅವರೇನು ಬಲ್ಲರು ? ಬೇಸರವಾಗಿ ಹಸುವಿನ ಸಗಣಿ ತಿನ್ನಬೇಕೆಂದರೆ ಅದಕ್ಕೆ ಸಹ ಮೂರು ಕಾಸನ್ನು ನಾವು ಕೊಡಬೇಕು ! ಈ ನಮ್ಮ ಭವ್ಯಜೀವನದಲ್ಲಿ ಪಾಲ್ಗೊಳ್ಳಲು ಅವರು ನನ್ನ ಮೇಲೆ ಅನೇಕ ಬಾರಿ ದಾಳಿ ಮಾಡಿದ್ದುಂಟು. ಒಂದು ಬಾರಿ ಬಂದವರು ಎರಡನೆಯ ಬಾರಿ ಬರುವ ಸಾಹಸ ಮಾಡಿಲ್ಲ !

ಅನೇಕರು ತಮ್ಮ ಮಕ್ಕಳನ್ನು ನಮ್ಮ ಮನೆಯಲ್ಲಿ ಓದಲು ಬಿಡುವುದಾಗಿ ಬೆದರಿಸಿದ್ದಾರೆ. ಅವರಿಗೆ ಬೇರೆ ಏನೂ ಕಾರಣಗಳನ್ನು ಕೊಡದೆ 'ಹುಡುಗ ನನ್ನ ಕರೆದುಕೊಂಡು ನೀವೂ ಬನ್ನಿ' ಅಂತ ಬರೆಯುತ್ತೇನೆ. ಹುಡುಗ ವಿದ್ಯೆ ಕಲಿಯುವುದಿರಲಿ, ಆಹಾರಾಭಾವದಿಂದ ಎಲ್ಲಿ 'ಗೊಟಕ್' ಅನ್ನುತ್ತಾನೋ ಎಂಬ ದಿಗಿಲಿನಿಂದ ಅವರು ಬೇರೆ ಏರ್ಪಾಟುಗಳನ್ನು ಮಾಡಿಕೊಂಡಿರುವುದೂ ಉಂಟು.

ನಮ್ಮ ಆಯುವ್ಯಯ ಪಟ್ಟಿಯನ್ನು ಸರಿದೂಗಿಸಲು ಅನೇಕ ಬಾರಿ ಸೊಸೈಟಿಗಳಿಂದ ಸಾಲ ತರುವುದು, ಇನ್‌ಷ್ಯೂರೆನ್ಸ್ ಪಾಲಸಿಯನ್ನು ಗಿರವಿ ಇಟ್ಟು ಸಾಲ ತರುವುದು, ಮುಂತಾದುವನ್ನೂ ಮಾಡಿದ್ದೇನೆ. ಅದೇನೋ ಆ ಒಂದು ತಿಂಗಳು ಮಾತ್ರ ಅದು ಸರಿಹೋಗಿ ಮತ್ತೆ ಮುಂದಿನ ತಿಂಗಳು, ಲಳಿಗೆಯಲ್ಲಿ ಹಾಕಿರುವ ನಾಯಿಯ ಬಾಲವಂತೆ ನೆಟ್ಟಗಿದ್ದು ಲಳಿಗೆ ತೆಗೆದ ಕೂಡಲೇ ಡೊಂಕಾಗುವಂತೆ ನಮ್ಮದೂ ಮೊದಲಿನಂತೆ ಖೋತಾ ಆಗುತ್ತಿತ್ತು.

ಬ್ರಹ್ಮನು ಎಲ್ಲರಿಗೂ 'ಲಲಾಟ ಲಿಖಿತ' ಬರೆದರೆ ನಮ್ಮಂಥ ನೌಕರರಿಗೆ 'ಅಲಾಟ (Allotment) ಲಿಖಿತ' ಎಂಬುದೊಂದು ಉಂಟು. ಚಾತಕ ಪಕ್ಷಿಯ ಹಾಗೆ ಅದಕ್ಕಾಗಿ ಕಾದಿರುತ್ತಿದ್ದೆವು. ನಮ್ಮ ಹಾಗೆಯೇ ಅನೇಕ ಸಾಲಗಳು ಹುಲಿಯ ಹಾಗೆ ಬಾಯಿ ತೆಗೆದುಕೊಂಡು ಅದಕ್ಕಾಗಿಯೇ ಕಾದಿರುತ್ತಿದ್ದುವು ಅನ್ನಿ. ಈ 'ಅಲಾಟ'ದ ಹೆಸರು ಹೇಳಿ ನೂರೆಂಟು ಕಡೆ ಕೈಗಡ ಕಟ್ಟುಗಡಗಳನ್ನೂ ತಂದಿರುತ್ತಿದ್ದೆವು. ಅದು ಬಂದ ತಿಂಗಳು ನಮ್ಮನ್ನು ಹಿಡಿಯುವವರೇ ಇಲ್ಲ. ಮನೆಯಲ್ಲಿನ ಎಲ್ಲರೂ ಕಾಗದ ಪೆನ್ಸಿಲ್ ತೆಗೆದುಕೊಂಡು ತಮಗೆ ಅಗತ್ಯವಾಗಿ ಬೇಕಾದ, ಬೇಕಾಗಬಹುದಾದ ಬಾಣಂತಿ ಖಾರದ ಪಟ್ಟಿಯಂಥ ಉದ್ದನೆಯ ಪಟ್ಟಿಗಳನ್ನೇ ಬರೆದಿಟ್ಟುಕೊಂಡಿರುತ್ತಿದ್ದರು. ಬಹು ಕ್ಷುದ್ರಪ್ರಾಣಿಗಳೆನಿಸಿದಂಥ ಇರುವೆಗಳು ಮುಂಬರುವ ಮಳೆಗಾಲಕ್ಕೆಂದು ಕೂಡಿಡುತ್ತವೆ. ವಿದ್ಯೆ, ಬುದ್ಧಿಯುಳ್ಳ ಮನುಷ್ಯರಾದ ನಾವು ಏಕೆ ಕೂಡಿಡಬಾರದು? ಎಂಥ ಆಪತ್ತು ವಿಪತ್ತುಗಳು ಕಾದಿರುತ್ತವೆಯೋ ಯಾರು ಬಲ್ಲರು? ನಿಜ, ಮಾಧ್ಯಮಿಕ ಶಾಲೆಯ ಉಕ್ತಲೇಖನದ ಈ ಶೀರ್ಷಿಕೆಗಳು ನಮಗೂ ನೆನಸಿವೆ, ಆದರೆ ಇದನ್ನು ಕಾರ್ಯರಂಗಕ್ಕೆ ತರಲು ಆಗುತ್ತಿಲ್ಲ ಅಷ್ಟೆ.

ಜ್ಯೋತಿಷ್ಯ, ವೈದ್ಯಕೀಯ ವಿಚಾರಗಳ ಬಗ್ಗೆ ಮಾತನಾಡದವರಾರು? ತಲೆ ನೋಯುತ್ತದೆಂದರೆ ಇಂಥ ಔಷಧಿ ತೆಗೆದುಕೊಳ್ಳಿ, ಇಂಥ ಮಾತ್ರೆ ತೆಗೆದು

ಕೊಳ್ಳಿ ಎಂದು ಯಾರನ್ನು ಕೇಳಿದರೂ ಹೇಳುತ್ತಾರೆ. ಮೈ ಮೇಲೆ ಹಲ್ಲಿಯೋ ಜಿರಲೆಯೋ ಬಿದ್ದಿತೆಂದು ಹೇಳಿದರೆ ಅದರ ಕೆಟ್ಟ ಅಥವಾ ಒಳ್ಳೆಯ ಫಲಗಳನ್ನು ಹೇಳುತ್ತಾರೆ. ಹೀಗೆ ಸಂಸಾರ ಸಾಗಿಸುವಿಕೆಯ ಬಗ್ಗೆಯೂ ಕಿವಿ ಚಿಟ್ಟು ಹಿಡಿಯು ವಂಥ ಭಾಷಣಗಳನ್ನು ಕೇಳಿದ್ದೇನೆ. "ನೀವು ಕೊಡುವ ಮನೆ ಬಾಡಿಗೆ ಹೆಚ್ಚು, ಬೇರೆ ಎಲ್ಲಿಯಾದರೂ ಚಿಕ್ಕದೊಂದು ಮನೆ ನೋಡಿ" ಅಂತ ನನ್ನ ಸೋದರತ್ತೆ ಯಾರದೋ ಮದುವೆಯ ಮನೆಗೆ ಹೋದಾಗ ಹೇಳಿದರು. ನಾನು ಅವರ ಸಲಹೆಗೆ ಉತ್ತರ ಕೊಡುವ ಗೋಜಿಗೆ ಹೋಗಲಿಲ್ಲ. ಆ ಸಂಜೆ ಅವರನ್ನು ನಮ್ಮ ಮನೆಗೆ ಕರೆದುಕೊಂಡು ಬಂದು ಮನೆಯನ್ನು ಒಂದೂವರೆ ನಿಮಿಷದಲ್ಲಿ ಆದ್ಯಂತವಾಗಿ ತೋರಿಸಿದೆ. ಅಂದಿನಿಂದ ಅವರು ಯಾವ ಸಲಹೆಯನ್ನೂ ಕೊಡುವ ಶ್ರಮ ತೆಗೆದುಕೊಂಡಿಲ್ಲ. ಇನ್ನೊಬ್ಬ ದೂರದ ಬಂಧುವು ನಮ್ಮ ಮನೆಯಲ್ಲಿ ಹದಿನೈದು ದಿನ ಇದ್ದು ನಾನು ಹೇಗೆ ಮಿತಿಯಿಂದ ಸಂಸಾರ ಸಾಗಿಸಬೇಕೆಂಬ ಬಗ್ಗೆ ಒಂದು ಉಪನ್ಯಾಸ ಕೊಟ್ಟ. ನಮ್ಮಂತವರು ಯಾರನ್ನೂ ಹತ್ತಿರ ಸೇರಿಸಬಾರದೆಂದೂ ನನಗೆ ಕಿವಿ ಮಾತು ಹೇಳಿದ. ನಿಜಕ್ಕೂ ಆತ ಆ ತಿಂಗಳು ಹದಿನೈದು ದಿನ ಇದ್ದದ್ದರಿಂದ ನಮ್ಮ ಆಯವ್ಯಯ ಪಟ್ಟಿ ಆ ತಿಂಗಳು ಬುಡಮೇಲಾಯಿತೆಂಬುದು ನಮಗೆ ಗೊತ್ತು. ಅವನು ಈ ಸಲಹೆ ಸೂಚನೆಗಳನ್ನು ಕೊಡುವುದರ ಬದಲು ಬೇರೆ ಕಡೆ ಇಳಿದುಕೊಂಡಿದ್ದರೆ ಒಳಿತಾಗುತ್ತಿತ್ತೆಂದೂ ನಾವು ಭಾವಿಸಿದೆವು.

ಜೀವನವೇ ನಿತ್ಯ ನಿರಂತರ ಹೋರಾಟವೆಂದು ಕವಿಯೊಬ್ಬ ಹೇಳಿದ್ದಾನೆ. ಈ ಹೋರಾಟದಲ್ಲಿಯೇ ಸುಖ ಅಡಗಿರುವುದೆಂದೂ ಹೇಳಿದ್ದಾನೆ. ನಮ್ಮಂಥವರಿ ಗಂತೂ ಈ ಹೋರಾಟ ದೈವದತ್ತವಾದ ಹಕ್ಕಾಗಿದೆ, ಅದರ ಪೂರ್ಣ ಲಾಭವನ್ನು ಪಡೆಯುವುದರಲ್ಲಿಯೇ ನಮ್ಮ ಬುದ್ಧಿವಂತಿಕೆ ಇರುವುದು. ದಾಸವರ್ಯರಾದ ಪುರಂದರದಾಸರು 'ಈಸಬೇಕು, ಇದ್ದು ಜೈಸಬೇಕು' ಅಂತ ಹಾಡಿದ್ದಾರೆ. ಎಷ್ಟೋ ತಿಂಗಳು ಬಂದಿವೆ, ಹೋಗಿವೆ, ಇನ್ನು ಬರುವವು ಎಷ್ಟೋ ಇವೆ. ಅದ ಕ್ಕೇಕೆ ವೃಥಾ ತಲೆ ಕೆಡಿಸಿಕೊಳ್ಳಬೇಕು ? ಕಾಲಮಾನ ಪರಿಸ್ಥಿತಿ ಹೀಗೆಯೇ ಇರುತ್ತದೆಂಬ ದುಸ್ವಪ್ನವನ್ನೇಕೆ ಕಾಣಬೇಕು ? ಒಳ್ಳೆಯ ಕಾಲ ಬರಬಹುದು, ನಮ್ಮ ಪರಿಸ್ಥಿತಿ ಸುಧಾರಿಸಬಹುದು ಎಂಬ ಹೊಂಗನಸು ಕಾಣೋಣ.

# ಉಡುಗೊರೆ

ಅಂದು ನರಕ ಚತುರ್ದಶಿ ಸಾಯಂಕಾಲ. ಮಾರನೇ ದಿನವೇ ಅಮಾವಾಸ್ಯೆ, ದೀಪಾವಳಿ ; ದೆಪ್ಪನಂಥ ದೊಡ್ಡ ಹಬ್ಬ. ಹೆಂಡತಿ ತೌರೂರಿಗೆ ಹೋಗುವ ಮುನ್ನ ದಿವ್ಯ ಸಂದೇಶ ಬೀರಿಯೇ ಹೋಗಿದ್ದಳು. "ಹೇಗೂ ನಾನು ಎರಡು ತಿಂಗಳು ಊರಿನಲ್ಲಿ ಇರೋಲ್ಲ. ಸುಮ್ಮನೇ ದುಡ್ಡನ್ನೆಲ್ಲಾ ಹಾಳುಮಾಡಬೇಡಿ. ಒಂದು ಒಳ್ಳೆಯ ಸೀರೆಯನ್ನಾದರೂ ತೆಗೆಯಿರಿ. ಈಗಿರುವ ನಾಲ್ಕು ಸೀರೆಗಳಲ್ಲಿ ಒಂದು ಮೈ ಮೇಲೆ, ಒಂದು ಗಳುವಿನ ಮೇಲೆ, ಒಂದು ಗೌರಿ ಹಬ್ಬದ ದಿನಕ್ಕೆ ಉಡುವ ಹಳೇ ಜರತಾರಿ ಸೀರೆ, ಇನ್ನೊಂದು ಸಿನಿಮಾಕ್ಕೆ ಹೋಗುವಾಗ ಉಡುವ ವಾಯಿಲ್ ಸೀರೆ. ಪಕ್ಕದಮನೆ ಪದ್ಮನ್ನಸಿಗೆ ಎಷ್ಟು ಸೀರೆಗಳಿವೆ ನಿಮಗೆ ಗೊತ್ತೆ?" ಎಂದು ಕೇಳಿದಳು. ಇದಕ್ಕೆ ನಾನು ಯಾವ ಉತ್ತರ ಕೊಡಬೇಕು ? ಏರ್‌ಕ್ರಾಫ್ಟ್‌ನಲ್ಲಿ ಕೆಲಸಕ್ಕಿರುವ ನನಗೆ ಸೂರ್ಯ ದರ್ಶನವೇ ಇಲ್ಲ. ಸೂರ್ಯೋದಯಕ್ಕೆ ಮುಂಚೆ ಎದ್ದು ಕೆಲಸಕ್ಕೆ ಹೋಗುತ್ತೇನೆ. ಸೂರ್ಯೋದಯಾನಂತರ ಮನೆಗೆ ವಾಪಸು ಬರುತ್ತೇನೆ. ಇನ್ನು ಪದ್ಮನ್ನನಲ್ಲಿ ಎಷ್ಟು ಸೀರೆಗಳಿವೆ ಎನ್ನುವ ಲೆಕ್ಕವನ್ನಾದರೂ ನಾನು ಹೇಗೆ ಇಡಬೇಕು ? ಅಂತೂ ಕೆಲವು ಸಾರಿ ಹೆಂಗಸರು ಅತಿ ವಿಚಿತ್ರ ಪ್ರಶ್ನೆಗಳನ್ನು ಕೇಳುತ್ತಾರೆ. "ಅಲ್ವೇ, ಅವರಲ್ಲಿ ಎಷ್ಟು ಸೀರೆಗಳಿವೆ ಅನ್ನೋದು ನನಗೆ ಹೇಗೆ ತಿಳಿಯಬೇಕು ?" "ಅದಕ್ಕಲ್ಲ ನಾನು ಹೇಳಿದ್ದು. ಅವರಲ್ಲಿ ತುಂಬಾ ಸೀರೆಗಳಿವೆ. ಸಾಲದ್ದಕ್ಕೆ ಮೊನ್ನೆ ತಾನೆ ಎರಡು ಮೂಟೆಸೀರೆ ಕೊಂಡುಕೊಂಡ್ರು. ಅವರ ಪುಣ್ಯ ನನಗೆಲ್ಲಿಂದ ಬಂತು ?" ಅಂತ ಹೇಳುತ್ತ ದೀರ್ಘ ನಿಟ್ಟುಸಿರೊಂದನ್ನು ಬಿಟ್ಟಳು. ಚಂಡಮಾರುತ ಬರುವ ಮುನ್ನ ಭೀಕರ ಮೌನ ಆವರಿಸುವಂತೆ, ಈ ನಿಟ್ಟುಸಿರು ನನ್ನ ಎದೆಗುಂಡಿಗೆಯನ್ನೇ ಅಲುಗಿಸಿತು. ಮತ್ತು ಸಾಮಾನ್ಯವಾಗಿ ಇಂಥ ನಾಟಕಗಳು ದುರಂತವಾಗಿ ಪರಿಣಮಿಸಿದ ಅನುಭವಗಳ ಕಹಿ ನೆನಪು ನನ್ನ ಚಿತ್ತಭಿತ್ತಿಯ ಮೇಲೆ ಅಚ್ಚೊತ್ತಿಯದೆ ಉಳಿದಿದೆ. ಇಂದು ಮತ್ತೆ ಅಂಥ ದುರಂತ ನಾಟಕ ಮರುಕಳಿಸದಿರಲೆಂದು

ಕುರಿಯಂತೆ ತಲೆಹಾಕಿದೆ.

ಒಂದು ವಿಷಯ ನನ್ನ ಎದೆಗೆ ಶೂಲದಂತೆ ನಾಟಿತು, ನನ್ನ ಮುರುಕು ಪೆಟ್ಟಿಗೆಯಲ್ಲಿದ್ದ ನನ್ನ ಬಟ್ಟೆಬರೆ ನೆನೆಸಿಕೊಂಡು. ನನಗೆ ಇರುವವು ಎರಡು ಇಜಾರಗಳು. ಅವು ತೀರ ಸಡಿಲವಾಗಿ ಈಗ 'ಇಳಿಜಾರ'ಗಳಾಗಿವೆ. ಒಂದೆರಡು ಕಡೆ ತೇಪೆಗಳೂ ಆವಕ್ಕಿವೆ. ಇರುವ ಎರಡು ಷರ್ಟುಗಳೂ ಸಹ ಆ 'ಇಳಿಜಾರ'ಗಳೊಂದಿಗೆ ತೀವ್ರ ಸ್ಪರ್ಧೆ ನಡೆಸುತ್ತಿವೆ. ಅವು ಯಾವಾಗ 'ಪರ್' ಅನ್ನುತ್ತವೆಯೋ ಎಂಬ ದಿಗಿಲು ನನ್ನನ್ನು ಬಾಧಿಸುತ್ತಿದೆ.

ನನ್ನ ಹೆಂಡತಿಯ ಟ್ರಂಕಿನಲ್ಲಿ ರವಿಕೆಗಳೆಷ್ಟಿವೆ ಎಂಬ ಲೆಕ್ಕ ಅವಳಿಗೇ ತಿಳಿಯದು. ಪ್ರತಿ ತಿಂಗಳೂ ಒಂದೊಂದು ಜೊತೆ ಹೊಲಿಸುತ್ತಾಳೆ ಅಂತ ಹೇಳಿದರೆ ಅತ್ಯುಕ್ತಿಯ ದೋಷ ತಟ್ಟಲಾರದು. ಅವಳ ಬಟ್ಟೆಯ ದಾಹ ನೋಡಿ ನನಗೆ ತುಂಬಾ ಚಿಂತೆಯಾಗಿ ಡಾಕ್ಟರಿಗೆ ಹೇಳಿದೆ. ಅವರು ಸುಮ್ಮನೆ ತಲೆ ಅಲುಗಾಡಿಸಿದರು.

ಅಂದು ಸಂಜೆ ಯಾವ ಬಟ್ಟೆ ಅಂಗಡಿ ನೋಡಿದರೂ ಜನಗಳು ತುಂಬಿದ್ದರು. 'ಸೀರೆ ತನ್ನಿ' ಅಂತ ನನ್ನ ಹೆಂಡತಿಯೇನೋ ಹೇಳಿದ್ದಳು. ಆದರೆ ಸೀರೆ ಹೇಗಿರಬೇಕು? ಬೆಲೆ ಎಷ್ಟಿರಬೇಕು – ಮುಂತಾದ ವಿವರಗಳನ್ನು ಆಕೆ ನನಗೆ ತಿಳಿಸಿರಲಿಲ್ಲ. ಸುಮ್ಮನೆ 'ಒಳ್ಳೆಯದು' ಅಂದರೆ, ಅದಕ್ಕೆ ವಿವರಣೆ ಯಾದರೂ ಏನು? ಅಲ್ಲದೆ ಗಂಡಸರು ಎಂಥ ಸೀರೆ ತಂದರೂ ಹೆಂಗಸರು ಅದನ್ನು ಒಪ್ಪುವುದೇ ಇಲ್ಲ. 'ಇದರ ಒಡಲು ಹೀಗಿರಬಾರದು, ಅಂಚು ಹೀಗಿರಬೇಕಿತ್ತು, ನೀವು ಕೊಟ್ಟ ಬೆಲೆ ತುಂಬಾ ಹೆಚ್ಚು, ಯಾರೋ ನಿಮಗೆ ಟೋಪಿ ಹಾಕಿದ್ದಾರೆ' ಎಂಬ ಮಾತುಗಳನ್ನು ಕೇಳಿದ ಅನುಭವವೂ ನನಗಿತ್ತು. ಆದರೂ ಸಾಹಸ ಮಾಡಿ ಅಂಗಡಿಯವನೊಂದಿಗೆ ಹೋರಾಡಿ ಒಂದು 'ಒಳ್ಳೆಯ' ಸೀರೆಯನ್ನೇ ಇಪ್ಪತ್ತಾರೂಕಾಲು ರೂಪಾಯಿ ಕೊಟ್ಟು ಪಡೆದು, ಅಂಗಡಿಯಿಂದ ಹೊರಬಿದ್ದೆ. ನಾನು ಹೊರಗೆ ಬರುವುದಕ್ಕೂ ರಾಜು ಸಿಕ್ಕುವುದಕ್ಕೂ ಸರಿ ಹೋಯಿತು. "ಹಲೋ" ಅಂದ. ನಾನೂ "ಹಲೋ" ಅಂತ ಉತ್ತರ ಕೊಟ್ಟೆ. 'ಹಲೋ' ಅನ್ನುವುದು 'ಎಲೋ' ಅನ್ನುವುದರ ರೂಪಾಂತರ ಎಂದು ನನ್ನ ಪಂಡಿತ ಮಿತ್ರನೊಬ್ಬ ಮೊನ್ನೆ ಹೇಳಿದ. ರಾಜು ಚಿತ್ರದುರ್ಗ ಜಿಲ್ಲಾ ಕಚೇರಿಯಲ್ಲಿ ಕೆಲಸಕ್ಕಿದ್ದ. ಅಲ್ಲಿ ಪಾನ ನಿರೋಧ ಜಾರಿಗೆ ಬರುತ್ತದೆಂಬ ಅಂತ

ತಿಳಿದೊಡನೆಯೇ ಬೆಂಗಳೂರಿಗೆ ವರ್ಗಮಾಡಿಸಿಕೊಂಡ. ಸಾಯಂಕಾಲದ ಹೊತ್ತಿನಲ್ಲಿ ಅವನನ್ನು ತಾಗುವುದು ಅಪಾಯ ಎಂಬುವುದು ಕೆಲವಾರು ಕಹಿ ಅನುಭವಗಳಿಂದ ನನಗೆ ವೇದ್ಯವಾಗಿತ್ತು. ಹೇಗಾದರೂ ಮಾಡಿ ನುಣುಚಿ ಕೊಳ್ಳಬೇಕೆಂದು ನೂರಾರು ಸಬೂಬುಗಳನ್ನು ಹೇಳಿದೆ. ಅವನು ಪ್ರತಿ ಸಬೂಬಿಗೂ ಒಂದು ಜವಾಬನ್ನು ಸಿದ್ಧಪಡಿಸಿಕೊಂಡಿದ್ದ. ಕೊನೆಗೆ ಅದೃಷ್ಟದ ಮೇಲೆ ಭಾರಹಾಕಿ ಅವನ ಬೆನ್ನುಬಿದ್ದೆ.

ರಾಜೂನ ಗನ್ತ್ಯಸ್ಥಾನವೇನೆಂಬುದನ್ನು ಮೊದಲೇ ಊಹಿಸಿದ್ದೆ. 'ಡಿಲೈಟ್ ಬಾರ್'ಗೆ ಕರೆದುಕೊಂಡು ಹೋದ. "ನೋಡಪ್ಪಾ ರಾಜು, ಬೀರ್ ವಿನಹ ನಾನು ಏನನ್ನೂ ಮುಟ್ಟುವುದಿಲ್ಲ, ನೀನು ಆಮೇಲೆ ನಿಷ್ಠೂರ ಮಾಡಬೇಡ. ನೀನು ಸಹ ಸ್ವಲ್ಪ ಆಳತೆಯ ಮೇಲೆ ಇರು. ತೀರಾ ಹತೋಟಿ ತಪ್ಪಿತೆಂದರೆ ತಾಪತ್ರಯಕ್ಕಿಟ್ಟುಕೊಳ್ಳುತ್ತೆ" ಅಂತ ಅಂಗಲಾಚಿದೆ. "ನೀನು ಏನೂ ಯೋಚನೆ ಮಾಡಬೇಡ ಕಿಟ್ಟೂ, ಈಗ ಪೂರಾ ಕಡಿಮೆ ಮಾಡಿದ್ದೇನೆ. ಆದರೂ ಹತ್ತಾರು ವರ್ಷ ಕಲಿತ ಅಭ್ಯಾಸಾನ 'ಏಕ್‌ದಮ್' ಬಿಡುವುದಾದರೂ ಹೇಗೆ? ಏನೋ ಅಪರೂಪಕ್ಕೆ ಒಂದೊಂದು ಸಾರಿ – ಅದೂ ನಿನ್ನಂಥ ಹಳೆಯ ಸ್ನೇಹಿತರು ಸಿಕ್ಕರೆ, ಅಷ್ಟೇ" ಎಂತ ನನಗೆ ಅಭಯ ನೀಡಿದ.

ದಾರೀ ಉದ್ದಕ್ಕೂ ಕುಡಿತದಿಂದಾಗುವ ಹಾನಿ – ಸಾಮಾಜಿಕವಾಗಿ, ಆರ್ಥಿಕವಾಗಿ, ದೈಹಿಕವಾಗಿ – ಕುಡಿತವನ್ನು ಹೇಗೆ ಬಿಡುವುದು, ಮುಂತಾದ ವಿಚಾರಗಳ ಬಗ್ಗೆ ಪುಟ್ಟದೊಂದು ಭಾಷಣವನ್ನೇ ಮಾಡಿದೆ.

"ಕಿಟ್ಟೀ, ಮನಸ್ಸಿಗೆ ಮೀರಿದ್ದು ಈ ಪ್ರಪಂಚದಲ್ಲಿ ಯಾವುದೂ ಇಲ್ಲ. ಏನೋ ಕೆಟ್ಟ ಸಹವಾಸದಿಂದ ಇದು ಅಂಟಿತಯ್ಯಾ. ಬಿಟ್ಟುಬಿಡಬೇಕು ಅಂತ ನಿರ್ಧಾರ ಮಾಡಿದ್ದೇನೆ" ಅಂದ. "ಗಟ್ಟಿಮನಸ್ಸು ಮಾಡಿ ಬಿಟ್ಟುಬಿಡು, ನೀನು ಬೇರೇ ಮನುಷ್ಯನೇ ಆಗುತ್ತೀಯ. ನೀನು ವಿದ್ಯಾವಂತ, ಬುದ್ಧಿವಂತ. ಅದೊಂದು ಹಾಳು ದುರ್ಗುಣದಿಂದ ನಿನ್ನ ಬುದ್ಧಿಗೇ ಗ್ರಹಣ ಹಿಡಿದಿದೆ" ಅಂತ ನಾನು ದನಿಗೂಡಿಸಿದೆ.

ಸರಿ, ವೇಟರ್ ಬಂದ. ರಾಜು ಎರಡು ಬಾಟ್ಲ್ ಬೀರ್ ಹೇಳಿದ. "ಒಂದೇ ಸಾಕಯ್ಯ" ಅಂದೆ. ನನ್ನ ಮಾತು ಅವನ ಕಿವಿಯ ಮೇಲೆ ಬಿದ್ದಂತೆ ಕಾಣಲಿಲ್ಲ. ಎಮ್ಮೆ ಕಲಗಚ್ಚು ಕುಡಿದ ಹಾಗೆ 'ಸುರ್, ಸುರ್' ಅಂತ ಬೀರ್

ಹೀರಲಾರಂಭಿಸಿದೆವು. ಇಬ್ಬರೂ ನಮ್ಮ ನಮ್ಮ ತಾಪತ್ರಯಗಳನ್ನು, ಗೋಳು ಗರೆಗಳನ್ನು ವಿನಿಮಯ ಮಾಡಿಕೊಂಡೆವು. ನಾನು ಒಂದು ಗ್ಲಾಸ್ ಬೀರ್ ಮಾತ್ರ ತೆಗೆದುಕೊಂಡು, ಸೀಸೆಯಲ್ಲಿದ್ದುದನ್ನೆಲ್ಲಾ ಅವನ ಗ್ಲಾಸಿಗೆ ಸುರಿದೆ.

"ಇದೇನಯ್ಯ! ಇವನ್ನು ಎಷ್ಟು ಕುಡಿದರೂ ಅಷ್ಟೇ. ಎಮ್ಮೆ ಮೇಲೆ ಮಳೆ ಹುಯ್ದಂತೆ ಇದರಿಂದ ಯಾವ ಪ್ರಯೋಜನವೂ ಆಗುವುದಿಲ್ಲ. ಅಲ್ಲದೆ ನೀನು ಸಿಕ್ಕೋದು ಅಂದರೆ ದೇವರು ಪ್ರತ್ಯಕ್ಷವಾಗುವ ಹಾಗೆ" ಎಂದು ಹೇಳುತ್ತ ವೇಟರನನ್ನು ಕೂಗಿದ. ನನ್ನ ಪ್ರತಿಭಟನೆ ಅವನ ಕಿವುಡು ಕಿವಿಯ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲಿಲ್ಲ. ನಾನು ಮಾತ್ರ ಅದು ಯಾವ ಕೆಟ್ಟ ಧೈರ್ಯವನ್ನೋ ತಂದುಕೊಂಡು ನನ್ನ ಮುಂದುಗಡೆ ತಂದಿರಿಸಿದ ಗ್ಲಾಸು ಗಳನ್ನೆಲ್ಲಾ ಅವನ ಮುಂದೆ ತಳ್ಳಿದೆ. ಅಗಸ್ತ್ಯ ಋಷಿಗಳು ಸಮುದ್ರವನ್ನೇ ಏಕಾಪೋಶನ ತೆಗೆದುಕೊಂಡಂತೆ, ರಾಜೂನು ತೆಗೆದುಕೊಂಡ.

ಮೊದಲು ಅಚ್ಚಕನ್ನಡದಲ್ಲಿ, ತಿಳಿಗನ್ನಡದಲ್ಲಿ ಮಾತನಾಡುತ್ತಿದ್ದವನು ಇಂಗ್ಲೀಷ್, ಉರ್ದು ಭಾಷೆಗೆ ಇಳಿದ. ಕೊನೆಗೆ ತಮಿಳಿನಲ್ಲಿಯೂ ಮಾತನಾಡ ತೊಡಗಿದ. R. M. D. C. ಕ್ರಾಸ್‌ವರ್ಡ್ ಪಜಲ್‌ನಲ್ಲಿ ಹತ್ತು ಸಾವಿರ ರೂಪಾಯಿ ಬಂದರೆ, ನನಗೆ ಐದು ಸಾವಿರ ರೂಪಾಯಿ ಕೊಡುವುದಾಗಿ ಹೇಳಿದ. ಈಗ ಅವನ ಗಂಟಲು ತಾರಕಹಂತಕ್ಕೆ ಏರಿತು. ನನ್ನ ಬುದ್ಧಿವಾದ ಅರಣ್ಯ ರೋಧನವಾಯಿತು. ಕೊನೆಗೆ ಬಾರ್ ಮಾಲೀಕನೇ ಬಂದು, ನನ್ನನ್ನು ಅಚೆ ಕರೆದು ರಾಜುವನ್ನು ಸಾಗಿಸಿಕೊಂಡು ಹೋಗಲು ಸುಗ್ರೀವಾಜ್ಞೆ ಇತ್ತ. ಬಿಲ್ ಬಂತು. ಇಪ್ಪತ್ತೊಂಭತ್ತು ರೂಪಾಯಿ! ರಾಜು ಹತ್ತಿರ ಇಪ್ಪತ್ತು ರೂಪಾಯಿ ಮಾತ್ರ ಇತ್ತು. ಒಂಭತ್ತು ರೂಪಾಯಿ ತೆರಬೇಕಾದ ಸುಸಂದರ್ಭ ಒದಗಿತು.

ಒಂದು ಜಟಕಾ ಗೊತ್ತುಮಾಡಿದೆ. ಇಬ್ಬರು ವೇಟರ್‌ಗಳ ಸಹಾಯ ದಿಂದ ರಾಜುವನ್ನು ಗಾಡಿಯಲ್ಲಿ ಹೊತ್ತು ಹಾಕಿದೆ. ರಾಜು ಸಿನಿಮಾ ಟ್ಯೂನ್ ಗಳನ್ನೆಲ್ಲಾ ಒಟ್ಟೊಟ್ಟಿಗೇ ಸೇರಿಸಿ ಹಾಡುತ್ತಿದ್ದ.

ರಾಜೂನ ಮನೆ ಬಂದಿತು. ಜಟಕಾದವನಿಗೆ ಒಂದೂವರೆ ರೂಪಾಯಿ ಕೊಟ್ಟು, ರಾಜೂನ್ನ ಕೆಳಗಿಳಿಸಿದೆ. ಅವರ ಮನೆಯ ಕದವನ್ನು ಹತ್ತು ನಿಮಿಷ ತಟ್ಟಿದ್ದಾಯಿತು. ಬಾಗಿಲು ತೆರೆಯಿತು. ಅವನ ತಾಯಿ – ವಿಧವೆ – ಹೊರ ಬಂದರು. ಅವರು ನನ್ನನ್ನು ನೋಡಿದ ನೋಟದಿಂದ, ಈ ಅನರ್ಥಕ್ಕೆಲ್ಲಾ

ನಾನೇ ಕಾರಣ ಎಂಬ ಸಿದ್ಧಾಂತಕ್ಕೆ ಬಂದಂತಿತ್ತು. ಫಟಕ್ಕನೆ ಹೇಳಿದೆ "ನೋಡಿ, ನಾನು ಚಿಕ್ಕಪೇಟೆಗೆ ಹೋಗಿ ಮನೆಗೆ ಬರುತ್ತಿದ್ದೆ. ಗುಟ್ಟಹಳ್ಳಿ ದೊಡ್ಡ ಚರಂಡೀ ಕಟ್ಟೆ ಮೇಲೆ ರಾಜು ಈ ಅವಸ್ಥೇಲಿ ಮಲಗಿದ್ದ. ಕರೆದುಕೊಂಡು ಬಂದಿದ್ದೇನೆ" ಅಂತ. ತಕ್ಷಣವೇ ಅವರು ನನಗೆ ಆರು ಗಂಡು, ಆರು ಹೆಣ್ಣು ಮಕ್ಕಳಾಗಲೆಂದು ಆಶೀರ್ವದಿಸಿದರು. ಅವರ ಗಂಟೇನು ಹೋಗುತ್ತೆ ಹೇಳಿ!

"ಸೀರೆ ತಂದಿದ್ದೇನೆ" ಅಂತ ರಾಜು ಹೇಳುತ್ತ ವೃತ್ತಪತ್ರಿಕೆಯ ಹಾಳೆಯಲ್ಲಿ ಸುತ್ತಿದ್ದ ಸೀರೆಯ ಪೊಟ್ಟಣವನ್ನು ಜೇಬಿನಿಂದ ಹೊರಕ್ಕೆ ತೆಗೆದ. ಅಷ್ಟು ಹೊತ್ತಿಗೆ ರಾಜೂನ ಹೆಂಡತಿ ಕಮಲಮ್ಮ ಕಣ್ಣುಜ್ಜಿಕೊಳ್ಳುತ್ತ ಕೋಣೆಯಿಂದ ಹೊರಬಂದರು. ಕ್ಷಣಾರ್ಧದಲ್ಲಿ ವಿದ್ಯಮಾನಗಳನ್ನು ಅರ್ಥಮಾಡಿಕೊಂಡರು. "ಏನೋ ದೇವರು ಬಂದ ಹಾಗೆ ಇವರು ಕರೆದುಕೊಂಡು ಬಂದ್ರು" ಅಂತ ರಾಜೂನ ತಾಯಿ ಹೇಳಿದರು.

"ಒಂದು ನಿಮಿಷ ಕುಳಿತುಕೊಳ್ಳಿ, ಕಾಫೀ ಮಾಡಿಕೊಂಡು ಬರುತ್ತೇನೆ" ಅಂತ ಕಮಲಮ್ಮ ಹೇಳಿದರು. "ಛೆ, ಛೆ, ಈ ಹೊತ್ತಿನಲ್ಲಿ ಎಂಥ ಕಾಫಿ" ಅಂತ ನಾನು ಹೇಳಿದರೂ ಆಕೆ ಕೇಳಲಿಲ್ಲ.

"ಏನು! ನೀವೂ ಸೀರೆ ತೆಗೆದುಕೊಂಡಿರಾ? ಪೊಟ್ಟಣ ಎಲ್ಲಾ ಬಿಚ್ಚಿ ಹೋಗಿದೆ. ಕಮಲೂ, ಆ ಪೊಟ್ಟಣ ಇಷ್ಟು ಸರಿಯಾಗಿ ಕಟ್ಟಿಕೊಡಮ್ಮ" ಅಂತ ರಾಜೂನ ತಾಯಿ ಹೇಳಿದರು. ಕಮಲಮ್ಮ ಸೀರೆಯ ಪೊಟ್ಟಣವನ್ನು ಒಳಕ್ಕೆ ತೆಗೆದುಕೊಂಡು ಹೋದರು.

ರಾಜೂನ ವಿಚಾರವಾಗಿ ಅವನ ತಾಯಿ, ನಾನು ಇಬ್ಬರೂ ಮಾತನಾಡಿದೆವು. ಆಕೆ ಮಗನ ಗುಣಗಳನ್ನೆಲ್ಲಾ ಬಣ್ಣಿಸಿ, ಕೆಟ್ಟ ಸಹವಾಸದಿಂದ ಈ ದುರ್ಗುಣ ಅವನಲ್ಲಿ ಮನೆ ಮಾಡಿಕೊಂಡಿರುವುದಾಗಿ ಹೇಳಿದರು. ರಾಜು ಚಾಪೆಯ ಮೇಲೆ ಗೊರಕೆ ಹೊಡೆಯುತ್ತಿದ್ದ. ಇಷ್ಟು ಹೊತ್ತಿಗೆ ಕಾಫಿ ಬಂದಿತು. ಕಮಲಮ್ಮ ಒಳ್ಳೆಯ ಟ್ವೈನ್ ಕಟ್ಟಿ ಸೀರೆಯನ್ನು ಚೆನ್ನಾಗಿ ಪ್ಯಾಕ್ ಮಾಡಿದ್ದರು. ಮತ್ತೊಂದು ದಿನ ಬರುವುದಾಗಿ ಹೇಳಿ ಮನೆಗೆ ಬಂದೆ.

ಮಾರನೇ ದಿನವೇ ಸೀರೆಯನ್ನು ಭಾಂಗಿಮಾಡಿ ಹೆಂಡತಿಗೆ ಕಳಿಸಿದೆ. ಎಷ್ಟು ಮುದ್ದಾಗಿ ಪ್ಯಾಕ್ ಮಾಡಿದ್ದರು! ಅಂಥ ಚೂಟಿ ಹೆಂಡತಿಯನ್ನು

ಚೆನ್ನಾಗಿ ಬಾಳಿಸುವ ಯೋಗ್ಯತೆ ರಾಜೂಗೆ ಇಲ್ಲ, ಅಷ್ಟೇ.

* * * *

ಮೂರು ದಿನಗಳ ನಂತರ ನನ್ನ ಹೆಂಡತಿಯ ಕಾಗದ ಬಂದಿತು. ನಾನು ಕಳಿಸಿದ್ದ ಸೀರೆಗೆ ನನ್ನನ್ನು ಹೊಗಳಿ ಬರೆದಿರಬೇಕು ಅಂತ, ಉತ್ಸುಕತೆಯಿಂದ ಕಾಗದ ಬಿಚ್ಚಿದೆ. ಅದು ಈ ರೀತಿಯಾಗಿತ್ತು:

ರಾಯರೇ,

ನೀವು ನನಗೆ ಕೆಂಪು ಸೀರೆ ಕಳಿಸಿದ ವಿಚಾರ ನನಗೆ ಅರ್ಥವಾಗಲಿಲ್ಲ. ನನ್ನ ಪಾಲಿಗೆ ನೀವು ಸತ್ತುಹೋದಂತೆಯೋ ಅಥವಾ ನಿಜವಾಗಿಯೂ ನೀವು ಸತ್ತುಹೋಗಿದ್ದೀರೋ ! ನಮ್ಮ ಲಾಯರ್ ಚಿಕ್ಕಪ್ಪ ಮುಂದಿನ ಕ್ರಮ ತೆಗೆದುಕೊಳ್ಳುತ್ತಾರಂತೆ. ತಿಳಿಸಿದ್ದೇನೆ.

ಇತಿ,

........................

ರಾಜೂನ ಮನೆಗೆ ಓಡಿದೆ. ರಾಜು ಅವನ ತಾಯಿಗೆ ಸೀರೆ ಕೊಂಡಿದ್ದನಂತೆ. ಆ ಸೀರೆಯನ್ನು ಕಮಲಮ್ಮ ಪ್ಯಾಕ್ ಮಾಡಿದ್ದಳಂತೆ.

ರಾಜೂನ ಮನೆಯಲ್ಲೂ ನಾಲ್ಕನೆಯ ಮಹಾ ಯುದ್ಧ ಜರುಗಿತ್ತು. ಎಷ್ಟೇ ಆಗಲಿ, ಹೆಂಡತಿಗೆ ಸೀರೆ ತಂದನೇ ಹೊರತು ತಾಯಿಗೆ ತರಲಿಲ್ಲ ಅಂತ—ಮುದುಕಿ ಭೂಮಿ ಆಕಾಶ ಒಂದು ಮಾಡಿತ್ತಂತೆ.

# ವಿಚಿತ್ರ ಪ್ರಪಂಚ

ಈ ಪ್ರಪಂಚವನ್ನು ವಿಚಿತ್ರ ಪ್ರಪಂಚ ಅಂತ ಕರೆಯುತ್ತಾರೆ. ಇದು ನೂರಕ್ಕೆ ನೂರು ಸತ್ಯ. ಪ್ರಪಂಚದಲ್ಲಿ ಅರ್ಧ ಭಾಗದಷ್ಟು ಜನ ತೆಳ್ಳಗಿದ್ದಾರೆ, ಇನ್ನರ್ಧ ಭಾಗದಷ್ಟು ಜನ ದಪ್ಪಗಿದ್ದಾರೆ. ಇದರಲ್ಲಿನ ವಿಚಿತ್ರವೇನೆಂದರೆ: ದಪ್ಪಗಿರುವವರು ತೆಳುವಾಗಲು ಪ್ರಯತ್ನಿಸುತ್ತಿದ್ದಾರೆ, ತೆಳುವಾಗಿರುವವರು ದಪ್ಪನಾಗಲು ಪ್ರಯತ್ನಿಸುತ್ತಿದ್ದಾರೆ.

ಇದೇನೋ ಪ್ರಕೃತಿಯ ವಿಚಿತ್ರ, ಹಾಗಾಗಿ ಹೋಗಲಿ ಅಂದರೆ ಜನ ಸುಮ್ಮನೆ ಇರುತ್ತಾರೆಯೇ? ಅದೂ ಇಲ್ಲ. ತೆಳ್ಳಗಿದ್ದರೆ ಅವನಿಗಾಗಿ ಕೆಲವು ಬಿರುದಾವಳಿಗಳನ್ನು ಸಿದ್ಧಪಡಿಸಿಕೊಂಡಿದ್ದಾರೆ. ಸೊಣಕಲ, ಕಡ್ಡಿ ಖಂಡೇರಾಯ, ಬರಗಾಲದ ಹೆಣ, ಸಿಗ್ನಲ್ ಪೋಸ್ಟ್, ಎಂದು ಮುಂತಾಗಿ ಕರೆಯುತ್ತಾರೆ. ದಪ್ಪಗಿದ್ದರೂ ಕಷ್ಟವೇ! ಡನ್‌ಲಪ್, ಮಿಚಿಲಿನ್, ಪೀಪಾಯಿ ಇತ್ಯಾದಿ.

ಈಚೆಗೆ ವೈದ್ಯ ವಿಜ್ಞಾನ ತುಂಬಾ ಹೆಚ್ಚಿದೆ. Birth Control ಬಗ್ಗೆ ಸಾಮಾನ್ಯವಾಗಿ ಎಲ್ಲ ಪತ್ರಿಕೆಗಳಲ್ಲಿಯೂ ಜಾಹಿರಾತುಗಳನ್ನು ಓದುತ್ತಿರುತ್ತೇವೆ. ಇದೇ ರೀತಿಯಾಗಿ Girth Control ಬಗ್ಗೆ ಜಾಹಿರಾತುಗಳು ಏಕೆ ಬರಬಾರದು? ವಾರವೋ, ಹದಿನೈದು ದಿನವೋ ಯಾವುದಾದರೂ ಔಷಧಿಯನ್ನೋ ಮಾತ್ರೆಗಳನ್ನೋ ಸೇವಿಸಿದರೆ, ಗುಳ್ಳೋರಿಗೆಯ ಹಾಗಿದ್ದ ಹೊಟ್ಟೆ ಹಪ್ಪಳದಂತೆ ಏಕಾಗಬಾರದು? ಮತ್ತು ಇದರಂತೆ ತೆಳುವಾಗಿರುವವರು ದಪ್ಪನಾಗಲು ಇಂಥ ಔಷಧಿಗಳಿದ್ದರೆ, ಕೇವಲ ಹದಿನೈದು ದಿನಗಳಲ್ಲಿ ಗಾಳಿ ಬಂದರೆ ಹಾರಿಹೋಗುವಂಥ ಮನುಷ್ಯ ಪೈಲ್ವಾನನಂತೆ ಹೊಟ್ಟೆ ಹಾಯಿಸಿಕೊಂಡು ಏಡಿ (ನಳ್ಳಿ) ಯಂತೆ ಅಡ್ಡಡ್ಡಲಾಗಿ ಕಾಲುಗಳನ್ನು ಹಾಕುತ್ತ ಪೇಟೆಯ ಬೀದಿಗಳಲ್ಲಿ ಓಡಿಯಾಡಿದರೆ ಜನರ ಅಚ್ಚರಿ ಹೇಗಿರಬಹುದೋ ನೀವೇ ಊಹಿಸಿ.

ವಿಮಾ ಕಂಪನಿಯವರು ಸಹ ತಮ್ಮ ವ್ಯಾಪಾರವನ್ನು ಮನುಷ್ಯನ ತೂಕದ

ಏರುಪೇರುಗಳ ಆಧಾರದ ಮೇಲೆಯೇ ಮಾಡುತ್ತಾರೆಂದು ಹೇಳಬಹುದು. "ತೂಕ ಜಾಸ್ತಿ ಆಯಿತು, ಅದಕ್ಕಾಗಿ ನೀವು ಹೆಚ್ಚು ಅಲೋಯೆನ್ಸ್ ಕೊಡ ಬೇಕು" ಎಂದು ಕೇಳುತ್ತಾರೆ. ತೂಕ ಕಡಿಮೆ ಇದ್ದವರಿಗೆ "ನಿಮ್ಮ ತೂಕ ಸರಾಸರಿ ತೂಕಕ್ಕಿಂತ ಕಡಿಮೆ ಆಯಿತು, ಆದ್ದರಿಂದ ಅಲೋಯೆನ್ಸ್ ಕೊಡ ಬೇಕು" ಅಂತ ಕೇಳುತ್ತಾರೆ.

"Survival of the fittest" ಎಂಬುದು ಹಿಂದಿನ ಕಾಲದ ಮಾತು. ಈಗ "Survival of the fattest" ಎಂಬುದೇ ನಿಜವಾಗಿದೆ. ಹಾಗೆಯೇ ನೋಡುತ್ತ ಬನ್ನಿ. ಕಾರ್ಮಿಕರಿಗೆ ಬೊಜ್ಜು ಇರುವುದನ್ನು ನೋಡಿದ್ದೀರಾ? ಶ್ರೀಮಂತರು ತೆಳುವಾಗಿರುವುದನ್ನ ನೋಡಿದ್ದೀರಾ? ಮನೆ ಬಾಗಿಲಿಗೆ ಬರುವ ಭಿಕ್ಷುಕ ಕೊಂಚ ಗುಂಡು ಗುಂಡಾಗಿದ್ದರೆ 'ಕಡಿದರೆ ನಾಲ್ಕಾಳು ಆಗುವ ಹಾಗಿದ್ದೀಯೆ, ಯಾವುದಾದರೂ ಮಿಲ್ಲಿಗೆ ಕೆಲಸಕ್ಕೆ ಹೋಗು' ಅಂತ ಅಟ್ಟುತ್ತಾರೆ. ಅರ್ಥಾತ್ ತೆಳುವಾಗಿರುವವರು ಮಾತ್ರ ಭಿಕ್ಷೆ ಬೇಡಲು ಅರ್ಹರು ಎಂದು ಹೇಳಿದ ಹಾಗಾಯಿತು. ಭಿಕ್ಷೆ ತೆಗೆದುಕೊಂಡ ಭಿಕ್ಷದವರು ಸಹ 'ನಿಮಗೆ ಬೊಜ್ಜು ಬೆಳೆಯಲಿ' ಎಂದು ಹರಸಿ ಹೋಗುವುದೂ ಉಂಟು. ಅಂದರೆ, ಬೊಜ್ಜು ಬೆಳೆಯುವುದು ನಿಜಕ್ಕೂ ಒಳ್ಳೆಯದಕ್ಕೆ ಎಂದು ಪರ್ಯಾಯವಾಗಿ ಹೇಳಿದ ಹಾಗಾಯಿತು. ಈ ಮಾತುಗಳನ್ನು ಭಿಕ್ಷೆ ತೆಗೆದುಕೊಂಡವರು ಅಥವಾ ಸಹಾಯ ಹೊಂದಿದವರು ಹೇಳಿದ ಮಾತ್ರಕ್ಕೆ ವೈದ್ಯ ವಿಜ್ಞಾನಿಗಳು ಒಪ್ಪಬೇಕಲ್ಲ? ಬೊಜ್ಜಿನ ವಿಷಯದಲ್ಲಿ ಅವರು ಕೊಂಚವೂ ಸಹಾನುಭೂತಿಯುಳ್ಳವರಾಗಿಲ್ಲ. ಈ ಕಾರಣದಿಂದಾಗಿ ಅವರು ಈ ಬಗ್ಗೆ ತಮ್ಮ ಒಪ್ಪಿಗೆಯನ್ನೇ ಕೊಟ್ಟಿಲ್ಲ. ಬೊಜ್ಜಿದ್ದರೆ ಇಂತಿಂಥ ಕಾಹಿಲೆಗಳು ಬರುತ್ತವೆಯೆಂದು ಬಾಣಂತಿ ಖಾರದ ಪಟ್ಟಿ ಮಾದರಿಯ ಒಂದು ಉದ್ದನೆಯ ಪಟ್ಟಿಯನ್ನೇ ಕೊಟ್ಟಿದ್ದಾರೆ. ತೆಳುವಾಗಿರು ವವರು ದೀರ್ಘಾಯುಗಳೆಂದೂ, ಬೊಜ್ಜಿದ್ದವರು ಅವರಷ್ಟು ಕಾಲ ಬದುಕುವುದಿಲ್ಲ ವೆಂದೂ ತಮ್ಮ ಅಂತ್ಯ ತೀರ್ಮಾನವನ್ನು ಸಹ ಕೊಟ್ಟಿದ್ದಾರೆ.

ಪಾಶ್ಚಾತ್ಯ ಸ್ತ್ರೀ ಪುರುಷರು ಬೊಜ್ಜು ಕರಗಿಸಿಕೊಳ್ಳುವುದಕ್ಕಾಗಿ ತುಂಬಾ ಪರಿಪಾಟು ಬೀಳುತ್ತಾರೆ. ಬೊಜ್ಜು ಕರಗಿಸುವ ಸಂಸ್ಥೆಗಳು ಸಹ ಅಲ್ಲಿ ಸ್ಥಾಪಿತ ವಾಗಿವೆ. ಇವಕ್ಕೆ "Slimming Institutes" ಎಂದು ಹೆಸರು. ವಿವಿಧ

ವ್ಯಾಯಾಮಗಳು, ಕಾಲ್ನಡಿಗೆ, ಪಿಷ್ಟಪದಾರ್ಥಗಳ ವರ್ಜನೆ, ನೂರೆಂಟು ಪಥ್ಯಗಳು ಮುಂತಾದವು ಇರುತ್ತವೆ. ಬೆಳಿಗ್ಗೆ ಎದ್ದು ಮುಖ ತೊಳೆಯುವುದಕ್ಕೆ ಮೊದಲು ಅವರು ತೂಕ ನೋಡಿಕೊಳ್ಳುತ್ತಾರೆ. ಬಚ್ಚಲುಮನೆಯಲ್ಲಿ ಒಂದು "Chart" ಸಹ ಇರುತ್ತದೆ. ಇದು ದೇಹದ ತೂಕದ ಏರುಪೇರುಗಳನ್ನು ಆಯಾ ದಿನ, ವಾರ, ತಿಂಗಳು ರೀತ್ಯ ತೋರಿಸುತ್ತದೆ. ನಮ್ಮಲ್ಲಿ ಧಾರಣೆವಾಸಿಗಳ, ಮಳೆಬೆಳೆಗಳ ಅಥವಾ ಮಕ್ಕಳ ಕಾಹಿಲೆ ಕಸಾಲೆಗಳ ಬಗ್ಗೆ ಮಾತುಕತೆ ಆಡುತ್ತಿದ್ದರೆ, ಅವರು ತೂಕ ಕಡಿಮೆ ಮಾಡಿಕೊಳ್ಳಲು ಯಾವ ಹೊಸ ಹೊಸ ವಿಧಾನಗಳನ್ನು ಕಂಡುಹಿಡಿದಿದ್ದರೆಂಬ ಬಗ್ಗೆ ಗಂಟೆಗಟ್ಟಲೆ ಬೇಸರವಿಲ್ಲದೆ ಹರಟೆ ಕೊಚ್ಚುತ್ತಿರುತ್ತಾರೆ. ಸಾಮಾನ್ಯವಾಗಿ ನಮ್ಮ ದೇಶೀಯರು ಅವರಷ್ಟು ಬೊಜ್ಜಿಲ್ಲದವರಾದ ಕಾರಣ ನಾವು ಅದಕ್ಕೆ ಅಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲವೆಂದು ಹೇಳಬಹುದು.

ಪಾಶ್ಚಾತ್ಯರು ಬೊಜ್ಜು ಕರಗಿಸಿಕೊಳ್ಳಲು ಶ್ರಮ ಪಡುತ್ತಿದ್ದರೆ, ಅರಬ್ ಸ್ತ್ರೀ ಪುರುಷರು ಬೊಜ್ಜು ಬೆಳೆಯಿಸಿಕೊಳ್ಳಲು ತುಂಬಾ ಶ್ರಮ ಪಡುತ್ತಿದ್ದಾರೆ. ಒಬ್ಬಳು 'ಸುಂದರಿ' ಎಂದು ಅರಬ್ ರಸಿಕರಿಂದ ಪರಿಗಣಿಸಲ್ಪಡಬೇಕಾಗಿದ್ದರೆ ಆಕೆಗೆ ತುಂಬಾ ಬೊಜ್ಜಿರಬೇಕು ! ಅದೇ ಪಾಶ್ಚಾತ್ಯರಲ್ಲಿ ಆಕೆಗೆ ವಯಸ್ಸಾಗಿದ್ದರೂ "School girl complexion" (ಶಾಲೆಯ ಹುಡುಗಿಯ ವರ್ಚಸ್ಸು) ಇರಬೇಕೆಂದು ಬಡಿದುಕೊಳ್ಳುತ್ತಾರೆ. ನಿತ್ಯ ನಿರಂತರ ನವಯೌವನದಿಂದ ಶೋಭಿಸಲು ಸೌಂದರ್ಯವೃದ್ಧಿಯ ಸಾಧನಗಳನ್ನೂ ಬಳಸಿಕೊಳ್ಳುತ್ತಾರೆ. ಯಾವ ಹೆಂಗಸೇ ಆಗಲಿ, ತಾನು ಇನ್ನೂ ಯುವತಿಯೆಂದು ಜನ ತಿಳಿಯಲೆಂದು ತನ್ನ ವಯಸ್ಸನ್ನು ತನಗಾಗಿರುವ ವಯಸ್ಸಿಗಿಂತ ಕನಿಷ್ಟಪಕ್ಷ ಹತ್ತು ವರ್ಷವಾದರೂ ಕಡಿಮೆ ಹೇಳುತ್ತಾಳೆ. ಹೆಂಗಸಿನ ವಯಸ್ಸನ್ನು ಕೇಳುವುದು ಶೀಲಕ್ಕೆ ವಿರೋಧವೆಂದು ಪಾಶ್ಚಾತ್ಯರು ಎಣಿಸುತ್ತಾರೆ.

ನಾನು ಅನೇಕ ದೇವರುಗಳನ್ನು ನೋಡಿದ್ದೇನೆ (ವಿಗ್ರಹಗಳು ಮತ್ತು ಪಟಗಳು). ಈ ಎಲ್ಲ ದೇವರುಗಳೂ ಕೊಂಚ ಗುಂಡುಗುಂಡಾಗಿ ದಪ್ಪದಪ್ಪನಾಗಿರುತ್ತವೆ. ಈ ದೇವರುಗಳಲ್ಲೆಲ್ಲಾ ಈಶ್ವರನಿಗೆ ತುಂಬಾ ಬೊಜ್ಜು ಇರುತ್ತದೆ. ನನ್ನ ಹಾಗೆ ತೆಳುವಾಗಿರುವ ಈಶ್ವರನನ್ನು ನಾನು ನೋಡಿಯೇ ಇಲ್ಲ.

ಬಟ್ಟೆಗಳು ಮೈ ಕೈ ತುಂಬಿಕೊಂಡಿದ್ದವರಿಗೆ ಒಪ್ಪುವ ಹಾಗೆ ಸೊಣಕಲು ಮೈಯವರಿಗೆ ಒಪ್ಪುವುದಿಲ್ಲ. ಆ ಎಲುಬಿನ ಗೂಡಿಗೆ ಬಟ್ಟೆ ಅಂಟುವಂತೆ ಮಾಡುವುದು ಎಂಥ ಬುದ್ಧಿವಂತ ದರ್ಜಿಗೂ ಅಸಾಧ್ಯದ ಮಾತು.

ಸ್ಪೇನ್, ಅಮೆರಿಕ ಮತ್ತು ಬ್ರಿಟನ್‌ಗಳಲ್ಲಿ ಹೆಚ್ಚು ತೂಗುವವರ ಸಂಸ್ಥೆಗಳೇ ಸ್ಥಾಪಿತವಾಗಿವೆ. ಸ್ಪೇನ್‌ನಲ್ಲಿರುವ ಇಂಥ ಸಂಸ್ಥೆಯ ಅಧ್ಯಕ್ಷರ ತೂಕ ಕೇವಲ ಏಳುನೂರಾ ಚಿಲ್ಲರೆ ಪೌಂಡುಗಳು. ಉಳಿದ ಕಾರ್ಯದರ್ಶಿ ಮತ್ತು ಸದಸ್ಯರ ತೂಕ ಅವರವರ ಸ್ಥಾನಮಾನಗಳಿಗನುಗುಣವಾಗಿ ಕೊಂಚ ಕೊಂಚ ಕಡಿಮೆ ಯಾಗುತ್ತ ಹೋಗುತ್ತದೆ. ಆದರೆ ಕಡ್ಡಿ ಪೈಲ್ವಾನರು ಇಂಥದೊಂದು ಸಂಸ್ಥೆ ಯನ್ನು ಸ್ಥಾಪಿಸಿಕೊಂಡಿರುವ ವಿಷಯವನ್ನು ನಾನು ಎಲ್ಲಿಯೂ ಕೇಳಿಲ್ಲ ಮತ್ತು ಓದಿಯೂ ಇಲ್ಲ.

ಅಂದ ಹಾಗೆ ಪೈಲ್ವಾನರ ವಿಷಯವನ್ನೇ ತೆಗೆದುಕೊಳ್ಳಿ. ಅವರ ತೂಕ, ಮೈ ಅಡ್ಡಳತೆ ಇಂತಿಷ್ಟಿರಬೇಕು ಅಂತ ನಿಯಮವಿದೆ. ಕಾಲಿನ ಮೀನುಖಂಡ ಗಳು, ತೊಡೆಯ ಮಾಂಸಖಂಡಗಳು ದಪ್ಪದಪ್ಪನಾಗಿ ಕಣ್ಣು ಕೋರೈಸುವಂತಿರ ಬೇಕು. ಮಡಿಕೋಲಿನಂತಿರುವ ಎರಡು ಕಾಲುಗಳುಳ್ಳ, ಎದೆ ಎಲುಬುಗಳನ್ನು ಎಣಿಸಲು ಸಾಧ್ಯವಿರುವ ಇಬ್ಬರು ಪೈಲ್ವಾನರು ಅಖಾಡಕ್ಕೆ ಇಳಿಯಲು ಸಾಧ್ಯವೇ? ಇದರಂತೆ ನಾಟಕದ ನಾಯಕ, ಉಪನಾಯಕ, ಖಳನಾಯಕರ ಪಾತ್ರಗಳು ಸೊಣಕಲ ಮೈ ಇರುವವರಿಗೆ ನಿಷಿದ್ಧ. ಫುಟ್‌ಬಾಲ್, ಕ್ರಿಕೆಟ್, ಹಾಕಿ ಮುಂತಾದ ಕ್ರೀಡೆಗಳಲ್ಲಿ 'ಅಂಪೈರ್' ಆಗಲು ಸಹ ಕಡ್ಡಿ ಖಂಡೇರಾಯರು ಗಳಿಗೆ ಅವಕಾಶ ದೊರೆಯದು.

ಮಿಲಿಟರಿಯಲ್ಲಿಯೂ ಇಂತಿಷ್ಟು ಮೈಕಟ್ಟು ಇರಬೇಕೆಂಬ ದೊಡ್ಡ ಬಂಡೆ ಯನ್ನೇ ನಮ್ಮೆದುರು ಇರಿಸಿದ್ದಾರೆ. ಸ್ವದೇಶಪ್ರೇಮ ನಮಗೂ ಇದೆ, ಶ್ರಮ ಗಳಿಂದ ನಮ್ಮ ದೇಶವನ್ನು ಪಾರುಮಾಡುವ ಉತ್ಕಟೇಚ್ಛೆ ನಮ್ಮಲ್ಲಿಯೂ ಇದೆ ಅಂದರೆ ಅವರು ಕೇಳುವುದಿಲ್ಲ. ಹೇಗಾದರೂ ಸರಿಯೆ, ಮಿಲಿಟರಿ ರೂಲ್ಸಿಗೆ ಸರಿಯಾಗಿ ನಿಮ್ಮ ತೂಕವನ್ನೂ, ಎತ್ತರವನ್ನೂ ಹೆಚ್ಚಿಸಿಕೊಂಡು ಬನ್ನಿ ಅಂತ ಹೇಳುತ್ತಾರೆ.

'ಕುಲಹೀನನಾದರೂ ಚಿಂತೆಯಿಲ್ಲ, ವರಹೀನವಾಗಬಾರದು' ಎಂಬುದೊಂದು ಗಾದೆಯ ಮಾತು ಕನ್ನಡದಲ್ಲಿದೆ. ನನ್ನ ಸ್ನೇಹಿತನೊಬ್ಬ, ಅವನು ಎಷ್ಟು ಸೊಣಕಲಾಗಿದ್ದನೋ ಅಷ್ಟು ಕುಳ್ಳಗಿದ್ದ. ಅವನ ಹೆಂಡತಿ ಎಷ್ಟು ಎತ್ತರವಾಗಿದ್ದಳೋ ಅಷ್ಟು ದಪ್ಪಗಿದ್ದಳು. ಈ ಗಂಡ ಹೆಂಡತಿಯರು ಜಗಳವಾಡದ ದಿನವೇ ಅಪರೂಪವೆಂದು ಹೇಳಬಹುದು. ನನ್ನ ಸ್ನೇಹಿತನ ಆಳುತನ ಹೀಗಿದ್ದರೂ ಅವನು ತುಂಬಾ ಕೋಪಿಷ್ಠ. ತನ್ನ ಹೆಂಡತಿಯ ಕೆನ್ನೆಗೆ ಎರಡೇಟು ಕೊಡಬೇಕೆನ್ನುವಷ್ಟು ರೋಷ ಅವನಿಗೆ ಬಂದಾಗ, ಒಂದು ತಪ್ಪಲೆಯನ್ನು ಬೋರಲು ಹಾಕಿ ಅದರ ಮೇಲೆ ತಾನು ನಿಂತುಕೊಂಡು ಆಕೆಯ ಕೆನ್ನೆಗೆ ಫಳೀರೆಂದು ಏಟು ಕೊಡುತ್ತಿದ್ದ.

ಅಂತೂ ಒಟ್ಟನಲ್ಲಿ ಹೇಗಿದ್ದರೂ ಕಷ್ಟ. ಅನ್ನುವವರು ಅನ್ನಲಿ, ಆಡುವವರು ಆಡಲಿ, ನಾವು ಇರುವ ಹಾಗೇ ಇರೋಣ!

# ನಿಮ್ಮ ಸಮಸ್ಯೆಗೆ ನಮ್ಮ ಉತ್ತರ

ಪ್ರತಿ ವಾರ ಪತ್ರಿಕೆ, ಮಾಸ ಪತ್ರಿಕೆಗಳಲ್ಲೂ ಪ್ರಶ್ನೆಗಳಿಗೆ ಉತ್ತರ ಕೊಡುವ ಪರಿಪಾಠ ಇದೆ. ಫಿಲ್ಮ್ ಇಂಡಿಯಾದ ಬಾಬುರಾವ್ ಪಟೇಲರು ನಿಮ್ಮ ಪ್ರಶ್ನೆಗಳಿಗೆ ಸ್ವಾರಸ್ಯವಾದ ಉತ್ತರ ಹೇಳುತ್ತಾರೆ. ಈ ಕಾರಣದಿಂದಲೇ ಆ ಪತ್ರಿಕೆ ಅತ್ಯಂತ ಜನಪ್ರಿಯವಾಗಿದೆ. 'ನಾಗರಹಾವು ಹುತ್ತದಿಂದ ಬುಸ್ ಎಂದಂತೆ', 'ಜಂತು ಎಲ್ಲಿಂದಲೋ ಬುಸ್ ಎಂದಿತಂತೆ' ಎಂಬ ಗಾದೆಯಂತೆ ನಮ್ಮಲ್ಲೂ ಈ ರೋಗ ಸಾಂಕ್ರಾಮಿಕ ರೋಗವಾಗಿ ಹಬ್ಬಿದೆ. ಇದರಲ್ಲಿ ಇನ್ನೂ ಒಂದು ಸ್ವಾರಸ್ಯ ವಿಷಯ ವೇನೆಂಪರೆ, ಪ್ರಶ್ನೆಗಳ ಮಟ್ಟ ಎಷ್ಟು ಕೆಳಗಿರುತ್ತದೋ, ಉತ್ತರಗಳೂ ಹಾಗೇ ಇರುತ್ತವೆ. ಪ್ರಕೃತ ಲೇಖನದ ಉದ್ದೇಶ ನಮ್ಮಲ್ಲಿ ಬರುವ ಪ್ರಶ್ನೋತ್ತರಗಳನ್ನು ಕುರಿತಾಗಲ್ಲ. ಸಾಮಾನ್ಯವಾಗಿ ಕೇಳುವ ಪ್ರಶ್ನೆಗಳಿಗೆ ಉತ್ತರಗಳನ್ನು ಹೇಗೆ ಕೊಡಬೇಕು ಎಂತ ಬರೆಯುವುದೇ ನನ್ನ ಉದ್ದಿಶ್ಯ. ಇಲ್ಲಿ ಕೇಳಿರುವ ಪ್ರಶ್ನೆಗಳು ವಾಚಕರವೆಂದೂ, ಉತ್ತರಗಳು ನನ್ನವೆಂದೂ ವಾಚಕರು ತಿಳಿಯಲಿ.

ಕಾಲೇಜ್ ಹುಡುಗಿ—ನಮ್ಮ ಪಕ್ಕದಮನೆ ಹುಡುಗ ನನ್ನನ್ನು ನೋಡಿ ದಾಗೆಲ್ಲ ಹುಬ್ಬು ಹಾರಿಸುತ್ತಾನೆ. ಇದಕ್ಕೇನು ಮಾಡಲಿ ?

ಉತ್ತರ—ನೀವೂ ಹುಬ್ಬು ಹಾರಿಸಿ !

* * *

ಯುವಕ—ಪ್ರೇಮಕ್ಕೂ ಕಾಮಕ್ಕೂ ವ್ಯತ್ಯಾಸವೇನು ?

ಉತ್ತರ—ಮೊದಲು ಪ್ರೇಮ ಆಮೇಲೆ ಕಾಮ, ಅಷ್ಟೇ !

* * *

ಓದುಗ—ಇತ್ತೀಚೆಗೆ ಪತ್ರಿಕೆಗಳ ಮಟ್ಟ ಬಹಳ ಇಳಿದುಹೋಗಿದೆಯಲ್ಲ, ಕಾರಣವೇನು ?

ಉತ್ತರ—ಇನ್ನೂ ಕೆಳಕ್ಕಿಳಿಯಲು ಸಾಧ್ಯವಿಲ್ಲದ್ದರಿಂದ.

* * *

ತರುಣ—ನಾನು ಮಧುಬಾಲಳನ್ನು ಪ್ರೀತಿಸುತ್ತೇನೆ.

ಉತ್ತರ—ನಿಮಗ್ಯಾರು ಅಡ್ಡಿ ಮಾಡಿದ್ದಾರೆ, ಪ್ರೀತಿಸಿ, ಬೇಕಾದಷ್ಟು ಪ್ರೀತಿಸಿ.

* * *

ಯುವಕ—ನಾನು ನಾಟ್ಯ ಕಲಿಯಬೇಕೆಂದಿದ್ದೇನೆ.

ಉತ್ತರ—ನಿಮ್ಮ ಫೋಟೋ ಕಳುಹಿಸಿ, ನಿಮ್ಮ ತೂಕ ತಿಳಿಸಿ, ಆಮೇಲೆ ಹೇಳುತ್ತೇನೆ.

* * *

ಯುವಕ—ನಾನು ಪಕ್ಕದ ಮನೆ ಹುಡುಗಿಯನ್ನು ಪ್ರೀತಿಸುತ್ತೇನೆ, ಅವಳೂ ನನ್ನನ್ನು ಪ್ರೀತಿಸುತ್ತಾಳೆ. ಇದಕ್ಕೆ ನಿಮ್ಮಿಂದ ಹೇಗೆ ಸಹಾಯ ವಾದೀತು ?

ಉತ್ತರ—ಈ ವಿಷಯದಲ್ಲಿ ನಾನೇನೂ ಸಹಾಯಕನಲ್ಲ. ಅಲ್ಲದೆ ಇದು ನಿಮ್ಮ ಅಂತರಂಗ ಪ್ರಶ್ನೆ. ನೀವಿಬ್ಬರೂ ಹೇಗಾದರೂ ಸರಿಪಡಿಸಿಕೊಳ್ಳಿ.

* * *

ಮಾವ—ನನ್ನ ಮಗಳನ್ನು ಮದುವೆಯಾಗಲು ಭಾವೀ ಅಳಿಯಂದಿರೆಲ್ಲ ವರದಕ್ಷಿಣೆ ಕೇಳುತ್ತಾರಲ್ಲ, ಏನು ಮಾಡಲಿ ?

ಉತ್ತರ—ಬ್ಲಾಕ್ ಮಾರ್ಕೆಟ್ಟಿನಲ್ಲಿ ಖರ್ಚುಮಾಡಲು ಪ್ರಯತ್ನಿಸಿ.

* * *

ಗೃಹಸ್ಥ—ಸ್ವರ್ಗ, ನರಕಗಳೆಂದರೇನು ?

ಉತ್ತರ—ತಿಂಗಳಿನ ಕೊನೆಯವರೆಗೂ ಅಕ್ಕಿ, ಸಕ್ಕರೆ ಇದ್ದರೆ ಅದೇ ಸ್ವರ್ಗ. ಮಧ್ಯ ತಿಂಗಳಿನಲ್ಲಿಯೇ ಅವೂ ತೀರಿಹೋದರೆ, ನೀವೂ ತೀರಿ ಹೋದಂತೆಯೇ. ಅದೇ ನರಕ.

* * *

ಆಶಾವಾದಿ—ನಾನೊಂದು ಪತ್ರಿಕೆ ಹೊರಡಿಸಬೇಕೆಂದಿದ್ದೇನೆ.

ಉತ್ತರ—ಮೆಂಟಲ್ ಹಾಸ್ಪಿಟಲ್‌ನಲ್ಲಿ ಆರು ತಿಂಗಳು ಇದ್ದುಬನ್ನಿ.

* * *

ಬುದ್ಧಿಯಿಲ್ಲದ ಯುವಕ—ನಾನು ಪತ್ರಿಕೋದ್ಯಮಿಯಾಗಿ ಜೀವನ ಆರಂಭಿಸಬೇಕೆಂದಿದ್ದೇನೆ. ನಿಮ್ಮ ಸಲಹೆ ಏನು ?

ಉತ್ತರ—ಯಾವುದಾದರೂ ಒಂದು ಸಿನಿಮಾ ಹತ್ತಿರ ಒಂದು ಬೀಡಿ ಅಂಗಡಿ ಇಡಿ. ಇದರಿಂದ ನಿಮಗೆ ತುಂಬಾ ಅನುಕೂಲವಾದೀತು.

* * *

ಸಿನಿಮಾ ಬೀಸಣಿಗೆ (ಫ್ಯಾನ್)—ಸುರಯ್ಯಾಗೂ, ನರ್ಗೀಸ್‌ಗೂ ಇರುವ ವ್ಯತ್ಯಾಸವೇನು ?

ಉತ್ತರ—ಒಂದು ಕೇಸರೀಭಾತ್, ಇನ್ನೊಂದು ವಾಂಗೀಭಾತ್. ಎರಡೂ ರುಚಿ.

* * *

ವಿದ್ಯಾರ್ಥಿ—ನಾನು ಕವಿಯಾಗಬೇಕೆಂಬ ಆಸೆ ಇದೆ. ಹೇಗೆ ಪ್ರಾರಂಭಿಸಲಿ ?

ಉತ್ತರ—ಮಾಸಿದ ಒಂದು ಬಿಳಿ ಜುಬ್ಬ, ಕಚ್ಚೆ ಪಂಚೆ, ತ್ಯಾಪೆ ಚಪ್ಪಲಿ, ಕೆದರಿದ ಕ್ರಾಪು, ಮುಂದೇನು ಗತಿ ಅನ್ನುವ ಮುಖಮುದ್ರೆ – ಇವನ್ನು ಧರಿಸಿ. ನೀವು ಕವಿಯಾದಂತಾಯಿತು.

* * *

ಆಸ್ತಿಕ—ದೇವರು ಇದ್ದಾನೆಯೋ, ಇಲ್ಲವೋ ?

ಉತ್ತರ—ಖಂಡಿತವಾಗಿಯೂ ಇದ್ದಾನೆ. ನಾವು ಹಾಕುವ ಆಣೆ ಪ್ರಮಾಣಗಳೆಲ್ಲ ಅವನ ಹೆಸರಿನ ಮೇಲೆ ತಾನೆ ?

* * *

ಸದ್ಗೃಹಸ್ಥ—ಬ್ಲಾಕ್ ಮಾರ್ಕೆಟ್, ಲಂಚ ರುಷುವತ್ತುಗಳು ಹೇಗೆ ನಿವಾರಣೆಯಾದಾವು ?

ಉತ್ತರ—ನಿಮ್ಮ ಪ್ರಶ್ನೆಯಲ್ಲಿಯೇ ತಪ್ಪಿದೆ. ಅವು ಏಕೆ ನಿರ್ಮೂಲವಾಗಬೇಕು. ನೀವೂ ಅವನ್ನು ಪ್ರಾರಂಭಿಸಿ. ಆಮೇಲೆ ನೀವು ಈ ಪ್ರಶ್ನೆ ಕೇಳುವುದಿಲ್ಲ.

* * *

ಸಿನಿಮಾ ಪ್ರೇಮಿ—ಲೀಲಾಚಿಟ್ನೀಸ್ ಈಗ ಏನು ಮಾಡುತ್ತಿದ್ದಾಳೆ ?

ಉತ್ತರ—ತನ್ನ ಮಕ್ಕಳಿಗೆ ಚಡ್ಡಿ ಲಂಗ ಹಾಕುತ್ತಿದ್ದಾಳೆ.

* * *

ಪದವೀಧರ—ನಾನು ವಿದೇಶಯಾತ್ರೆ ಕೈಕೊಳ್ಳಬೇಕೆಂದಿದ್ದೇನೆ.

ಉತ್ತರ—ನಿಮ್ಮ ತಂದೆಯ ಆಸ್ತಿಪಾಸ್ತಿಗಳ ಬಗ್ಗೆ ಚಕ್ಕುಬಂದಿ ಸಹಿತ ವಿವರಗಳನ್ನು ತಿಳಿಸಿ. ನೀವು ಯಾತ್ರೆ ಹೋಗಬೇಕೋ ಬೇಡವೋ ಅನ್ನುವು ದನ್ನು ನಾನು ತಿಳಿಸುತ್ತೇನೆ.

* * *

ಸುಧಾರಕ—ವಿತಂತು ವಿವಾಹದ ಬಗ್ಗೆ ನಿಮ್ಮ ಅಭಿಪ್ರಾಯವೇನು ?

ಉತ್ತರ— ಆಕೆಯನ್ನು ನೋಡಿದ ಮೇಲೆ ಹೇಳುತ್ತೇನೆ.

* * *

ವಿದ್ಯಾರ್ಥಿ—ಸಹ ವಿದ್ಯಾಭ್ಯಾಸದಿಂದ ಅನುಕೂಲವೇನು ?

ಉತ್ತರ—ಕೆಲವರಿಗೆ ಅನುಕೂಲ, ಕೆಲವರಿಗೆ ಅನಾನುಕೂಲ. ಏನು ಮಾಡಲಿಕ್ಕಾಗುತ್ತದೆ !

* * *

ಯುವಕ—ಜೀವನದ ಆದರ್ಶವೇನು ?

ಉತ್ತರ—ಯಾವುದಾದರೂ ಮಂತ್ರಿ ಪದವಿ ದೊರಕಿಸಿಕೊಳ್ಳುವುದು.

* * *

ಗಾಂಧೀ ಭಕ್ತ—ನೀವೇಕೆ ಗಾಂಧೀ ಟೋಪಿ ಹಾಕುತ್ತಿಲ್ಲ ?

ಉತ್ತರ—ನಾನಾಗಲೇ ಅದನ್ನು ಗಾಂಧೀಗೆ ಹಾಕಿದ್ದೇನೆ.

* * *

ಓದುಗ—ಕತೆ ಕಾದಂಬರಿಗಳಲ್ಲಿ ನಿಷ್ಕಲಪ್ರೇಮ, ನಿರ್ಮಲಪ್ರೇಮ, ಶುದ್ಧ ಪ್ರೇಮ ಅಂತ ಬರೆದಿರುತ್ತಾರಲ್ಲ, ಅದರ ಅಂತರಾರ್ಥವೇನು ?

ಉತ್ತರ—ಅಂತರಾರ್ಥವೇನುಬಂತು ? ನಿಮ್ಮ ಹಾಲಿನಾಕೆ ಅಪ್ಪಟ ಹಾಲು ಅಳೆಯುತ್ತೇನೆಂದು ಹೇಳುವುದಿಲ್ಲವೇ, ಹಾಗೆ.

* * *

ಯುವತಿ—ನೀವು ನನ್ನನ್ನೇಕೆ ಮದುವೆಯಾಗಬಾರದು ?

ಉತ್ತರ—ನನ್ನ ಹೆಂಡತಿಯನ್ನು ಕೇಳಿ ಹೇಳುತ್ತೇನೆ ತಾಳಿ.

* * *

ತರುಣ—ಪರಸ್ತ್ರೀಯನ್ನು ಪ್ರೀತಿಸುವುದು ತಪ್ಪೆ ?

ಉತ್ತರ—ಆಕೆಯ ಗಂಡನಿಗೆ ತಿಳಿಯದಂತೆ ಪ್ರೀತಿಸಿದರೆ ತಪ್ಪಲ್ಲ, ತಿಳಿದರೆ ಅನಾಹುತವಾಗುತ್ತದೆ.

# ಪುಸ್ತಕ ಕಾಣಿಕೆ

ಈಚೀಚೆಗೆ ಸುಬ್ಬು ನಮ್ಮ ಮನೆಗೆ ಒಂದೇ ಸಮನೆ ಬರಲಾರಂಭಿಸಿದ್ದಾನೆ. ಬೆಳಿಗ್ಗೆ ಏಳು ಗಂಟೆಗೊಂದು ಸಾರಿ, ಮಧ್ಯಾಹ್ನ ಮೂರು ಗಂಟೆಗೊಂದು ಸಾರಿ. ಈ ವೇಳೆಯಲ್ಲಿಯೇ ಅವನೇಕೆ ಬರುತ್ತಿದ್ದಾನೆಂಬುದರಲ್ಲಿಯೂ ಒಂದು ರಹಸ್ಯವಿದೆ. ಈ ವೇಳೆಗಳಲ್ಲಿಯೇ ನಮ್ಮ ಮನೆಯಲ್ಲಿ ಕಾಫಿ ಎಂಬ ದ್ರಾವಕ ತಯಾರಾಗುವುದು.

ಸುಬ್ಬು ಮಹಾ ಚೂಟಿ ಮನುಷ್ಯ. ಅವನು ಹಾಗೆ ಬರುವುದರಲ್ಲಿ ಏನೋ ಮಸಲತ್ತು ಅಡಗಿರಬೇಕೆಂದು ನನ್ನ ಹೆಂಡತಿ ಸೂಚಿಸಿದಳು. "ಛೆ, ಹಾಗೆಲ್ಲ ಅನ್ನಬೇಡ. ಮಿಡ್ಲ್ ಸ್ಕೂಲಿನಿಂದಲೂ ಒಟ್ಟಿಗೆ ಓದಿದವರು, ಪರೀಕ್ಷೆಗಳಲ್ಲೆಲ್ಲ ಒಟ್ಟಿಗೆ ಫೇಲಾದವರು. ಅನೇಕ ದುಷ್ಕೃತ್ಯಗಳಲ್ಲಿ ಭಾಗವಹಿಸಿದವರು. ಅವನು ಇನ್‌ಷೂರೆನ್ಸ್ ಏಜೆಂಟಂತೆ ಸುಳ್ಳು ಮಾತನಾಡುವುದನ್ನು ಕಲಿತಿದ್ದಾನೆ; ನಾನು ಸಾಹಿತಿಯಾಗಿ ಸುಳ್ಳು ಬರೆಯುವುದನ್ನು ಕಲಿತಿದ್ದೇನೆ" ಅಂತ ಹೇಳಿದೆ. ಆದರೂ ಹೆಂಗಸರಿಗೆ ಸಹಜವಾದ ಆರನೆಯ ಸೂಕ್ಷ್ಮಬುದ್ಧಿಯಿಂದ ಆಕೆ ಹೇಳಿದಳು.

ನನಗೊಂದು ಧೈರ್ಯವಿತ್ತು. ಸುಬ್ಬುವಿನ ಮಸಲತ್ತು ಏನಾದರೂ ಇರಲಿ, ಅದು ಫಲಕಾರಿಯಾಗುವುದಾದರೂ ಹೇಗೆ? ಸುಬ್ಬುವಿನ ಸಾಹಸ ನನ್ನ ದಾರಿದ್ರ್ಯದ ಮೇಲೆ ದಾಳಿ ಮಾಡಿದರೆ ಅದರಿಂದ ಅವನಿಗೆ ನಷ್ಟವೇ ವಿನಾ ನನಗೇನೂ ನಷ್ಟವಿಲ್ಲ. ಅವನ ಮಂಕುಬುದ್ಧಿಗೆ ತುಂಬಾ ಅನುಕಂಪ ತೋರಿದೆ.

ಒಂದು ದಿನ ಸುಬ್ಬು ಅಕಸ್ಮಾತ್ತಾಗಿ ಕೇಳಿದ: "ಕಿಟ್ಟಿ, ಸಾಹಿತ್ಯರಂಗದಲ್ಲಿ ನೀನು ತುಂಬಾ ಸರ್ಕಸ್ ಮಾಡಿದ್ದೀಯೆಂದು ಜನ ಹೇಳುತ್ತಾರೆ. ಯಾವ ಯಾವ ಪುಸ್ತಕಗಳನ್ನೋ ಬರೆದಿದ್ದೀಯೆಂದೂ ಹೇಳುತ್ತಾರೆ. ನಿನ್ನ ಕೀರ್ತಿಲತೆ ಕರ್ನಾಟಕದ ಮೂಲೆ ಮೂಲೆಗಳಲ್ಲಿ ಹಬ್ಬಿರುವುದನ್ನು ಕೇಳಿ ತುಂಬಾ ಸಂತೋಷವಾಯಿತು. ಮಹಾ ಗಟ್ಟಿಗನಪ್ಪಾ ನೀನು. ಹೈಸ್ಕೂಲಿನಲ್ಲಿದ್ದಾಗ ಮೇಷ್ಟರಿಗೆ ಒಂದೊಂದು ಪ್ರಶ್ನೆಯನ್ನು ಬಿಗಿದರೆ ಅವರಲ್ಲೇ ತಬ್ಬಿಬ್ಬಾಗುತ್ತಿದ್ದರು.

ಅದಿರಲಿ, ಅಷ್ಟು ಪುಟ್ಟ ತಲೆಯಲ್ಲಿ ಅಷ್ಟು ದೊಡ್ಡ ಐಡಿಯಾಗಳನ್ನು ಹೇಗೆ ತುಂಬಿಕೊಂಡಿದ್ದೀಯೋ !"

ಸುಬ್ಬೂನ ವಿಚಾರವಾಗಿ ನನ್ನ ಹೆಂಡತಿ ಅನುಮಾನಪಟ್ಟುಕೊಂಡಿದ್ದಕ್ಕೆ ನನಗೆ ತುಂಬಾ ವ್ಯಥೆ ಆಯಿತು. ನನ್ನನ್ನು ಸರಿಯಾಗಿ ಅರ್ಥ ಮಾಡಿಕೊಂಡಿರುವವನೆಂದರೆ ಅವನೊಬ್ಬನೇ. ಪತ್ರಿಕೆಗಳವರು ನನ್ನ ವಿಚಾರದಲ್ಲಿ ಏನೇನೋ ಬರೆದಿದ್ದರು. ಒಂದು ಪತ್ರಿಕೆಯಂತೂ 'ಸಮಾಜ ಮಧ್ಯದಲ್ಲಿ ಈ ಪ್ರಾಣಿ ಇರುವುದಕ್ಕಿಂತ ಹುಚ್ಚಾಸ್ಪತ್ರೆಯಲ್ಲಿರುವುದೇ ಮೇಲು'. ಇನ್ನೊಂದು ಪತ್ರಿಕೆ 'ಇಷ್ಟು ಕಾಗದ ಮಸಿ ಹಾಳು ಮಾಡುವುದಕ್ಕೆ ಈ ಲೇಖಕರಿಗೆ ಹೇಗೆ ಮನಸ್ಸು ಬಂದಿತೊ !' ಎಂದು ಮುಮ್ಮಲ ಮರುಗಿದ್ದರು. ಗಹನ ವಿಷಯಗಳು ಅರ್ಥವಾಗದಿದ್ದರೆ ಜನ ಏನಾದರೂ ಆಡಿಕೊಳ್ಳುತ್ತಾರೆ. ಸೂರ್ಯನ ಮೇಲೆ ಉಗುಳಿದರೆ ? ಆನೆ ಹೋಗುತ್ತೆ, ನಾಯಿ ಬಗುಳುತ್ತೆ ಮುಂತಾದ ಗಾದೆಗಳನ್ನು ನೆನಪಿಗೆ ತಂದುಕೊಂಡು ಸುಮ್ಮನಾದೆ.

ಸುಬ್ಬು ಕೇಳಿದ ಪ್ರಶ್ನೆಗಳಿಗೆಲ್ಲ ಸಾವಧಾನವಾಗಿ ವಿವರಗಳನ್ನು ಕೊಟ್ಟೆ. ನನ್ನ ಸಾಹಿತ್ಯ ರಾಶಿಯನ್ನು ಅವನಿಗೆ ತೋರಿಸಿದೆ. ನನ್ನ ಕವಿತೆಗಳನ್ನು ನೋಡಿ ನಿಜಕ್ಕೂ ಅವನು ದಿಗಿಲುಗೊಂಡ. ನಾನು ಇದುವರೆಗೆ ಹನ್ನೆರಡು ಪುಸ್ತಕಗಳನ್ನು ಬರೆದಿದ್ದೇನೆ. ಅದರಲ್ಲಿ ಒಂದೋ ಎರಡೋ ಪುಸ್ತಕಗಳನ್ನು ಮಾತ್ರ ಪ್ರಕಾಶಕರು ಅಚ್ಚು ಹಾಕಿದ್ದಾರೆ. ಉಳಿದವನ್ನೆಲ್ಲ ನಾನೇ ಅಚ್ಚು ಹಾಕಿಸಿದ್ದೇನೆ (ಪ್ರಕಾಶಕರು ಸಿಕ್ಕದಿದ್ದುದರಿಂದ). ಈ ಕೆಲಸಕ್ಕಾಗಿ ನನ್ನ ಸ್ವಂತ ಹತ್ತು ಎಕರೆ ಗದ್ದೆ ಮಾರಾಟ ಮಾಡಿದ್ದಲ್ಲದೆ ನನ್ನ ಮಾವನವರಿಂದ ಎರಡು ಸಾವಿರ ರೂಪಾಯಿ ಸಾಲ ಮಾಡಿದ್ದೇನೆ. ಅವರ ಋಣ ಇನ್ನೂ ತೀರದ್ದರಿಂದ ಅವರಿಗೆ ನಾನು ಇನ್ನೂ ಚಿರಋಣಿಯಾಗಿದ್ದೇನೆ.

ಸುಬ್ಬು ಸ್ವಲ್ಪ ಹೊತ್ತು ಸುಮ್ಮನಿದ್ದ. ಅವನ ದೃಷ್ಟಿ ಕಿಟಕಿಯಾಚೆ ಏನನ್ನೋ ಹುಡುಕುತ್ತಿತ್ತು. "ಕಿಟ್ಟಿ, ನೀನು ಇಷ್ಟು ದೊಡ್ಡವನೆಂಬುದು ನನಗೆ ಗೊತ್ತಿರಲಿಲ್ಲ. ನಿನ್ನ ಪುಸ್ತಕದ ಒಂದು ಸೆಟ್ ಕೊಡು, ಓದಿ ಕೊಡುತ್ತೇನೆ. ನೀನು ಬರೆದ ಪುಸ್ತಕಗಳನ್ನು ನಾನು ಓದಿಲ್ಲ ಅಂತ ಹೇಳಿದರೆ ಜನ ನಕ್ಕು ಬಿಡುತ್ತಾರೆ" ಎಂದು ಹೇಳಿದ.

ಅಲಮಾರಿನಿಂದ ಒಂದು ಸೆಟ್ ಪುಸ್ತಕಗಳನ್ನು ತೆಗೆದೆ. ಅದರಲ್ಲಿ

'ಗೆಳೆಯ ಸುಬ್ಬುವಿಗೆ, ಕಿಟ್ಟಿಯ ವಿಶ್ವಾಸಪೂರ್ವಕ ಕಾಣಿಕೆ' ಎಂದು ಪ್ರತಿ ಪುಸ್ತಕದಲ್ಲಿಯೂ ಬರೆದು ಅಂದಿನ ತಾರೀಖು ಹಾಕಿಕೊಟ್ಟೆ. ಸುಬ್ಬು ಮನೆಗೆ ಹೊರಡುವ ಮುನ್ನ ಹೇಳಿದ: "ಕಿಟ್ಟಿ, ಇದು ನನ್ನ ಜನ್ಮದಲ್ಲಿಯೇ ಶುಭ ದಿನ. ನನ್ನ ಆಪ್ತಮಿತ್ರನ ಸಾಹಿತ್ಯ ಕೃತಿಗಳು—ಅದೂ ಅವನ ಸ್ವಹಸ್ತಾಕ್ಷರಗಳಿಂದ ಅಂಕಿತ ಹಾಕಿಕೊಟ್ಟವು—ನನ್ನ ಕಂಕುಳಲ್ಲಿ ಇವೆ ಎಂದರೆ ನನಗೆ ಹೆಮ್ಮೆ!" ನನ್ನ ಕಣ್ಣಿಂದ ಎರಡು ಹನಿಗಳು ಉದುರಿದುವು.

ಸುಬ್ಬು ಹೋದ ಮರುಗಳಿಗೆಯಲ್ಲಿಯೇ ನನ್ನ ಹೆಂಡತಿ ಪ್ರತ್ಯಕ್ಷಳಾದಳು (ತಮಿಳು ಚಿತ್ರದಲ್ಲಿ ದೇವರು ಪ್ರತ್ಯಕ್ಷವಾಗುವಂತೆ). "ಸರಿ, ಸುಬ್ಬು ಏನು ಟೋಪಿ ಹಾಕಿದ!" "ಎಲೇ, ಹಾಗೆಲ್ಲ ಅಪದ್ಧ ಆಡಬೇಡ. ಅವನು ನನ್ನ ಆಪ್ತ ಸ್ನೇಹಿತ. ನನ್ನ ಪುಸ್ತಕಗಳನ್ನು ಓದಿರಲಿಲ್ಲವಂತೆ. ಒಂದು ಸೆಟ್ ಕೊಟ್ಟೆ ಅಷ್ಟೇ." "ಸರಿ, ಅವನು ಸುಮ್ಮನೇ ಬರುವವನಲ್ಲ ಎಂಬುದು ನನಗೆ ಗೊತ್ತು" ಅಂತ ಕತ್ತು ಕೊಂಕು ಮಾಡಿದಳು.

ಮಾರನೆಯ ದಿನ 'ಆವಾರ' ಚಿತ್ರಕ್ಕೆ ಹೋಗಬೇಕೆಂದು ನನ್ನ ಹೆಂಡತಿ ಪದ್ಧತಿ ಪ್ರಕಾರ ಹಟ ಹಿಡಿದಳು. ಆವಾರವನ್ನು ಇನ್ನು ಯಾವ ವಾರದಲ್ಲಿ ಯಾದರೂ ನೋಡಿದರಾಯಿತೆಂದು ಹೇಳಿದರೂ ಕೇಳಲಿಲ್ಲ. ಹೊರಟೆವು.

ಚಿತ್ರ ಮೆಜಸ್ಟಿಕ್ ಚಿತ್ರಮಂದಿರದಲ್ಲಿ ನಡೆಯುತ್ತಿತ್ತು. ಚಿತ್ರ ನೋಡಿ ಹೊರಕ್ಕೆ ಬಂದು ಯಾವ ವಾಹನದಲ್ಲಿ ಹೋಗಬೇಕೆಂದು ಯೋಚಿಸುತ್ತಿದ್ದೆ. ಅಷ್ಟು ಹೊತ್ತಿಗೆ ನನ್ನ ಹೆಂಡತಿ "ಐ" ಅಂದಳು. "ಎಲೇ, ಜನರನ್ನು ನೋಡಿ ಹಾಗೆ ಐ, ಉಯ್, ಅನ್ನಬಾರದು" ಎಂತ ಹೇಳಿದೆ. "ಥೂ, ನಾನಾರನ್ನೂ ನೋಡಿ ಹಾಗೆ ಹೇಳಲಿಲ್ಲ. ಅಲ್ಲಿ ನೋಡಿ" ಅಂತ ಬೆರಳು ತೋರಿದಳು. ಫುಟ್‌ಪಾತ್‌ನ ಅಂಗಡಿ ಅದು. ನೇರವಾಗಿ ಇಬ್ಬರೂ ಅಲ್ಲಿಗೆ ಹೋದೆವು. ಜಲಶಿಲ್ಪೀ ಹಲ್ಲೀಶಕುನ, ಶುಕ್ರವಾರದ ಗೌರಿ ಹಾಡು, ಶನಿವಾರದ ಗೌರಿ ಹಾಡು, ಅನಂತಪದ್ಮನಾಭ ವ್ರತ, ಶಿರಿಯಾಳ ಮಹಾತ್ಮೆ—ಈ ಪುಸ್ತಕಗಳೊಂದಿಗೆ ನನ್ನ ಪುಸ್ತಕಗಳೂ ಇದ್ದುವು! ನಗರಗಳಲ್ಲಿನ ದೊಡ್ಡ ಡಿಪೋಗಳಲ್ಲಿನ ಅಲಮಾರುಗಳಲ್ಲಿ ರಂಜಿಸುತ್ತಿದ್ದ ನನ್ನ ಪುಸ್ತಕಗಳು ಫುಟ್‌ಪಾತಿಗೆ ಹೇಗೆ ಬಂದಿಳಿದವೆಂದು ನನಗೆ ಆಶ್ಚರ್ಯವಾಯಿತು. ಒಂದು ಪುಸ್ತಕ ತೆಗೆದು ನೋಡಿದೆ. ಸುಬ್ಬುವಿಗೆ ಅಂಕಿತ ಹಾಕಿಕೊಟ್ಟ ಪುಸ್ತಕ, ಎಲ್ಲ ಪುಸ್ತಕಗಳೂ ಅವೇ ಆಗಿದ್ದವು!